The Canarese Almanac 1870.

ಕಂನಡ

ಪಂಚಾಂಗಪತ್ರ.

ಕ್ರಿಸ್ತಶಕ ೧೮೭೦.

ಹಿಂದು:

ಶಾಲಿವಾಹನ ಶಕ ೧೭೯೧—೧೭೯೨.

ಶುಕ್ಲ ಸಂವತ್ಸರದ ಅಂತ್ಯ, ಪ್ರಮೋದೂತ ಸಂವತ್ಸರದ ಆದಿ.

ವಿಕ್ರಮಾದಿತ್ಯನ ಶಕ ೧೯೨೬—೧೯೨೭.

ಕೊಲ್ಲ ೧೦೪೫—೧೦೪೬.

ಮಹಮ್ಮದಿ:

ಹಿಜರಿ ೧೨೮೬—೧೨೮೭.

ಫಸಲಿ ೧೨೭೯—೧೨೮೦.

MANGALORE:

PRINTED BY STOLZ & REUTHER, BASEL MISSION PRESS.

ನವ ವಾದ್ಯಗಳ ತಂದು, ನವ ನುಡಿಗಳಂ ಗೈದು,
ಸವಿ ರಾಗವನ್ನೆತ್ತಿ, ನವ ಮೇಳದೊಳಗೆ ಕಲ
ರವ ಕೇಳಿಸಿರನಂತನವದಾನದಾತನಹ ದೇವರಂ ಕೊಂಡಾಡಿರೀ! ||
ಅವನಮಿತ ದಯೆಯರಿಯದ ಕೃತಘ್ನ ಪುರುಷನು ಪ
ಶುವಿಗಿಂತ ಕಡೆ! ನೀವು ನುತಿಸಿರೆಲೆ ನೀವೆಲ್ಲ
ರವಲಂಬಿತಾತ್ಮರಾಗಿಹ ದೇವರ ಕೃತಜ್ಞ ಭಾವದಿಂದಿರುಳು ಹಗಲೂ! ||೧||

ಶಕ್ತಿಯನ್ನಾತ್ಮಕ್ಕೆ ಕೊಟ್ಟು ಧೈರ್ಯವನುಳಿಸಿ
ರಕ್ತವಂ ನಾಡಿಗಳೊಳಗೆ ನಡಿಸುತುಸುರನತಿ
ರಿಕ್ತ ವೈಚಿತ್ರ್ಯದಿಂದಾಡಿಸುತ್ತಾರೋಗ್ಯವೀಯುತಿದ್ದವ ದೇವರೇ! ||
ಭುಕ್ತಸದ್ಭೋಗದಾಯಕನವನೆ! ಪೋಷಣಕೆ
ಯುಕ್ತ ಜಲವನ್ನನ್ನವಸ್ತ್ರಾದಿಯನ್ನು ದಿನ
ನಕ್ತ ನಿರ್ವಿಘ್ನವನ್ನಿತ್ತವನು ದೇವರೆಲೆ ಚಂದದಿಂ ಹೊಗಳಿರವನಾ! ||೨||

ಗಗನಾಬ್ದಗಳು ಕೂಡಿ ಹೊಲ ಗದ್ದೆ ವನಗಳಿಗೆ
ಮಿಗು ಸಾರ ಸುರಿಸಿ ಬೆಳೆ ತೀವಿದುದದಾರ ದಯೆ?
ನಗರ ಪತ್ತನಗಳೂರ್ ಗ್ರಾಮ ಹಳ್ಳಿಗಳೆಲ್ಲ ರಕ್ಷಿಸಿದ ಕೃಪೆ ಯಾರದೂ? ||
ಜಗಳಕಲಹಾದಿ ಸಂಕಷ್ಟವೀ ಪ್ರಾಂತಕ್ಕೆ
ತಗಲದೆ ಸುಶಾಂತಿ ನಡೆದದು ಯಾರ ಪಾಲನವು?
ಮಗ ಮಗಳು ವನಿತೆ ಮೊದಲಾದಿಷ್ಟರೆಲ್ಲರಂ ಸುಖದಲಿರಿಸಿದವ
ನಾರೂ? ||೩||

ಸರ್ವಕೀರ್ತ್ಯನು ಸರ್ವಸೇವ್ಯನಹ ನೀ, ದೇವ!
ಇರ್ವ ಸರ್ವಾಶಿಸ್ಸು ನಿನ್ನ ಕರುಣೋದ್ಭವವೆ!
ಉರ್ವಭೂದಿವಲೋಕಪರಿಪಾಲರಾಜನು ಪ್ರೇಮಸಾಗರನು ನೀನೇ! ||
ಗರ್ವ ಬಿಟ್ಟಖಿಲರೆಲೆ ವೀಣಾದಿ ವಾದ್ಯದೊಳೆ
ಪರ್ವವಿದ್ದಂತೆ ನುತಿಬಲಿಗಳನ್ನರ್ಪಿಸಿರಿ!
ನಿರ್ವಚನರಾಗಿರಲು ಬೇಡ! ಬೇಡ ಕೃತಘ್ನ ಭಾವ! ದೇವರ
ನುತಿಸಿರೀ! ||೪||

JANUARY.

31 DAYS.



ಜನವರಿ.

೩೧ ದಿವಸಗಳು.

🌑 ಮಾರ್ಗಶಿರ ಅಮಾವಾಸೆ, ೧ ಜನವರಿ. 🌕 ಪುಷ್ಯ ಪೂರ್ಣಿಮಿ, ೧೭ ಜನವರಿ. 🌑 ಪುಷ್ಯ ಅಮಾವಾಸೆ, ೩೧ ಜನವರಿ.

ಅವನನ್ನು ಹುಡುಕುವವರೆಲ್ಲರ ಮೇಲೆ, ಒಳ್ಳೇದು ಆಗುವದಕ್ಕೆ,
ನಮ್ಮ ದೇವರ ಕೈ ಉಂಟು. ಎಜ್ರ. ೮, ೨೨.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	S	೧	ಶ	ಮಾರ್ಗ. ಬ.	🌑	೨	ಮೂ.	೩೨	ಧನು.	೧೯	ಜಮಾಲಾವ್.	೨೮
2	SUN	೨	ಆ	ಪುಷ್ಯ ಶುದ್ಧ.	೧	೫೭III	ಪೂ.	೩೧I		೨೦		೨೯
3	M	೩	ಚ		೨	೫೮	ಉ.	೩೨		೨೧		೩೦
4	TU	೪	ಮ		೩	೫೮II	ಶ್ರ.	೩೪		೨೨	ಜಮಾಖ್.	೧
5	W	೫	ಬು		೪	೬೦	ಧ.	೩೭I		೨೩		೨
6	TH	೬	ಗು		೪	೧	ಶ.	೪೧I		೨೪		೩
7	F	೭	ಶು		೫	೪II	ಪೂ.	೪೬II		೨೫		೪
8	S	೮	ಶ		೬	೯	ಉ.	೫೨I		೨೬		೫
9	SUN	೯	ಆ		೭	೧೪	ರೇ.	೫೮III		೨೭		೬
10	M	೧೦	ಚ		೮	೧೯I	ಅ.	೬೦		೨೮		೭
11	TU	೧೧	ಮ		೯	೨೪II	ಅ.	೫		೨೯		೮
12	W	೧೨	ಬು		೧೦	೨೯	ಭ.	೧೧		೩೦		೯
13	TH	೧೩	ಗು		೧೧	೩೩	ಕೃ.	೧೬	ಮಕರ.	೧		೧೦
14	F	೧೪	ಶು		೧೨	೩೬	ರೋ.	೨೦III		೨		೧೧
15	S	೧೫	ಶ		೧೩	೩೭I	ಮೃ.	೨೪		೩		೧೨
16	SUN	೧೬	ಆ		೧೪	೩೭II	ಆ.	೨೫III		೪		೧೩
17	M	೧೭	ಚ		🌕	೩೬II	ಪು.	೨೬I		೫		೧೪
18	TU	೧೮	ಮ	ಪುಷ್ಯ ಬಹುಳ.	೧	೩೪I	ಪು.	೨೫III		೬		೧೫
19	W	೧೯	ಬು		೨	೩೧	ಆ.	೨೩II		೭		೧೬
20	TH	೨೦	ಗು		೩	೨೪III	ಮ.	೨೨		೮		೧೭
21	F	೨೧	ಶು		೪	೨೨	ಪು.	೨೦		೯		೧೮
22	S	೨೨	ಶ		೫	೨೬III	ಉ.	೧೫I		೧೦		೧೯
23	SUN	೨೩	ಆ		೬	೧೧	ಹ.	೧೧I		೧೧		೨೦
24	M	೨೪	ಚ		೭	೫	ಚಿ.	೯II		೧೨		೨೧
25	TU	೨೫	ಮ		೯	೫೪	ಸ್ವಾ.	೩		೧೩		೨೨
26	W	೨೬	ಬು		೧೦	೪೮	ಅ.	೫೬		೧೪		೨೩
27	TH	೨೭	ಗು		೧೧	೪೪II	ಜ್ಯೇ.	೫೩I		೧೫		೨೪
28	F	೨೮	ಶು		೧೨	೪೦III	ಮೂ.	೫೧II		೧೬		೨೫
29	S	೨೯	ಶ		೧೩	೩೮	ಪೂ.	೫೧		೧೭		೨೬
30	SUN	೩೦	ಆ		೧೪	೩೬III	ಉ.	೫೧I		೧೮		೨೭
31	M	೩೧	ಚ		🌑	೩೬III	ಶ್ರ.	೫೨III		೧೯		೨೮

FEBRUARY.

28 DAYS.

🌕 ಮಾಘ ಪೂರ್ಣಿಮಿ,

೧೬ ಫೆಬ್ರವರಿ.



ಫೆಬ್ರವರಿ.

೨೮ ದಿವಸಗಳು.

ಯಾರ ಅನ್ಯಾಯಗಳು ಪರಿಹರಿಸಲ್ಪಟ್ಟವೆಯೋ, ಯಾರ ಪಾಪಗಳು ಮುಚ್ಚಲ್ಪಟ್ಟವೆಯೋ, ಅವರೇ ಭಾಗ್ಯವಂತರು. ರೋಮಾ. ೪, ೭.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಾಮ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	TU	೧	ಮ		೧	೩೭	ಧ.	೫೫II		೨೦	ರಜಬ್.	೨೯
2	W	೨	ಬು		೨	೩೯I	ಶ.	೫೯III		೨೧		೩೦
3	TH	೩	ಗು		೩	೪೩II	ಪೂ.	೬೦		೨೨		೧
4	F	೪	ಶು		೪	೪೮	ಪೂ.	೪III		೨೩		೨
5	S	೫	ಶ		೫	೫೩	ಉ.	೧೦III	ಮಕರ.	೨೪		೩
6	SUN	೬	ಆ		೬	೫೮I	ರೇ.	೧೬II		೨೫		೪
7	M	೭	ಚ	ಮಾಘ ಶುದ್ಧ.	೭	೬೦	ಅ.	೨೩		೨೬		೫
8	TU	೮	ಮ		೭	೩II	ಭ.	೨೯II		೨೭		೬
9	W	೯	ಬು		೮	೮	ಕೃ.	೩೫		೨೮		೭
10	TH	೧೦	ಗು		೯	೧೨	ರೋ.	೩೯I		೨೯		೮
11	F	೧೧	ಶು		೧೦	೧೫	ಮೃ.	೪೩III		೧		೯
12	S	೧೨	ಶ		೧೧	೧೫III	ಆ.	೪೫		೨		೧೦
13	SUN	೧೩	ಆ		೧೨	೧೫III	ಪು.	೪೬		೩		೧೧
14	M	೧೪	ಚ		೧೩	೧೪II	ಪು.	೪೫II		೪	ಷಾಬಾನ್.	೧೨
15	TU	೧೫	ಮ		೧೪	೧೨	ಆ.	೪೪I		೫		೧೩
16	W	೧೬	ಬು		🌕	೯	ಮ.	೪೨		೬		೧೪
17	TH	೧೭	ಗು		೧	೪III	ಪು.	೪೦		೭		೧೫
18	F	೧೮	ಶು		೩	೫೪I	ಉ.	೩೬		೮		೧೬
19	S	೧೯	ಶ		೪	೪೮I	ಹ.	೩೨	ಕುಂಭ.	೯		೧೭
20	SUN	೨೦	ಆ		೫	೪೩II	ಚಿ.	೨೭III		೧೦		೧೮
21	M	೨೧	ಚ		೬	೩೭	ಸ್ವಾ.	೨೩III		೧೧		೧೯
22	TU	೨೨	ಮ	ಮಾಘ ಬಹುಳ.	೭	೩೧I	ವಿ.	೨೦		೧೨		೨೦
23	W	೨೩	ಬು		೮	೨೬I	ಅ.	೧೬		೧೩		೨೧
24	TH	೨೪	ಗು		೯	೨೨	ಜ್ಯೇ.	೧೩III		೧೪		೨೨
25	F	೨೫	ಶು		೧೦	೧೮I	ಮೂ.	೧೧III		೧೫		೨೩
26	S	೨೬	ಶ		೧೧	೧೫III	ಪೂ.	೧೦II		೧೬		೨೪
27	SUN	೨೭	ಆ		೧೨	೧೪I	ಉ.	೧೦III		೧೭		೨೫
28	M	೨೮	ಚ		೧೩	೧೪	ಶ್ರ.	೧೧II		೧೮		೨೬

MARCH.

31 DAYS.

🌑 ಮಾಘ ಅಮಾವಾಸೆ, ೨ ಮಾರ್ಚ್.

ಮಾರ್ಚ್.

೩೧ ದಿವಸಗಳು.

🌕 ಫಾಲ್ಗುಣ ಪೂರ್ಣಮಿ, ೧೭ ಮಾರ್ಚ್.

ಯೆಹೋವನ ಆಲೋಚನೆಯು ಯುಗಯುಗಕ್ಕೂ, ಅವನ ಹೃದಯದ ಯೋಚನೆಗಳು ತಲತಲಾಂತರಕ್ಕೂ ನಿಲ್ಲುವವು. ಕೀರ್ತ. ೩೩, ೧೧.

ಇಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	TU	೧	ಮ	ಮಾ. ಕೃ.	೧೪	೧೫I	ಧ.	೧೫II		೧೯	ಶಾಬಾನು.	೨೭
2	W	೨	ಬು		🌑	೧೮	ಶ.	೧೮I		೨೦		೨೮
3	TH	೩	ಗು		೧	೨೧I	ಪೂ.	೨೩I		೨೧		೨೯
4	F	೪	ಶು		೨	೨೫III	ಉ.	೨೮III		೨೨		೧
5	S	೫	ಶ		೩	೩೦III	ರೇ.	೩೫I		೨೩		೨
6	SUN	೬	ಆ		೪	೩೬	ಅ.	೪೧III	ಕುಂಭ.	೨೪		೩
7	M	೭	ಚ		೫	೪೦III	ಭ.	೪೭III		೨೫		೪
8	TU	೮	ಮ	ಫಾಲ್ಗುಣ ಶು.	೬	೪೫	ಕೃ.	೫೩I		೨೬		೫
9	W	೯	ಬು		೭	೪೮III	ರೋ.	೫೮		೨೭		೬
10	TH	೧೦	ಗು		೮	೫೧II	ಮೃ.	೬೦		೨೮		೭
11	F	೧೧	ಶು		೯	೫೨II	ಮೃ.	೨		೨೯		೮
12	S	೧೨	ಶ		೧೦	೫೨II	ಆ.	೪I		೩೦		೯
13	SUN	೧೩	ಆ		೧೧	೫೧	ಪು.	೬		೧		೧೦
14	M	೧೪	ಚ		೧೨	೪೭II	ಪು.	೪III		೨		೧೧
15	TU	೧೫	ಮ		೧೩	೪೫	ಆ.	೪II		೩		೧೨
16	W	೧೬	ಬು		೧೪	೪೧I	ಮ.	೨II		೪		೧೩
17	TH	೧೭	ಗು		🌕	೩೬III	ಹು.	I		೫	ರಂಜಾನು.	೧೪
18	F	೧೮	ಶು		೧	೩೧	ಹ.	೫೩		೬		೧೫
19	S	೧೯	ಶ		೨	೨೫	ಚಿ.	೪೯I		೭		೧೬
20	SUN	೨೦	ಆ		೩	೧೯I	ಸ್ವಾ.	೪೫		೮		೧೭
21	M	೨೧	ಚ		೪	೧೩II	ವಿ.	೪೧	ಮೀನ.	೯		೧೮
22	TU	೨೨	ಮ		೫	೭III	ಅ.	೩೭II		೧೦		೧೯
23	W	೨೩	ಬು	ಫಾಲ್ಗುಣ ಕೃ.	೬	೨	ಜ್ಯೇ.	೩೪		೧೧		೨೦
24	TH	೨೪	ಗು		೮	೫೪	ಮೂ.	೩೨		೧೨		೨೧
25	F	೨೫	ಶು		೯	೫೧I	ಪೂ.	೩೦II		೧೩		೨೨
26	S	೨೬	ಶ		೧೦	೫೦	ಉ.	೩೦II		೧೪		೨೩
27	SUN	೨೭	ಆ		೧೧	೪೯III	ಶ್ರ.	೩೧II		೧೫		೨೪
28	M	೨೮	ಚ		೧೨	೫೦III	ಧ.	೩೩II		೧೬		೨೫
29	TU	೨೯	ಮ		೧೩	೫೩	ಶ.	೩೭		೧೭		೨೬
30	W	೩೦	ಬು		೧೪	೫೬I	ಪೂ.	೪೧III		೧೮		೨೭
31	TH	೩೧	ಗು		೩೦	೬೦	ಉ.	೪೭		೧೯		೨೮

APRIL.

30 DAYS.



ಎಪ್ರಿಲ್.

೩೦ ದಿವಸಗಳು.

● ಫಾಲ್ಗುಣ ಅಮಾವಾಸೆ, ೧ ಎಪ್ರಿಲ್.   ☉ ಚೈತ್ರ ಪೂರ್ಣಿಮಿ, ೧೫ ಎಪ್ರಿಲ್.   ● ಚೈತ್ರ ಅಮಾವಾಸೆ, ೩೦ ಎಪ್ರಿಲ್.

ಪಿಶಾಚನ ಕ್ರಿಯೆಗಳನ್ನು ಲಯ ಮಾಡುವದಕ್ಕೋಸ್ಕರವೇ ದೇವರ ಮಗನು ಪ್ರತ್ಯಕ್ಷವಾದನು. ೧ ಯೋಹಾ. ೩, ೮.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ಸಂಜ್ಞೆ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	F	೧	ಶು	ಫಾಲ್ಗುಣ	●	III	ರೇ.	೫೩II		೨೦	ಷಾಬಾನ್.	೨೯
2	S	೨	ಶ		೧	೬	ಅ.	೬೦		೨೧		೩೦
3	SUN	೩	ಆ		೨	೧೧	ಭ.	೬೦		೨೨	ರಮಜಾನ್.	೧
4	M	೪	ಚ		೩	೧೫III	ಭ.	೬I		೨೩		೨
5	Tu	೫	ಮ		೪	೨೦	ಕೃ.	೧೨	ಮೀನ.	೨೪		೩
6	W	೬	ಬು		೫	೨೪	ರೋ.	೧೭		೨೫		೪
7	Th	೭	ಗು		೬	೨೬	ಮೃ.	೨೧		೨೬		೫
8	F	೮	ಶು	ಚೈತ್ರ ಶು.	೭	೨೭	ಆ.	೨೩III		೨೭		೬
9	S	೯	ಶ		೮	೨೬III	ಪು.	೨೫I		೨೮		೭
10	SUN	೧೦	ಆ		೯	೨೫III	ಪು.	೨೫II		೨೯		೮
11	M	೧೧	ಚ		೧೦	೨೪II	ಆ.	೨೪		೩೦		೯
12	Tu	೧೨	ಮ		೧೧	೨೦	ಮ.	೨೩		೧		೧೦
13	W	೧೩	ಬು		೧೨	೧೫	ಪೂ.	೨೦I		೨		೧೧
14	Th	೧೪	ಗು		೧೩	೧೦	ಉ.	೨೭		೩		೧೨
15	F	೧೫	ಶು		☉	೪II	ಹ.	೧೩		೪		೧೩
16	S	೧೬	ಶ		೧	೫೨I	ಚಿ.	೯		೫		೧೪
17	SUN	೧೭	ಆ		೨	೪೮I	ಸ್ವಾ.	೫		೬		೧೫
18	M	೧೮	ಚ		೩	೪೧I	ವಿ.	೧		೭		೧೬
19	Tu	೧೯	ಮ		೪	೩೫III	ಜ್ಯೇ.	೫೪I		೮		೧೭
20	W	೨೦	ಬು		೫	೩೧I	ಮೂ.	೫೨		೯		೧೮
21	Th	೨೧	ಗು		೬	೨೭III	ಪೂ.	೫೦I	ಮೇಷ.	೧೦		೧೯
22	F	೨೨	ಶು		೭	೨೫	ಉ.	೫೦		೧೧		೨೦
23	S	೨೩	ಶ	ಚೈತ್ರ ಬ.	೮	೨೩II	ಶ್ರ.	೫೧II		೧೨		೨೧
24	SUN	೨೪	ಆ		೯	೨೩	ಧ.	೫೨III		೧೩		೨೨
25	M	೨೫	ಚ		೧೦	೨೪	ಶ.	೫೬		೧೪		೨೩
26	Tu	೨೬	ಮ		೧೧	೨೬I	ಪೂ.	೬೦		೧೫		೨೪
27	W	೨೭	ಬು		೧೨	೨೯III	ಪೂ.	I		೧೬		೨೫
28	Th	೨೮	ಗು		೧೩	೩೪	ಉ.	೫III		೧೭		೨೬
29	F	೨೯	ಶು		೧೪	೩೮III	ರೇ.	೧೧III		೧೮		೨೭
30	S	೩೦	ಶ		●	೪೩III	ಅ.	೧೮I		೧೯		೨೮

MAY.		**ಮೇ.**
31 DAYS.		೩೧ ದಿವಸಗಳು.
🌕 ವೈಶಾಖ ಪೂರ್ಣಮಿ, ೧೫ ಮೇ.		🌑 ವೈಶಾಖ ಅಮಾವಾಸೆ, ೩೦ ಮೇ.

ಯೆಹೋವನು ಉನ್ನತನಾಗಿದ್ದು, ದೀನನನ್ನು ನೋಡುತ್ತಾನೆ;
ಎತ್ತರವಾದವನನ್ನು ದೂರದಿಂದ ತಿಳುಕೊಳ್ಳುತ್ತಾನೆ. ಕೀರ್ತ. ೧೩೮, ೬.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	SUN	೧	ಆ		೧	೪೮II	ಭ.	೨೪II		೨೦	ರಜ.	೨೯
2	M	೨	ಚ		೨	೫೨III	ಕೃ.	೩೦II		೨೧		೩೦
3	Tu	೩	ಮ		೩	೫೬II	ರೋ.	೩೫III		೨೨		೧
4	W	೪	ಬು		೪	೫೯III	ಮೃ.	೪೦		೨೩		೨
5	Th	೫	ಗು		೫	೫೯III	ಆ.	೪೩		೨೪		೩
6	F	೬	ಶು		೬	೫೬	ಪು.	೪೪	ಮೇಷ	೨೫		೪
7	S	೭	ಶ	ವೈಶಾಖ ಶು.	೭	೫೫III	ಪು.	೪೩I		೨೬		೫
8	SUN	೮	ಆ		೮	೫೨	ಆ.	೪೧III		೨೭		೬
9	M	೯	ಚ		೯	೪೭I	ಮ.	೩೯I		೨೮		೭
10	Tu	೧೦	ಮ		೧೦	೪೨	ಪು.	೩೬		೨೯		೮
11	W	೧೧	ಬು		೧೧	೩೬II	ಉ.	೩೨II		೩೦		೯
12	Th	೧೨	ಗು		೧೨	೩೦II	ಹ.	೨೮II		೩೧		೧೦
13	F	೧೩	ಶು		೧೩	೩೦III	ಚಿ.	೩೦		೧		೧೧
14	S	೧೪	ಶ		೧೪	೨೪II	ಸ್ವಾ.	೨೬		೨		೧೨
15	SUN	೧೫	ಆ		🌕	೧೮III	ವಿ.	೨೨		೩		೧೩
16	M	೧೬	ಚ		೧	೧೩	ಅ.	೧೮I		೪	ಶಬಾನ	೧೪
17	Tu	೧೭	ಮ		೨	೭III	ಜ್ಯೇ.	೧೫I		೫		೧೫
18	W	೧೮	ಬು		೩	೩	ಮೂ.	೧೨II		೬		೧೬
19	Th	೧೯	ಗು		೫	೫೬I	ಪೂ.	೧೦III		೭		೧೭
20	F	೨೦	ಶು		೬	೫೪III	ಉ.	೧೦		೮		೧೮
21	S	೨೧	ಶ		೭	೫೪II	ಶ್ರ.	೧೦II		೯		೧೯
22	SUN	೨೨	ಆ	ವೈಶಾಖ ಬ.	೮	೫೫II	ಧ.	೧೨I	ವೃಷಭ	೧೦		೨೦
23	M	೨೩	ಚ		೯	೫೭I	ಶ.	೧೫		೧೧		೨೧
24	Tu	೨೪	ಮ		೧೦	೬೦	ಪೂ.	೧೯I		೧೨		೨೨
25	W	೨೫	ಬು		೧೦	I	ಉ.	೨೪I		೧೩		೨೩
26	Th	೨೬	ಗು		೧೧	೩I	ರೇ.	೩೦I		೧೪		೨೪
27	F	೨೭	ಶು		೧೨	೯I	ಅ.	೩೬II		೧೫		೨೫
28	S	೨೮	ಶ		೧೩	೧೪II	ಭ.	೪೩		೧೬		೨೬
29	SUN	೨೯	ಆ		೧೪	೧೯	ಕೃ.	೪೯I		೧೭		೨೭
30	M	೩೦	ಚ		🌑	೨೩I	ರೋ.	೫೪II		೧೮		೨೮
31	Tu	೩೧	ಮ	ಜ್ಯೇ. ಶು.	೧	೨೬III	ಮೃ.	೫೯I		೧೯		೨೯

JUNE.		ಜೂನ್.
30 DAYS.		೩೦ ದಿವಸಗಳು.
◯ ಜ್ಯೇಷ್ಠ ಪೂರ್ಣಮಿ, ೧೩ ಜೂನ್.		● ಜ್ಯೇಷ್ಠ ಅಮಾವಾಸೆ, ೨೮ ಜೂನ್.

ಯೆಹೋವನ ಘನವು ಯುಗಯುಗಕ್ಕೂ ಇರಲಿ; ಯೆಹೋವನು ತನ್ನ ಕೆಲಸಗಳಲ್ಲಿ ಸಂತೋಷ ಪಡಲಿ. ಕೀರ್ತ. ೧೦೪, ೩೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	W	೧	ಬು		೨	೨೯	ಆ.	೬೦		೨೦		೧
2	TH	೨	ಗು		೩	೨೯III	ಆ.	೨II		೨೧		೨
3	F	೩	ಶು		೪	೨೯III	ಪು.	೪II		೨೨		೩
4	S	೪	ಶ		೫	೨೭I	ಪು.	೫I		೨೩		೪
5	SUN	೫	ಆ		೬	೨೫III	ಆ.	೫		೨೪		೫
6	M	೬	ಚ		೭	೨೨	ಮ.	೩II		೨೫		೬
7	TU	೭	ಮ	ಜ್ಯೇಷ್ಠ ಶು.	೮	೧೭II	ಪು.	೧I	ವೃಷಭ	೨೬		೭
8	W	೮	ಬು		೯	೧೨I	ಹ.	೫೪III		೨೭		೮
9	TH	೯	ಗು		೧೦	೬III	ಚಿ.	೪೯III		೨೮		೯
10	F	೧೦	ಶು		೧೧	II	ಸ್ವಾ.	೪೬II		೨೯		೧೦
11	S	೧೧	ಶ		೧೩	೪೮II	ವಿ.	೪೨II		೩೦		೧೧
12	SUN	೧೨	ಆ		೧೪	೪೨III	ಅ.	೩೮III		೩೧		೧೨
13	M	೧೩	ಚ		◯	೩೭II	ಜ್ಯೇ.	೩೪II		೩೨		೧೩
14	TU	೧೪	ಮ		೧	೩೩I	ಮೂ.	೩೨III		೧		೧೪
15	W	೧೫	ಬು		೨	೨೯I	ಪೂ.	೩೦III		೨		೧೫
16	TH	೧೬	ಗು		೩	೨೬I	ಉ.	೩೦		೩	ಜಿಲ್ಕಾದ್.	೧೬
17	F	೧೭	ಶು		೪	೨೪II	ಶ್ರ.	೩೦		೪		೧೭
18	S	೧೮	ಶ		೫	೨೪I	ಧ.	೩೧II		೫		೧೮
19	SUN	೧೯	ಆ		೬	೨೪III	ಶ.	೩೪I		೬		೧೯
20	M	೨೦	ಚ		೭	೨೭	ಪೂ.	೩೮		೭		೨೦
21	TU	೨೧	ಮ	ಜ್ಯೇಷ್ಠ ಬ.	೮	೩೦	ಉ.	೪೨III		೮		೨೧
22	W	೨೨	ಬು		೯	೩೪	ರೇ.	೪೮III	ಮಿಥುನ	೯		೨೨
23	TH	೨೩	ಗು		೧೦	೩೮II	ಅ.	೫೪III		೧೦		೨೩
24	F	೨೪	ಶು		೧೧	೪೩I	ಭ.	೬೦		೧೧		೨೪
25	S	೨೫	ಶ		೧೨	೪೮I	ಭ.	೧I		೧೨		೨೫
26	SUN	೨೬	ಆ		೧೩	೫೨II	ಕೃ.	೭II		೧೩		೨೬
27	M	೨೭	ಚ		೧೪	೫೮	ರೋ.	೧೩		೧೪		೨೭
28	TU	೨೮	ಮ		●	೫೯II	ಮೃ.	೧೭III		೧೫		೨೮
29	W	೨೯	ಬು	ಆ. ಶು.	೧	೫೯III	ಆ.	೨೧I		೧೬		೨೯
30	TH	೩೦	ಗು		೨	೫೯I	ಪು.	೨೩III		೧೭		೩೦

JULY.

31 DAYS.

○ ಆಷಾಢ ಪೂರ್ಣಿಮಿ,
೧೨ ಜುಲಾಯಿ.



ಜುಲಾಯಿ.

೩೧ ದಿವಸಗಳು.

● ಆಷಾಢ ಅಮಾವಾಸೆ,
೨೮ ಜುಲಾಯಿ.

ಜೀವವು ಪ್ರತ್ಯಕ್ಷವಾಯಿತು, ಮತ್ತು ತಂದೆಯ ಹತ್ತರ ಇದ್ದು, ನಮಗೆ ಪ್ರತ್ಯಕ್ಷವಾದ ನಿತ್ಯಜೀವವನ್ನು ಕಂಡು, ಸಾಕ್ಷಿ ಕೊಟ್ಟು, ನಿಮಗೆ ತಿಳಿಸುತ್ತೇವೆ. ೧ ಯೋಹಾ. ೧, ೨.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ಸಂಜ್ಞೆ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	F	೧	ಶು	ಆಷಾಢ ಶುದ್ಧ.	೩	೫೫III	ಪು.	೨೬III	ಮಿಥುನ.	೧೮	ಶಬಾನ್.	೧
2	S	೨	ಶ		೪	೫೫	ಆ.	೨೪III		೧೯		೨
3	SUN	೩	ಆ		೫	೫೧II	ಮ.	೨೩I		೨೦		೩
4	M	೪	ಚ		೬	೪೭	ಪು.	೨೧I		೨೧		೪
5	Tu	೫	ಮ		೭	೪೨	ಉ.	೧೮II		೨೨		೫
6	W	೬	ಬು		೮	೩೬	ಹ.	೧೫		೨೩		೬
7	Th	೭	ಗು		೯	೨೯II	ಚಿ.	೧೧I		೨೪		೭
8	F	೮	ಶು		೧೦	೨೪	ಸ್ವಾ.	೭		೨೫		೮
9	S	೯	ಶ		೧೧	೧೮	ವಿ.	೩		೨೬		೯
10	SUN	೧೦	ಆ		೧೨	೧೨	ಜ್ಯೇ.	೫೫III		೨೭		೧೦
11	M	೧೧	ಚ		೧೩	೮II	ಮೂ.	೫೨III		೨೮		೧೧
12	Tu	೧೨	ಮ		○	೨II	ಪೂ.	೫೦II		೨೯		೧೨
13	W	೧೩	ಬು	ಆಷಾಢ ಬಹುಳ.	೧	೫೫	ಉ.	೪೯II		೩೦		೧೩
14	Th	೧೪	ಗು		೨	೫೩I	ಶ್ರ.	೪೯III		೩೧		೧೪
15	F	೧೫	ಶು		೩	೫೨III	ಧ.	೫೦II	ಕರ್ಕಾಟಕ.	೧		೧೫
16	S	೧೬	ಶ		೪	೫೩II	ಶ.	೫೩		೨		೧೬
17	SUN	೧೭	ಆ		೫	೫೫I	ಪೂ.	೫೬II		೩		೧೭
18	M	೧೮	ಚ		೬	೫೮	ಉ.	೬೦		೪		೧೮
19	Tu	೧೯	ಮ		೭	೬೦	ಉ.	೧I		೫		೧೯
20	W	೨೦	ಬು		೭	೨	ರೇ.	೬III		೬		೨೦
21	Th	೨೧	ಗು		೮	೭II	ಅ.	೧೩		೭		೨೧
22	F	೨೨	ಶು		೯	೧೧III	ಭ.	೧೯I		೮		೨೨
23	S	೨೩	ಶ		೧೦	೧೬II	ಕೃ.	೨೫III		೯		೨೩
24	SUN	೨೪	ಆ		೧೧	೨೧	ರೋ.	೩೦II		೧೦		೨೪
25	M	೨೫	ಚ		೧೨	೨೪	ಮೃ.	೩೬		೧೧		೨೫
26	Tu	೨೬	ಮ		೧೩	೨೬III	ಆ.	೪೦		೧೨		೨೬
27	W	೨೭	ಬು		೧೪	೨೮	ಪು.	೪೨III		೧೩		೨೭
28	Th	೨೮	ಗು		●	೨೭III	ಪು.	೪೪I		೧೪		೨೮
29	F	೨೯	ಶು	ಶ್ರಾ. ಶುದ್ಧ.	೧	೨೬III	ಆ.	೪೪I		೧೫		೨೯
30	S	೩೦	ಶ		೨	೨೪	ಮ.	೪೩II		೧೬	ರಮಜಾನ್.	೧
31	SUN	೩೧	ಆ		೩	೨೦II	ಪು.	೪೧II		೧೭		೨

AUGUST.		**ಅಗೋಸ್ತು.**
31 DAYS.		೩೧ ದಿವಸಗಳು.
○ ಶ್ರಾವಣ ಪೂರ್ಣಿಮೆ, ೧೧ ಅಗೋಸ್ತು.		● ಶ್ರಾವಣ ಅಮಾವಾಸೆ, ೨೬ ಅಗೋಸ್ತು.

ನಾವು ನಿನ್ನನ್ನು ಎದುರು ನೋಡುವ ಪ್ರಕಾರ,
ಯೆಹೋವನೇ, ನಿನ್ನ ಕೃಪೆಯು ನಮ್ಮ ಮೇಲೆ ಇರಲಿ. ಕೀರ್ತ. ೩೩, ೨೨.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಂ. ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	M	೧	ಚ	ಶ್ರಾವಣ ಶುದ್ಧ.	೪	೧೬	ಉ.	೩೮III	ಕರ್ಕಟಕ.	೧೮	ಜಮಾದಿಲಾವಲ್.	೩
2	Tu	೨	ಮ		೫	೧೧	ಹ.	೩೫I		೧೯		೪
3	W	೩	ಬು		೬	೫II	ಚಿ.	೩೧II		೨೦		೫
4	Th	೪	ಗು		೮	೫೩II	ಸ್ವಾ.	೨೭II		೨೧		೬
5	F	೫	ಶು		೯	೪೭I	ವಿ.	೨೩II		೨೨		೭
6	S	೬	ಶ		೧೦	೪೧II	ಅ.	೧೯II		೨೩		೮
7	SUN	೭	ಆ		೧೧	೩೬	ಜ್ಯೇ.	೧೫III		೨೪		೯
8	M	೮	ಚ		೧೨	೩೧I	ಮೂ.	೧೨III		೨೫		೧೦
9	Tu	೯	ಮ		೧೩	೨೫II	ಪೂ.	೧೦II		೨೬		೧೧
10	W	೧೦	ಬು		೧೪	೨೪I	ಉ.	೯		೨೭		೧೨
11	Th	೧೧	ಗು		○	೨೨II	ಶ್ರ.	೮III		೨೮		೧೩
12	F	೧೨	ಶು	ಶ್ರಾವಣ ಬಹುಳ.	೧	೨೧II	ಧ.	೯II		೨೯		೧೪
13	S	೧೩	ಶ		೨	೨೨I	ಶ.	೧೧III		೩೦		೧೫
14	SUN	೧೪	ಆ		೩	೨೪	ಪೂ.	೧೫		೩೧		೧೬
15	M	೧೫	ಚ		೪	೨೭	ಉ.	೧೯I		೩೨		೧೭
16	Tu	೧೬	ಮ		೫	೩೧I	ರೇ.	೨೪III	ಸಿಂಹ.	೧		೧೮
17	W	೧೭	ಬು		೬	೩೬	ಅ.	೩೦III		೨		೧೯
18	Th	೧೮	ಗು		೭	೩೯III	ಭ.	೩೭		೩		೨೦
19	F	೧೯	ಶು		೮	೪೫III	ಕೃ.	೪೩II		೪		೨೧
20	S	೨೦	ಶ		೯	೫೦I	ರೋ.	೪೯II		೫		೨೨
21	SUN	೨೧	ಆ		೧೦	೫೩III	ಮೃ.	೫೪II		೬		೨೩
22	M	೨೨	ಚ		೧೧	೫೬II	ಆ.	೫೮III		೭		೨೪
23	Tu	೨೩	ಮ		೧೨	೫೭III	ಪು.	೬೦		೮		೨೫
24	W	೨೪	ಬು		೧೩	೫೭	ಪು.	೧III		೯		೨೬
25	Th	೨೫	ಗು		೧೪	೫೬III	ಪು.	೩I		೧೦		೨೭
26	F	೨೬	ಶು		●	೫೪I	ಆ.	೩III		೧೧		೨೮
27	S	೨೭	ಶ	ಭಾದ್ರಪದ ಶುದ್ಧ.	೧	೫೦III	ಮ.	೩		೧೨		೨೯
28	SUN	೨೮	ಆ		೨	೪೬II	ಪು.	೧I		೧೩		೩೦
29	M	೨೯	ಚ		೩	೪೧II	ಹ.	೫೫II		೧೪	ಜಮಾದಿಲಾಖರ್.	೧
30	Tu	೩೦	ಮ		೪	೩೫II	ಚಿ.	೫೧II		೧೫		೨
31	W	೩೧	ಬು		೫	೩೦	ಸ್ವಾ.	೪೭III		೧೬		೩

SEPTEMBER.

30 DAYS.

🌕 ಭಾದ್ರಪದ ಪೂರ್ಣಿಮಿ,
೯ ಸಪ್ಟಂಬರ.



ಸಪ್ತಂಬರ.

೩೦ ದಿವಸಗಳು.

🌑 ಭಾದ್ರಪದ ಅಮಾವಾಸೆ,
೨೫ ಸಪ್ಟಂಬರ.

ಒಬ್ಬೊಬ್ಬ ಮನುಷ್ಯನು ಮೇಲಾಗಿರುವ ಅಧಿಕಾರಗಳಿಗೆ ವಿಧೇಯನಾಗಿರಲಿ.
ಯಾಕಂದರೆ ದೇವರಿಂದಲೇ ಹೊರ್ತು, ಯಾವ ಅಧಿಕಾರವೂ ಇಲ್ಲ. ರೋಮಾ. ೧೩, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮುಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ತೇದಿ	ತಿಂಗಳು	ತೇದಿ
1	TH	೧	ಗು	ಭಾದ್ರಪದ ಶು.	೬	೨೩II	ವಿ.	೪೩III	ಸಿಂಹ.	೧೭	ಜಮಾದಿಲಾವಲ್.	೪
2	F	೨	ಶು		೭	೧೮	ಅ.	೩೯II		೧೮		೫
3	S	೩	ಶ		೮	೧೨	ಜ್ಯೇ.	೩೬		೧೯		೬
4	SUN	೪	ಆ		೯	೬III	ಮೂ.	೩೨III		೨೦		೭
5	M	೫	ಚ		೧೦	೧III	ಪೂ.	೩೦		೨೧		೮
6	TU	೬	ಮ		೧೨	೫೫	ಉ.	೨೮II		೨೨		೯
7	W	೭	ಬು		೧೩	೫೩	ಶ್ರ.	೨೮		೨೩		೧೦
8	TH	೮	ಗು		೧೪	೫೨II	ಧ.	೩೨II		೨೪		೧೧
9	F	೯	ಶು		🌕	೫೩	ಶ.	೩೨III		೨೫		೧೨
10	S	೧೦	ಶ		೧	೫೫	ಪೂ.	೩೩I		೨೬		೧೩
11	SUN	೧೧	ಆ		೨	೫೭II	ಉ.	೩೭I		೨೭		೧೪
12	M	೧೨	ಚ		೩	೬೦	ರೇ.	೪೨III		೨೮		೧೫
13	TU	೧೩	ಮ		೩	೨	ಅ.	೪೮III		೨೯		೧೬
14	W	೧೪	ಬು		೪	೬III	ಭ.	೫೫		೩೦		೧೭
15	TH	೧೫	ಗು		೫	೧೧III	ಕೃ.	೬೦		೩೧		೧೮
16	F	೧೬	ಶು	ಭಾದ್ರಪದ ಬ.	೬	೧೬II	ಕೃ.	I	ಕನ್ಯಾ.	೧		೧೯
17	S	೧೭	ಶ		೭	೧೯III	ರೋ.	೭		೨		೨೦
18	SUN	೧೮	ಆ		೮	೨೪III	ಮೃ.	೧೨II		೩		೨೧
19	M	೧೯	ಚ		೯	೩೦	ಆ.	೧೬III		೪		೨೨
20	TU	೨೦	ಮ		೧೦	೨೯III	ಪು.	೨೦		೫		೨೩
21	W	೨೧	ಬು		೧೧	೨೯I	ಪು.	೨೬II		೬		೨೪
22	TH	೨೨	ಗು		೧೨	೨೮	ಆ.	೨೪		೭		೨೫
23	F	೨೩	ಶು		೧೩	೨೭	ಮ.	೨೨I		೮		೨೬
24	S	೨೪	ಶ		೧೪	೨೨III	ಪು.	೨೦II		೯		೨೭
25	SUN	೨೫	ಆ		🌑	೧೮	ಉ.	೧೮II		೧೦		೨೮
26	M	೨೬	ಚ	ಆಶ್ವಯುಜ ಶು.	೧	೧೩	ಹ.	೧೫I		೧೧		೨೯
27	TU	೨೭	ಮ		೨	೭III	ಚಿ.	೧೧III		೧೨	ರಜಬ್.	೧
28	W	೨೮	ಬು		೩	೧III	ಸ್ವಾ.	೭III		೧೩		೨
29	TH	೨೯	ಗು		೫	೫೦	ವಿ.	೩III		೧೪		೩
30	F	೩೦	ಶು		೬	೪೪I	ಜ್ಯೇ.	೫೪III		೧೫		೪

OCTOBER.

31 DAYS.

(ಹುಣ್ಣಿಮೆ) ಆಶ್ವೀಜ ಪೂರ್ಣಿಮ, ೯ ಒಕ್ಟೋಬರ.


ಒಕ್ತೋಬರ.

೩೧ ದಿವಸಗಳು.

(ಅಮಾವಾಸೆ) ಆಶ್ವೀಜ ಅಮಾವಾಸೆ, ೨೪ ಒಕ್ಟೋಬರ.

ಯೇಸು ಆಕಾರದಲ್ಲಿ ಮನುಷ್ಯನಾಗಿ ಕಾಣಲ್ಪಟ್ಟು, ಮರಣದ ಪರ್ಯಂತರ, ಶಿಲುಬೆಯ ಮರಣದ ಪರ್ಯಂತರವೇ ವಿಧೇಯನಾಗಿ, ತನ್ನನ್ನು ತಗ್ಗಿಸಿ ಕೊಂಡನು. ಫಿಲಿ. ೨, ೮.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	S	೧	ಶ		೭	೩೯	ಮೂ.	೫೨II		೧೬		೫
2	SUN	೨	ಆ	ಆಶ್ವೀಜ	೮	೩೪I	ಪೂ.	೪೯II		೧೭		೬
3	M	೩	ಚ		೯	೩೦II	ಉ.	೪೮		೧೮		೭
4	Tu	೪	ಮ		೧೦	೨೭II	ಶ್ರ.	೪೭I		೧೯		೮
5	W	೫	ಬು		೧೧	೨೫III	ಧ.	೪೭II		೨೦		೯
6	Th	೬	ಗು		೧೨	೨೫	ಶ.	೪೯		೨೧		೧೦
7	F	೭	ಶು		೧೩	೨೫II	ಪೂ.	೫೧I		೨೨		೧೧
8	S	೮	ಶ		೧೪	೨೭II	ಉ.	೫೫II	ಕನ್ಯಾ	೨೩		೧೨
9	SUN	೯	ಆ		(ಹುಣ್ಣಿಮೆ)	೩೦II	ರೇ.	೬೦		೨೪		೧೩
10	M	೧೦	ಚ		೧	೩೪III	ರೇ.	I		೨೫		೧೪
11	Tu	೧೧	ಮ		೨	೩೯II	ಅ.	೬I		೨೬		೧೫
12	W	೧೨	ಬು		೩	೪೪III	ಭ.	೧೨II		೨೭		೧೬
13	Th	೧೩	ಗು		೪	೪೯III	ಕೃ.	೧೮III		೨೮	ಶವ್ವಾಲ.	೧೭
14	F	೧೪	ಶು		೫	೫೫I	ರೋ.	೨೪II		೨೯		೧೮
15	S	೧೫	ಶ		೬	೫೮I	ಮೃ.	೩೦II		೩೦		೧೯
16	SUN	೧೬	ಆ	ಆಶ್ವೀಜ	೭	೬೦	ಆ.	೩೫		೧		೨೦
17	M	೧೭	ಚ		೭	೧	ಪು.	೩೮II		೨		೨೧
18	Tu	೧೮	ಮ		೮	೨II	ಪು.	೪೦III		೩		೨೨
19	W	೧೯	ಬು		೯	೨III	ಆ.	೪೧III		೪		೨೩
20	Th	೨೦	ಗು		೧೦	೧III	ಮ.	೪೧I		೫		೨೪
21	F	೨೧	ಶು		೧೨	೫೬I	ಪೂ.	೪೦I		೬		೨೫
22	S	೨೨	ಶ		೧೩	೫೨	ಉ.	೩೮		೭		೨೬
23	SUN	೨೩	ಆ		೧೪	೪೭I	ಹ.	೩೪II		೮		೨೭
24	M	೨೪	ಚ		(ಅಮಾವಾಸೆ)	೪೧III	ಚಿ.	೩೧III	ತುಲಾ.	೯		೨೮
25	Tu	೨೫	ಮ		೧	೩೬	ಸ್ವಾ.	೨೭III		೧೦		೨೯
26	W	೨೬	ಬು		೨	೩೦	ವಿ.	೨೩		೧೧		೧
27	Th	೨೭	ಗು	ಕಾರ್ತೀಕ	೩	೨೫	ಅ.	೧೯III		೧೨		೨
28	F	೨೮	ಶು		೪	೧೮III	ಜ್ಯೇ.	೧೫III		೧೩	ಜಿಲ್ಕಾದ.	೩
29	S	೨೯	ಶ		೫	೧೨III	ಮೂ.	೧೪III		೧೪		೪
30	SUN	೩೦	ಆ		೬	೮III	ಪೂ.	೯II		೧೫		೫
31	M	೩೧	ಚ		೭	೫	ಉ.	೭II		೧೬		೬

NOVEMBER. 30 DAYS. ○ ಕಾರ್ತಿಕ ಪೂರ್ಣಿಮೆ, ೮ ನವಂಬರ.		**ನವಂಬರ.** ೩೦ ದಿವಸಗಳು. ● ಕಾರ್ತಿಕ ಅಮಾವಾಸೆ, ೨೩ ನವಂಬರ.

ಅವನ ರಾಜ್ಯಾಧಿಕಾರದ ಅಭಿವೃದ್ಧಿಗೂ ಸಮಾಧಾನಕ್ಕೂ ಅಂತ್ಯವಿರುವದಿಲ್ಲ;
ಸೈನ್ಯಗಳ ಯೆಹೋವನ ಆಸಕ್ತಿ ಇದನ್ನು ಮಾಡುವದು. ಯೆಶಾ. ೯, ೭.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	Tu	೧	ಮ	ಕಾರ್ತಿಕ ಶುದ್ಧ.	೮	೧I	ಶ್ರ.	೬I	ತುಲಾ.	೧೭	ಶಾಬಾನ.	೭
2	W	೨	ಬು		೯	I	ಧ.	೬I		೧೮		೮
3	Th	೩	ಗು		೧೧	೬೦	ಶ.	೭I		೧೯		೯
4	F	೪	ಶು		೧೧	II	ಪೂ.	೯III		೨೦		೧೦
5	S	೫	ಶ		೧೨	೨III	ಉ.	೧೩III		೨೧		೧೧
6	SUN	೬	ಆ		೧೩	೬	ರೇ.	೧೯		೨೨		೧೨
7	M	೭	ಚ		೧೪	೧೦I	ಅ.	೨೪		೨೩		೧೩
8	Tu	೮	ಮ		○	೧೫I	ಭ.	೩೦I		೨೪		೧೪
9	W	೯	ಬು	ಕಾರ್ತಿಕ ಬಹುಳ.	೧	೨೦II	ಕೃ.	೩೬II		೨೫		೧೫
10	Th	೧೦	ಗು		೨	೨೫III	ರೋ.	೪೨III		೨೬		೧೬
11	F	೧೧	ಶು		೩	೩೦	ಮೃ.	೪೮II		೨೭		೧೭
12	S	೧೨	ಶ		೪	೩೪	ಆ.	೫೩I		೨೮		೧೮
13	SUN	೧೩	ಆ		೫	೩೬III	ಪು.	೫೭I		೨೯		೧೯
14	M	೧೪	ಚ		೬	೩೮II	ಪು.	೫೯III		೩೦		೨೦
15	Tu	೧೫	ಮ		೭	೩೮I	ಆ.	೬೦	ವೃಶ್ಚಿಕ.	೧		೨೧
16	W	೧೬	ಬು		೮	೩೭II	ಆ.	III		೨		೨೨
17	Th	೧೭	ಗು		೯	೩೫I	ಮ.	III		೩		೨೩
18	F	೧೮	ಶು		೧೦	೩೨	ಉ.	೫೮		೪		೨೪
19	S	೧೯	ಶ		೧೧	೨೭II	ಹ.	೫೫I		೫		೨೫
20	SUN	೨೦	ಆ		೧೨	೨೩	ಚಿ.	೫೨III		೬		೨೬
21	M	೨೧	ಚ		೧೩	೧೭I	ಸ್ವಾ.	೪೭III		೭		೨೭
22	Tu	೨೨	ಮ		೧೪	೧೨	ವಿ.	೪೩III		೮		೨೮
23	W	೨೩	ಬು		●	೬I	ಅ.	೪೦		೯		೨೯
24	Th	೨೪	ಗು	ಮಾರ್ಗಶಿರ ಶುದ್ಧ.	೧	II	ಜ್ಯೇ.	೩೫III		೧೦		೩೦
25	F	೨೫	ಶು		೩	೫೦	ಮೂ.	೩೨I		೧೧	ರಮಜಾನ.	೧
26	S	೨೬	ಶ		೪	೪೫I	ಪೂ.	೨೯I		೧೨		೨
27	SUN	೨೭	ಆ		೫	೪೦III	ಉ.	೨೭		೧೩		೩
28	M	೨೮	ಚ		೬	೩೮III	ಶ್ರ.	೨೫III		೧೪		೪
29	Tu	೨೯	ಮ		೭	೩೭	ಧ.	೨೫I		೧೫		೫
30	W	೩೦	ಬು		೮	೩೬III	ಶ.	೨೬		೧೬		೬

DECEMBER.		**ದಶಂಬರ.**
31 DAYS.		೩೧ ದಿವಸಗಳು.
🌕 ಮಾರ್ಗಶಿರ ಪೂರ್ಣಿಮೆ, ೮ ದಶಂಬರ.		🌑 ಮಾರ್ಗಶಿರ ಅಮಾವಾಸೆ, ೨೨ ದಶಂಬರ.

ದೇವರು ತಕ್ಕ ಕಾಲದಲ್ಲಿ ನಿಮ್ಮನ್ನು ಹೆಚ್ಚಿಸುವ ಹಾಗೆ,
ಅವನ ತ್ರಾಣವಾದ ಕೈಕೆಳಗೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ. ೧ ಪೇತ್ರ. ೫, ೬.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳು	ತೇದಿ	ತಿಂಗಳು	ತೇದಿ
1	TH	೧	ಗು	ಮಾರ್ಗಶಿರ ಶುದ್ಧ.	೯	೩೭III	ಪೂ.	೨೮I	ವೃಶ್ಚಿಕ.	೧೭	ಮೊಹರಂ.	೭
2	F	೨	ಶು		೧೦	೪೦	ಉ.	೩೧III		೧೮		೮
3	S	೩	ಶ		೧೧	೪೩I	ರೇ.	೩೬		೧೯		೯
4	SUN	೪	ಆ		೧೨	೪೭III	ಅ.	೪೧II		೨೦		೧೦
5	M	೫	ಚ		೧೩	೫೨II	ಭ.	೪೭III		೨೧		೧೧
6	TU	೬	ಮ		೧೪	೫೩II	ಕೃ.	೫೩III		೨೨		೧೨
7	W	೭	ಬು		೧೫	೬೦	ರೋ.	೬೦		೨೩		೧೩
8	TH	೮	ಗು		🌕	೨III	ರೋ.	I		೨೪		೧೪
9	F	೯	ಶು	ಮಾರ್ಗಶಿರ ಬಹುಳ.	೧	೮II	ಮೃ.	೬		೨೫		೧೫
10	S	೧೦	ಶ		೨	೧೧I	ಆ.	೧೧I		೨೬		೧೬
11	SUN	೧೧	ಆ		೩	೧೪	ಪು.	೧೫I		೨೭		೧೭
12	M	೧೨	ಚ		೪	೧೫II	ಪು.	೧೮		೨೮		೧೮
13	TU	೧೩	ಮ		೫	೧೬	ಆ.	೧೯III		೨೯		೧೯
14	W	೧೪	ಬು		೬	೧೪II	ಮ.	೧೯II		೩೦		೨೦
15	TH	೧೫	ಗು		೭	೧೨III	ಪೂ.	೧೯I	ಧನು.	೧		೨೧
16	F	೧೬	ಶು		೮	೯II	ಉ.	೧೭II		೨		೨೨
17	S	೧೭	ಶ		೯	೫I	ಹ.	೧೫		೩		೨೩
18	SUN	೧೮	ಆ		೧೦	II	ಚಿ.	೧೧III		೪		೨೪
19	M	೧೯	ಚ		೧೨	೫೦II	ಸ್ವಾ.	೭III		೫		೨೫
20	TU	೨೦	ಮ		೧೩	೪೩II	ವಿ.	೩III		೬		೨೬
21	W	೨೧	ಬು		೧೪	೩೭III	ಜ್ಯೇ.	೫೫III		೭		೨೭
22	TH	೨೨	ಗು		🌑	೩೨II	ಮೂ.	೫೨		೮		೨೮
23	F	೨೩	ಶು	ಪುಷ್ಯ ಶುದ್ಧ.	೧	೨೭	ಪೂ.	೪೮III		೯		೨೯
24	S	೨೪	ಶ		೨	೨೨III	ಉ.	೪೬II		೧೦	ಸಫರ.	೧
25	SUN	೨೫	ಆ		೩	೧೯I	ಶ್ರ.	೪೪III		೧೧		೨
26	M	೨೬	ಚ		೪	೧೬II	ಧ.	೪೪II		೧೨		೩
27	TU	೨೭	ಮ		೫	೧೦II	ಶ.	೪೫		೧೩		೪
28	W	೨೮	ಬು		೬	೧೪III	ಪೂ.	೪೪III		೧೪		೫
29	TH	೨೯	ಗು		೭	೧೬	ಉ.	೪೯III		೧೫		೬
30	F	೩೦	ಶು		೮	೧೮I	ರೇ.	೫೪		೧೬		೭
31	S	೩೧	ಶ		೯	೨೧II	ಅ	೬೦		೧೭		೮

೧೮೬೯ನೇ ಇಸವಿಯಲ್ಲಿ ನಡದ

ಮುಖ್ಯ ಸಂಗತಿಗಳು.

೧. ಆಸ್ಯ ಖಂಡ.

ಹಿಂದುಸ್ಥಾನದಲ್ಲಿ ವಿಪರೀತ ಸಂಗತಿಗಳು ಬಹಳ ಸಂಭವಿಸಲಿಲ್ಲ. ಮುಖ್ಯವಾದದ್ದು ಯಾವವಂದರೆ—ಐದು ವರುಷ ಗವರ್ನರ್ ಜೆನರಲ್‌ರಾಗಿ ಈ ದೇಶವನ್ನಾಳಿದ ಸರ್ ಜೋನ್ ಲಾರೆನ್ಸ್ ಕಳದ ದಶಂಬರ್ ತಿಂಗಳಲ್ಲಿ ಎರ್ಲ್ ಮಾಯೊ ಎಂಬವರಿಗೆ ಉದ್ಯೋಗ ಒಪ್ಪಿಸಿ ಇಂಗ್ಲಾಂಡಿಗೆ ಹೋಗಿದ್ಧಾರೆ. ಮಹಾರಾಣಿ ಈ ಉತ್ತಮವಾದ ಉದ್ಯೋಗಸ್ಥನಿಗೆ ಪ್ರಭುತನ ದಯ ಮಾಡಿದರು. ಅಫಘಾನಿಸ್ಥಾನದ ರಾಜನಾದ ಶೀರ್ ಅಲಿಖಾನ್ ಈ ದೇಶದ ಪ್ರತಿಧೊರೆಯ ಬೇಟಿಗೆ ಬಂದು, ಬಹು ಉಪಚಾರ ಹೊಂದಿ, ಸ್ವದೇಶಕ್ಕೆ ತಿರಿಗಿ ಹೋಗಿ, ಹಿಂದುಸ್ಥಾನದಲ್ಲಿ ಕಂಡ ಸುಕ್ರಮ ಚಮತ್ಕಾರಗಳನ್ನು ಅಲ್ಲಿ ಸಹಾ ಆದಷ್ಟು ಅನುಕೂಲಿಸುವ ಪ್ರಯತ್ನ ಮಾಡುತ್ತಾನೆ. ಕೆಲವು ಕಡೆಯಲ್ಲಿ, ಹೆಚ್ಚಾಗಿ ರಾಜಸ್ಥಾನದಲ್ಲಿ, ಮಳೆ ಸಾಕಷ್ಟು ಬೀಳದ ಕಾರಣ ಈ ವರುಷದಲ್ಲಿಯೂ ಬರಗಾಲವಾಗಿ ಅನೇಕರು ಆಹಾರವಿಲ್ಲದೆ ಸತ್ತು ಹೋದರು. ಸರಕಾರದವರು ಆದಷ್ಟು ಸಹಾಯ ಮಾಡಿ ಕೆಲಸಕ್ಕೆ ಶಕ್ತರಿಗೆ ಕೆಲಸ ಕೊಟ್ಟರು. ಮತ್ತು ಇನ್ನು ಮುಂದೆ ಅಂಥ ದುಃಖದ ಸ್ಥಿತಿ ಆಗದ ಹಾಗೆ, ಅವರು ಕಾಲಿವೆಗಳನ್ನು ಕಟ್ಟುವದರಲ್ಲಿ ಬಹಳ ಹಣ ಖರ್ಚು ಮಾಡುತ್ತಾರೆ.

ಯಾಪನ್ ಎಂಬ ದೇಶದಲ್ಲಿ ಒಂದು ಕಲಹವಾಯಿತು. ಈಗ ಸಮಾಧಾನವಾಯಿತೆಂಬ ವರ್ತಮಾನ ಬಂತು.

೨. ವಿಲಾಯಿತಿ ಖಂಡ.

ವಿಲಾಯಿತಿಯಲ್ಲಿ ಒಟ್ಟು ನೋಡಿದರೆ, ಸಮಾಧಾನವಿತ್ತು. ಸ್ಪೇನ್ ದೇಶದಲ್ಲಿ ಮಾತ್ರ ಒಂದು ಕಲಹವಾಗಿ ದೇಶದ ರಾಣಿಯು ಓಡಿ ಹೋಗ ಬೇಕಾಯಿತು. ಅವಳು ದುರ್ಗುಣಿಯಾಗಿದ್ದದರಿಂದ, ಆ ದೇಶಸ್ಥರು ಬೇಸರಗೊಂಡು, ನಮಗೆ ಬೇರೆ ಅರಸನು ಇರಲಿ ಅಂತ ಎದ್ದರು. ಕೆಲವು ನುಂದಿ ಸೇನಾಧಿಪತಿಗಳೂ ಘನವುಳ್ಳವರೂ ಸರಕಾರದ ಕೆಲಸ ನಡಿಸಿ, ಒಂದು ಆಲೋಚನೇ ಸಭೆ ಕೂಡಿ ಕರದು, ಅದರ ಮುಂದೆ ರಾಜಧರ್ಮದ ಒಂದು ಹೊಸ ಕಾನೂನನ್ನು ಇಟ್ಟರು. ಆಲೋಚನೇ ಸಭೆ ಅದಕ್ಕೆ ಒಪ್ಪಿ, ಇನ್ನು ಮುಂದೆ ಸಹಾ ಒಬ್ಬ ಅರಸನು ನಮಗಿರಲಿ, ಆದರೂ ಮುಂಚಿನ ರಾಣಿಯ ಕುಟುಂಬದವನಾಗಿರ ಬಾರದು ಎಂತ ನಿಶ್ಚಯಿಸಿದರು. ಆಗ ಒಬ್ಬ ಅರಸನನ್ನು ಸಿಂಹಾಸನದ ಮೇಲೆ ಕೂಡ್ರಿಸುವ ತನಕ ರಾಜ್ಯಭಾರ ಮಾಡುವ ಹಾಗೆ, ಒಬ್ಬ ಪ್ರಭುವನ್ನು ನೇಮಿಸಿಟ್ಟರು. ಜರ್ಮನಿಯ ಉತ್ತರ ಸಂಸ್ಥಾನವು ಬಲವಾಗುತ್ತಾ ಬರು

ತ್ತದೆ. ಅದರ ಪ್ರಾಂತ್ಯಗಳಲ್ಲಿರುವ ಹತ್ತು ವರ್ಷದಿಂದ ಕಟ್ಟುತ್ತಿದ್ದ ಹೊಸ ಮಹಾ ರೇವಿಯನ್ನು ತೀರಿಸಿದರು. ಇಂಗ್ಲಾಂಡಿನಿಂದ ಅಮೆರಿಕ ಖಂಡಕ್ಕೆ ಎರಡು ತಂತಿಟಪ್ಪಾಲುಗಳನ್ನು ಸಮುದ್ರಕ್ಕಿಳಿಸಿ ಮಾಡಿದರು ಹ್ಯಾಗೋ, ಹಾಗೆ ಕಳದ ವರ್ಷದಲ್ಲಿ ಫ್ರಾಂಚ ದೇಶದಿಂದ ಅಮೆರಿಕ ಖಂಡಕ್ಕೆ ಒಂದು ಮಾಡಿ ಇಟ್ಟರು.

೩. ಅಮೆರಿಕ ಖಂಡ.

ಹೋದ ವರ್ಷದ ಪಂಚಾಂಗದಲ್ಲಿ ಸೂಚಿಸಿದ ಹಾಗೆ ಸೇನಾಧಿಪತಿಯಾದ ಗ್ರೆಂಥ್ ಧೊರೆಯು ಉತ್ತರ ಸಂಸ್ಥಾನದ ಪ್ರಜಾಧಿಪನ ಉದ್ಯೋಗ ಹೊಂದಿ ಯುದ್ಧದ ಸಮಯದಲ್ಲಿ ಹೆಚ್ಚಿದ ಸಾಲವನ್ನು ತೆರುವದಕ್ಕೂ ಬೇರೆ ಬೇರೆ ಅಕ್ರಮಗಳನ್ನು ನಿಲ್ಲಿಸುವದಕ್ಕೂ ಒಳ್ಳೇ ಪ್ರಯತ್ನ ಮಾಡುತ್ತಾನೆ. ಆ ದೇಶದಲ್ಲಿ ಒಂದು ಮಹಾ ಕಾರ್ಯವು ಸಫಲವಾಯಿತು, ಏನಂದರೆ—ಪೂರ್ವ ಮೇರೆಯಾದ ಅತ್ಲಂತಿಕ ಸಾಗರದಿಂದ ಪಶ್ಚಿಮ ಮೇರೆಯಾದ ಶಾಂತಸಾಗರದ ತನಕ ಒಂದು ಲೋಹ ಮಾರ್ಗವನ್ನು ಮಾಡಿದರು. ಅದು ಸುಮಾರು ೪೦೦೦ ಮೈಲು ಉದ್ದವಾಗಿ, ಶಾಂತಸಾಗರದ ಸಮೀಪ ೭೦೦೦ ಅಡಿ ಎತ್ತರವಾದ ಒಂದು ಘಟ್ಟವನ್ನು ದಾಟುತ್ತದೆ. ಐವತ್ತು ವರುಷಗಳ ಹಿಂದೆ ಆ ಪಶ್ಚಿಮ ದೇಶವೆಲ್ಲ ಕಾಡು ಸ್ಥಳವಿದ್ದು ನಾಗರೀಕತನ ಅಲ್ಲಿ ಇಷ್ಟಾದರೂ ಕಾಣಲಿಲ್ಲ; ಯಾಕಂದರೆ ಸಾವಿರಾರು ವರ್ಷ ಅಲ್ಲಿ ಬದುಕಿದ ಇಂದ್ಯಾನರೆಂಬ ಮೂಲನಿವಾಸಿಗಳು ಸತ್ಯ ದೇವರ ತಿಳುವಿಕೆ ಇಲ್ಲದೆ ಬುದ್ಧಿ ಕೆಟ್ಟು, ಇಂಥಾ ಯಾವ ಚಮತ್ಕಾರದ ಕೆಲಸಕ್ಕಾದರೂ ಆಗದವರಾಗಿದ್ದರು. ಈ ಲೋಹ ಮಾರ್ಗ ತೀರಿದಂದಿನಿಂದ ನಮ್ಮ ಭೂಲೋಕದ ಸುತ್ತಲಿನ ಪ್ರಯಾಣವನ್ನು ಉಬ್ಬೆ ಹಡಗಗಳಿಂದಲೂ ಲೋಹ ಮಾರ್ಗಗಳಿಂದಲೂ ಎಂಭತ್ತು ದಿವಸಗಳೊಳಗೆ ಪೂರೈಸ ಬಹುದು. ಮಂಗಳೂರಿಂದ ಕಾಶಿಗೆ ಹೋಗ ಬೇಕಾದರೆ, ಎಷ್ಟು ದಿವಸ ಹಿಡದೀತು?

ಸ್ಪೇನ್ ದೇಶಕ್ಕೆ ಶೇರಿದ ಕೂಬ ಎಂಬ ದ್ವೀಪದಲ್ಲಿಯೂ ಕಲಹವಾಗಿ, ಅದನ್ನು ನಿಲ್ಲಿಸಲಿಕ್ಕೆ ಅಲ್ಲಿಯ ಅಧಿಕಾರಸ್ಥರಿಗೆ ಬಹಳ ಕಷ್ಟವಾಯಿತು.

ದ್ವಿತೀಯಂ ಗೀತಂ.

ಮನುಜಾ ಅನ್ಯದೇಶೀಯಾಃ ಕುರ್ವಂತಿ ಕಲಹಂ ಕುತಃ ।
ಕಿನ್ನಿಮಿತ್ತಂ ಮನುಷ್ಯಾ ವಾ ಚಿಂತಾಂ ಕುರ್ವಂತಿ ನಿಷ್ಫಲಾಂ । ೧
ಪರಮೇಶಸ್ಯ ತೇನಾಭಿಷಿಕ್ತಸ್ಯ ಮಾನವಸ್ಯಚ ।
ವಿರುದ್ಧಮಭಿತಿಷ್ಠಂತಿ ಪೃಥಿವ್ಯಾಃ ಪತಯಃ ಕುತಃ । ೨
ಕುರ್ವಂತಿ ಮಂತ್ರಣಾಮಿತ್ಥಂ ಭೂಮಿಪಾಲಾಃ ಪರಸ್ಪರಂ ।
ಆಗಚ್ಛತ ವಯಂ ತೇಷಾಂ ಸಂಛಿನದಾಮ ಬನ್ಧನಂ । ೩

ತಥಾಸ್ಮತ್ತ್ರೋ ವಯಂ ತೇಷಾಂ ರಜ್ಜೂಃ ಪರಿಕ್ಷಿಪಾಮುಚ |
ಪರಂತು ಸರ್ಗಸಂವಾಸೀ ತದಾ ಹಾಸ್ಯಂ ಕರಿಷ್ಯತಿ |
ಕರಿಷ್ಯತ್ಯುಪಹಾಸಂ ಸ ಪ್ರಭುಸ್ತಾನ್ ಮಾನುಷಾನ್ ಪ್ರತಿ | ೪
ಇಮಾಂ ಕಥಾಂಚ ಸ ತೇಭ್ಯಃ. ಕೋಪೇನ ಕಥಯಿಷ್ಯತಿ | ೫
ಮಯಾ ಕೃತೊ ಮಹೀಪೊ ಯಃ ಪವಿತ್ರೆ ನಿಜಪರ್ವತೆ |
ತಸ್ಯಾಭಿಷೇಚನಂ ರಾಜ್ಞಃ ಸೀಯೋನಿ ಕೃತವಾನಹಂ | ೬
ಅಹಂ ಪ್ರಕಾಶಯಿಷ್ಯಾಮಿ ನಿಯಮಂ ಪರಮೇಶಿತುಃ |
ಸ ಏವ ಮಹ್ಯಮೇತಚ್ಚ ಸ್ವಯಂ ಕಥಿತವಾನ್ ಪುರಾ |
ಮದೀಯತನಯೋಸಿ ತ್ವಂ ತ್ವಮದ್ಯೋತ್ಥಾಪಿತೊ ಮಯಾ | ೭
ತ್ವಂ ಮಾಂ ಯಾಚಸ್ವ ತೇನಾಹಂ ಪರಿದಾಸ್ಯಾಮಿ ತ್ವಾಂ ಪ್ರತಿ |
ಅನ್ಯದೇಶಸಮುದ್ಭೂತಾನ್ ತ್ವದಾಧಿಕಾರಕಾರಣಾತ್ |
ಪೃಥ್ವೀಂ ಪರಿಧ್ಯುಪಾಂತಾಂಚ ತ್ವದೀಯರಾಜ್ಯಕಾರಣಾತ್ | ೮
ತ್ವಂ ಸ್ವದಂಡೇನ ಲೌಹೇನ ತಾನ್ ಸರ್ವಾನೇವ ಮಾನುಷಾನ್ |
ಪಾತ್ರಾಣೀವ ಕುಲಾಲಸ್ಯ ಭಜ್ಞನ್ ಚೂರ್ಣೀಕರಿಷ್ಯಸಿ | ೯
ಅತೊ ಹೇ ಕ್ಷಿತಿಪಾ ಯೂಯಂ ಜ್ಞಾನೇನಾಚರತಾಧುನಾ |
ಗೃಹ್ಣೀತ ಸೂಪದೇಶಾಂಚ ಯೂಯಂ ಪೃಥ್ವ್ಯಾ ವಿಚಾರಕಾಃ | ೧೦
ಭಯಯುಕ್ತಾಃ ಪರೇಶಸ್ಯ ಕುರುಧ್ವಂ ವರಿವಸ್ಯನಂ |
ಆನಂದಾರ್ಥಂ ಕುರುಧ್ವಂಚ ಭೂತ್ವಾ ಯೂಯಂ ಪ್ರಕಮ್ಪಿತಾಃ | ೧೧
ಚುಮ್ಬ್ಯತ ತತ್ಸುತಂ ಯೂಯಂ ಪರಿಕುಪ್ಯೇತ್ ಸ ಯನ್ನಹಿ |
ಪಥಿಯನ್ನ ವಿನಶ್ಯೇತ ತತ್ಕ್ರೋಧೆ ಜ್ವಲಿತೆ ಕ್ಷಣಾತ್ |
ಸಮಾಶ್ರಯಂತಿ ತಂ ಯೆ ಯೆ ತ ಎವ ಧನ್ಯಮಾನವಾಃ | ೧೨

ಭಾಗ್ಯದ ರಹಸ್ಯ.

ಸುಕರಣದಲ್ಲಿಯೂ ಐಶ್ವರ್ಯದಲ್ಲಿಯೂ ಸಂಪನ್ನಳಾಗಿ ಲೋಕದಲ್ಲಿ ಮಹಾ ದೊಡ್ಡ ಸಂಸ್ಥಾನದ ಪ್ರಭುವಾಗಿರುವ ವಿಕ್ತೋರಿಯ ಮಹಾರಾಣಿಯು ಬಳಿಗೆ ಒಂದಾನೊಂದು ಸಾರಿ ಅಫ್ರಿಕ ಖಂಡದ ಒಬ್ಬ ಅರಸನು ಬಹು ಬೆಲೆಯುಳ್ಳ ಉಡುಗೆರೆಗಳ ಸಮೇತ ತನ್ನ ರಾಯಭಾರಿಯನ್ನು ಕಳುಹಿಸಿ, ಇಂಗ್ಲಾಂಡಿನ ಸೌಭಾಗ್ಯ ಐಶ್ವರ್ಯಗಳ ರಹಸ್ಯವೇನೆಂದು ಕೇಳಿದ್ದಕ್ಕೆ, ನಮ್ಮ ರಾಣಿಯು ಉತ್ತರವಾಗಿ ಆ ಅರಸನಿಗೆ ತನ್ನ ಸೌಸೈನ್ಯದ ಸಂಖ್ಯೆಯಾಗಲಿ, ತನ್ನ ಬಲದ ಗಣನೆಯಾಗಲಿ, ತನ್ನ ರಾಜ್ಯದ ಅಪಾರವಾದ ವರ್ತಕತನ ಕೌಶಲಾದಿಗಳ ವೃತ್ತಾಂತವಾಗಲಿ, ತನ್ನ ಅಮಿತ ಸಂಪತ್ತಿನ ಲೆಖ್ಖವಾಗಲಿ, ಹೇಳಿ ಕಳುಹಿಸಲಿಲ್ಲ; ಇವುಗಳನ್ನು ಆ ರಾಯಭಾರಿಗೆ ತೋರಿಸುವದು ಅವಳಿಗೆ ಮನಸ್ಸಿರಲಿಲ್ಲ. ಆದರೆ ಅವಳು ಸೌಂದರ್ಯವಾಗಿ ಕಟ್ಟಿದ ಒಂದು ದೇವವಾಕ್ಯದ ಪುಸ್ತಕವನ್ನು ಕೊಟ್ಟು, ಹೇಳಿದ್ದೇನಂದರೆ: "ಇದೇ ಇಂಗ್ಲಾಂಡಿನ ಮಹಿಮೆಯ ರಹಸ್ಯವು ಎಂದು ನಿನ್ನ ಅರಸನಿಗೆ ಹೇಳು."

ಕನ್ನಡ ಮಲಯಾಳ ಜಿಲ್ಲೆಗಳಲ್ಲಿಯೂ ಕೊಡಗದಲ್ಲಿಯೂ

ಶಿಕ್ಕುವಂಥ

ವೃಕ್ಷಾದಿಗಳ ವರ್ಣನೆ.

(ಹೋದ ವರ್ಷದ ಪಂಚಾಂಗದಿಂದ ಮುಂದೆ.)

ಸೂಚನೆ: ಹುಟ್ಟು. ಅಂದರೆ ಹುಟ್ಟು ಸ್ಥಳ. ಕೊಂ. ಅಂದರೆ ಕೊಂಕಣ.

ತ.	„	ತಮಿಳು.	ಮಹಾ.	„	ಮಹಾರಾಷ್ಟ್ರ.
ಮ.	„	ಮಲಯಾಳ.	ಹಿಂ.	„	ಹಿಂದುಸ್ಥಾನಿ.
ತು.	„	ತುಳು.	ಔಷ.	„	ಔಷಧೋಪಯೋಗ.
ಸಂ.	„	ಸಂಸ್ಕೃತ.	ಸಾಧಾ.	„	ಸಾಧಾರಣ ಉಪಯೋಗ.

97. ಕಂಟಕಾರಿಕ ಇಲ್ಲವೆ ಕಂಟಕಾರಿ ಗಿಡ. *Solanum Jacquini* (*Willd.*)
ಹುಟ್ಟು: ತಿರುವಂಕೋಡು, ಚೋಲಮಂಡಲ.
ಔಷ: ಕೆಮ್ಮಿಗೂ ಉಬ್ಬಸಕ್ಕೂ ಗಂಟಲನೋವಿಗೂ.
ಸಾಧಾ: ಕಾಯಿ ತಿನ್ನುತ್ತಾರೆ. ಜೀರ್ಣ ಮಾಡುತ್ತದೆ.

98. ಕಂದರೊಳ ಮರ. *Thespesia populnea* (*Lam.*)
ಹುಟ್ಟು: ತಿರುವಂಕೋಡು, ಬಂಗಾಳ.
ಔಷ: ಕಾಯಿೂ ಮತ್ತು ಕೆತ್ತೆಯ ಕಷಾಯ ನಂಜಿಗೆ ಆಗುತ್ತದೆ.
ಸಾಧಾ: ಮರ ಕೆಲಸಕ್ಕೆ ಒಳ್ಳೇದು. ಕಾಯಿ ಬಣ್ಣಕ್ಕೆ ಉಪಯೋಗ.

99. ಕಗ್ಗಲಿ ಮರ. *Acacia sundra* (*D. C.*)
ಹುಟ್ಟು: ವಿಶೇಷವಾಗಿ ತಿರುವಂಕೋಡು. ಪುಷ್ಪ: ಆಷಾಢ, ಶ್ರಾವಣ.
ಸಾಧಾ: ಹಗಿನು ಕೊಡುತ್ತದೆ. ಮರ ಬಹಳ ಘಟ್ಟಿ.

100. ಕಚೋರ ಗಿಡ ಇಲ್ಲವೆ ಕಚು ಗಿಡ, ಸಪ್ಪಂಗ ಗಿಡ. *Curcuma zedoaria* (*Roscoe.*) ಸಂ: ಚೋರ. ಹಿಂ: ಪತ್ತಂಗ ಲಕಡಿ.
ಹುಟ್ಟು: ಮಲಬಾರ ತೀರ, ಚಿತ್ತಗೊಂಗ್. ಪು: ಚೈತ್ರ.
ಸಾಧಾ: ಬಣ್ಣಕ್ಕೆ ಆಗುತ್ತದೆ. ಕೆಂಪು ಶಾಯಿಗೆ ಸಹಾ ಪ್ರಯೋಗಿಸುತ್ತಾರೆ.

101. ಕಡಹೊಗೆಸೊಪ್ಪು ಗಿಡ. *Lobelia nicoticanoefolia* (*Heyne.*)
ಹುಟ್ಟು: ಕೊಡಗವೂ ನೀಲಗಿರಿಗಳೂ.
ಹೂವಿನ ಜೇನು ಜೇನುಹುಳ ಸಂಗ್ರಹಿಸುತ್ತದೆ. ಅದನ್ನು ತಿಂದರೆ ತಲೆನೋವಾಗುತ್ತದೆ.

102. ಕಣಗಲ ಮರ. *Janipha Manihot* (*Kth.*) ತ: ಮರವುಲ್ಲಿ. ಮ: ಮರ ಚೆನ್ನಿ. ಸಂ: ಕರವೀರ.

ಹುಟ್ಟು: ಮಲಬಾರ ತೀರ, ಹೆಚ್ಚಾಗಿ ತಿರುವಂಕೋಡು. ಪು: ಚೈತ್ರ, ವೈಶಾಖ.

ಔಷ: ಬೇರಿನ ಶಿಪ್ಪೆ ಕೆಟ್ಟ ಹುಣ್ಣುಗಳಿಗೆ ಉಪಯೋಗ.

ಸಾಧಾ: ಹಸಿ ಬೇರಿನ ಹಿಟ್ಟು ಬೇಯಿಸಿ ಶುದ್ಧ ಮಾಡಿದರೆ, ಒಳ್ಳೇ ಆಹಾರ. ಅದಕ್ಕೆ ವ್ಯಾಪಾರದಲ್ಲಿ ತಪಿಯೊಕ ಎಂಬ ಹೆಸರುಂಟು. ತಿರುವಂಕೋಡಿನಲ್ಲಿ ಬಹು ಜನರು ಆಷಾಢ ಶ್ರಾವಣ ಭಾದ್ರಪದ ತಿಂಗಳುಗಳಲ್ಲಿ ಇದರಲ್ಲಿಯೇ ಜೀವನ ಮಾಡುತ್ತಾರೆ. ಬೇರು ಬೇಯಿಸದಿದ್ದರೆ ವಿಷ.

103. ಕಣಗಿಲೆ ಗಿಡ. *Nerium odorum* (*Ait.*) ಚೊವನ್ನ ಅರಳಿ. ತ: ಅರಳಿ.

ಹುಟ್ಟು: ನದಿಗಳ ತೀರವೂ ತೋಟಗಳೂ. ಪು: ಜ್ಯೇಷ್ಠದಿಂದ ಶ್ರಾವಣ ವರೆಗೆ.

ಔಷ: ಬೇರಿನ ಶಿಪ್ಪೆ ಲಾಡಿಹುಳಕ್ಕೆ (*tape-worm*). ಬೇರು ತಾನೇ ವಿಷ.

104. ಕಣೆರಿ ಗಿಡ. *Zizyphus oenoplia* (*Mill.*)

ಹುಟ್ಟು: ಸಾಧಾರಣ (ಗುಡ್ಡೆಗಳಲ್ಲಿ).

ಔಷ: ಅಜೀರ್ಣಕ್ಕೂ ರಕ್ತಭೇದಿಗೂ.

ಸಾಧಾ: ಚಟ್ನಿ ಸಾರು ಮತ್ತು ತಂಬಳಿ ಮಾಡುತ್ತಾರೆ. ಹೊಟ್ಟೆಗೆ ಚೊಗುರು ಕೊಡುತ್ತದೆ.

105. ಕತಾಳಿ ಗಿಡ. *Aloe vulgaris.*

ಹಟ್ಟು: ಎಲ್ಲೆಲ್ಲಿ ಶಿಕ್ಕುವದು.

ಔಷ: ಎಲೆಗಳ ರಸವು ಕಠಿಣ ಜುಲಾಬು ಮಾಡುತ್ತದೆ.

ಸಾಧಾ: ನಾರುಗಳಿಂದ ಹಗ್ಗ ಸಣಬು ಮಾಡುತ್ತಾರೆ.

106. ಕನಕ ಮರ, ಇಲ್ಲವೆ ಕರಂಜಿ ಮರ. *Cynometra ramiflora* (*Linn.*) ಮ: ಇರಿಪ.

ಹುಟ್ಟು: ಮಲಬಾರ ತೀರ.

ಔಷ: ಬೇರು ಜುಲಾಬು ಆಗುವ ಹಾಗೆ ಕೊಡುತ್ತಾರೆ. ಎಲೆಗಳನ್ನು ಹಾಲಿನಲ್ಲಿ ಬೇಯಿಸಿ ಜೇನು ಕೂಡಿಸಿ ಕುಷ್ಠಿಗೂ ಬೇರೆ ನಂಜಿಗೂ ಒಳ್ಳೇದು. ಅದೇ ಪ್ರಕಾರ ಬೀಜಗಳ ಎಣ್ಣೆ.

107. ಕಪ್ಪು ತುಳಸಿ ಗಿಡ. *Ocimum sanctum* (*Linn.*) ಮ: ಕೃಷ್ಣತುಳಸಿ.

ಹುಟ್ಟು: ಮಲಬಾರ ತೀರ.

ಔಷ: ಬೇರಿನ ಕಷಾಯ ಜ್ವರಕ್ಕೆ, ಎಲೆಗಳ ರಸ ಮಕ್ಕಳ ಕೆಮ್ಮಿಗೆ, ಅದಕ್ಕೆ ಲಿಂಬೆ ರಸ ಕೂಡಿಸಿದರೆ ನಂಜಿಗೆ ಬಹಳ ಒಳ್ಳೇದು; ಕ್ರಿಮಿರೋಗಕ್ಕೂ ಆಗುತ್ತದೆ.

ಸಾಧಾ: ಮಾಲೆ ಮಾಡುತ್ತಾರೆ.

108. ಕಬ್ಬು ಗಿಡ. *Saccharum officinarum* (*Linn.*) ತು: ಮ: ಕರಿಂಬು. ತ: ಕರುಂಬು. ಹಿಂ: ಗನ್ನಾ. ಸಂ: ಇಕ್ಷು. ಮಹಾ: ಉಂಸ.

ಔಷ: ಪಾಷಾಣ, ತಾಂಬ್ರ ಇತ್ಯಾದಿ ಲೋಹ ಕಿಲುಬಿನ ವಿಷಕ್ಕೆ ಒಳ್ಳೇದು. ರಸ ವಾಂತಿಯನ್ನು ನಿಲ್ಲಿಸುತ್ತದೆ. ಸಕ್ಕರೆ ಪುಡಿ ಮಾಡಿ, ಹುಣ್ಣುಗಳಿಗೆ ಹಚ್ಚಿದರೆ ಒಳ್ಳೇದು.

ಸಾಧಾ: ಬೆಲ್ಲ, ಸಾರಾಯಿ ಮಾಡುತ್ತಾರೆ. ವಸ್ತುಗಳು ಕೊಳೆಯದಂತೆ ಸಕ್ಕರೆಯಯಲ್ಲಿ ಇಡುವದು.

109. ಕಮಲ ಗಿಡ. *Nelumbium speciosum*, (*Willd.*) ತ: ತಾಮರೈ. ಮ: ತಾಮರ. ತು: ತಾಮರೆ. ತೆ: ಎರ್ರತಾಮರೈ.

ಹುಟ್ಟು: ಕೆರೆಗಳು.

ಔಷ: ಎಲೆಗಳ ರಸದ ಸಂಗಡ ಎಣ್ಣೆ ಕಾಯಿಸಿ ತಲೆಗೆ ಹಚ್ಚಿದರೆ, ಮಕ್ಕಳ ತಾಮರೆ ರೋಗ ಗುಣ.

ಸಾಧಾ: ಹೂವು ಅಲಂಕಾರಕ್ಕೂ ಪರಿಮಳಕ್ಕೂ. ಬೀಜ ಮತ್ತು ತಿರುಳು ತಿನ್ನುತ್ತಾರೆ.

110. ಕರಂಜ ಮರ, ಇಲ್ಲವೆ ಹೊಂಗೆ ಮರ, ಹುಲಿಗಿಲಿ ಮರ. *Pongamia glabra* (*Vent.*) ಮ: ಪೊಂಗಂ. ತ: ಪುಂಗ ಮರಂ. ಹಿಂ: ಕೊರಂಗ್. ಸಂ: ಕರಂಜ.

ಹುಟ್ಟು: ಕೊಂಕಣ, ಮಲಬಾರ, ಚೋಲಮಂಡಲ ತೀರಗಳು, ಬಂಗಾಳವು. ಪು: ಚೈತ್ರ, ವೈಶಾಖ.

ಸಾಧಾ: ಮರ ಕೆಲಸಕ್ಕೆ ಆಗುತ್ತದೆ. ಬೀಜಗಳಿಂದ ಎಣ್ಣೆ ಮಾಡ ಬಹುದು.

111. ಕರಂಡೆ ಗಿಡ. *Sphaeranthus hirtus* (*Burm.*) ತ: ಕೊತ್ತಂಗ್ ಕರಂಡಿ.

ಹುಟ್ಟು: ದಕ್ಷಿಣ ಹಿಂದುಸ್ಥಾನ, ಗದ್ದೆಗಳ ಬದಿಯಲ್ಲಿ.

ಔಷ: ಕರಳುಗಳ ಅಕ್ರಮಕ್ಕೆ, ಬೇರು ಮೂಲವ್ಯಾಧಿಗೆ.

112. ಕರವದೀ ಗಿಡ ಇಲ್ಲವೆ ಹರೀಕಳಿವಿ ಗಿಡ. *Carissa carandas* (*Linn.*)

ಹುಟ್ಟು: ಕಾಡುಗಳು.

ಸಾಧಾ: ಮುಳ್ಳುಗಿಡವಾಗಿ ಬೇಲಿ ಮಾಡಲಿಕ್ಕೆ ಉತ್ತಮ. ಹಣ್ಣು ತಿನ್ನ ಬಹುದು.

113. ಕರಿ ಉದ್ದು ಇಲ್ಲವೆ ತೊಗರಿ ಗಿಡ. *Cajanus indicus* (*Spreng*). ತ: ಮ: ತೊವರೆ. ಹಿಂ: ತುವರ್.

ಹುಟ್ಟು: ತೋಟಗಳು.

ಸಾಧಾ: ಬೀಜ ಮನುಷ್ಯರಿಗೂ ದನಕ್ಕೂ ಒಳ್ಳೇ ಆಹಾರ. ಒಣಗಿದ ಗಿಡ ಕಟ್ಟಿಗೆಯಾಗಿ ಪ್ರಯೋಗಿಸುತ್ತಾರೆ.

114. ಕರಿಜಲೀ ಗಿಡ ಇಲ್ಲವೆ ಕರೆಜಲೀ ಗಿಡ, ಶಮಿ ಮರ. *Acacia Arabica* (*Willd.*) ತ: ಕರುವಲುಂ.

ಔಷ: ಕೆತ್ತೆ ಬಲ ಕೊಡುವಂಥಾದ್ದು.

ಸಾಧಾ: ಪರಿಮಳ. ಕೆತ್ತೆಗೆ ಘಾಯ ಮಾಡಿದರೆ, ಅಂಟು ಬರುತ್ತದೆ. ಕೆತ್ತೆಯ ಕಷಾಯಕ್ಕೆ ಶೀಗೇ ಗುಣ. ಅದು ಚರ್ಮ ಹದ ಮಾಡುವದಕ್ಕೂ ಬಣ್ಣಕ್ಕೂ ಉಪಯೋಗ. ಮರ ಕೆಲಸಕ್ಕೆ ಆಗುತ್ತದೆ. ಬೀಜಗಳೂ ಚಿಗುರುಗಳೂ ಕುರಿಗಳಿಗೆ ಆಹಾರ.

115. ಕರಿಜೀರಿಗೆ. *Nigella sativa* (*Linn.*)

ಔಷ: ಗುಣ ಉಷ್ಣ. ಅಜೀರ್ಣಕ್ಕೂ ನೆಗಡಿಗೂ ಕ್ರಿಮಿರೋಗಕ್ಕೂ ಉಪಯೋಗ.

116. ಕರಿತುಂಬೆ ಗಿಡ. *Anisomeles Malabarica* (*R. Br.*)

ಹುಟ್ಟು: ತಿರುವಂಕೋಡು. ಪು: ಆಷಾಢ, ಶ್ರಾವಣ.

ಔಷ: ಎಲೆಗಳ ರಸ ಮಕ್ಕಳ ಹೊಟ್ಟೇ ನೋವಿಗೂ ಅಜೀರ್ಣಕ್ಕೂ ಹಲ್ಲು ಬರುವ ಜ್ವರಕ್ಕೂ ಒಳ್ಳೇದು. ಈ ಗಿಡದಿಂದ ಒಂದು ಕೆಂಪು ಎಣ್ಣೆ ಮಾಡ ಬಹುದು. ಕಷಾಯದಿಂದ ಮೈ ತೊಳೆದರೆ, ವಾತರೋಗ ಗುಣ.

117. ಕರಿನೆಕ್ಕಿ ಗಿಡ. *Gendarussa vulgaris* (*Nees*). ಸಂ: ಕೃಷ್ಣನಿರ್ಗುಂಡಿ. ಹಿಂ: ಕಾಲಾಬಾಸಿಂಬ. ತ: ಕರುನುಚಿ. ತೆ: ನಲ್ಲವಾವಿಲಿ.

ಹುಟ್ಟು: ಕೊಂಕಣ, ಮಲಬಾರ ತೀರಗಳು, ಚೋಲಮಂಡಲವು.

ಔಷ: ವಾತರೋಗಕ್ಕೂ ಜ್ವರಕ್ಕೂ ಕೆಮ್ಮಿಗೂ ಮೈನೋವಿಗೂ ಆಗುತ್ತದೆ.

ಸಾಧಾ: ಎಲೆಗಳಿಂದ ಹೊಗೆ ಹಾಕಿದರೆ, ನುಶಿ ಮುಂತಾದ ಕೆಟ್ಟ ಹುಳಗಳು ಸಾಯುತ್ತವೆ.

118. ಕರಿನೆಲ್ಲಿ ಗಿಡ. *Cicca disticha* (*Linn.*) ತ: ಅರುನೆಲ್ಲಿ. ಮ: ನೆಲ್ಲಿ.

ಹುಟ್ಟು: ತೋಟಗಳು.

ಔಷ: ಎಲೆಗಳು ಬೆವರು ಬರುವ ಹಾಗೆ ಉಪಯೋಗ.

ಸಾಧಾ: ಕಾಯಿಯಿಂದ ಉಪ್ಪಿನ ಕಾಯಿ ಮಾಡ ಬಹುದು. ಹಣ್ಣು ತಿನ್ನುತ್ತಾರೆ, ಮತ್ತು ಪಾಕ ಮಾಡಿ ಮಾರುತ್ತಾರೆ.

119. ಕರಿಬೇವು ಮರ. *Bergera Koenigii* (*Koen.*) ತ: ಕರುವೆಪಿಲೆ. ಮ: ಕರೆಯಪಿಲ.

ಹುಟ್ಟು: ಮಲಬಾರ ತೀರ. ಪು: ಚೈತ್ರದಿಂದ ಆಷಾಢ ವರೆಗೆ.

ಔಷ: ಹಸಿ ಎಲೆಗಳಿಂದ ರಕ್ತಭೇದಿ ಗುಣ. ಬೇರು ಮತ್ತು ಕೆತ್ತೆ ಕಷಾಯ ಮಾಡಿದರೆ, ವಾಂತಿ ನಿಲ್ಲಿಸುತ್ತದೆ. ಹಸಿ ಎಲೆಗಳನ್ನು ಹಾಲಿನಲ್ಲಿ ಬೇಯಿಸಿ ಅರಿದು ವಿಷದ ಹುಳ ಕಚ್ಚಿದ್ದಲ್ಲಿಗೆ ಹಚ್ಚುವದು.

ಸಾಧಾ: ಮರ ಕೆಲಸಕ್ಕೆ ಒಳ್ಳೇದು. ಬೀಜದಿಂದ ಎಣ್ಣೆ ಆಗುತ್ತದೆ. ಎಲೆಗಳು ಪದಾರ್ಥಕ್ಕೆ ಒಗ್ಗರಣೆ ಕೊಡುವದಕ್ಕೆ ಉಪಯೋಗ.

ಕರಿಮರ. 33ನೇ ಅಂಕೆ ನೋಡ ಬೇಕು.

120. ಕರಿಲಾವಂಚ ಹುಲ್ಲು. *Andropogon Iwarancusa* (*Rxb.*) ಮ: ರಾಮಚ್ಚ.

ಹುಟ್ಟು: ಸಾಧಾರಣ.

ಔಷ: ಜ್ವರಕ್ಕೆ ಆಗುತ್ತದೆ.

ಸಾಧಾ: ಪರಿಮಳ.

121. ಕರೆಸೂಲ ಇಲ್ಲವೆ ಕರೆಹೂಲ, ಗುಡಪಾಲ, ನೆಲಮಾಗಳಿ ಚೇರ. *Fluggea leucopyrus*. ತ: ಇರುಬೂಲ್ಪೆ.

122. ಕರೇಕೊಮ್ಮೆ ಗಿಡ. *Boerhavia procumbens* (*Roxb.*)
ಹುಟ್ಟು: ಸಾಧಾರಣ.
ಔಷ: ಹೊಟ್ಟೆಗೆ ಒಳ್ಳೇದು. ಚೊಗುರು ಗುಣ. ಜೀರ್ಣ ಮಾಡುತ್ತದೆ.
ಸಾಧಾ: ಚಿಗುರಿನ ತಂಬಳಿ ಮಾಡುತ್ತಾರೆ.

123. ಕರ್ಜಾಲಿ ಗಿಡ ಇಲ್ಲವೆ ತುಂಬೆ ಗಿಡ. *Phlomis indica* (*Linn*). ತ: ತುಂಬೆನಿಲ್ಯೆ.
ಹುಟ್ಟು: ತೋಟಗಳು.
ಔಷ: ಅಜೀರ್ಣಕ್ಕೂ ವಾತರೋಗಕ್ಕೂ ಕ್ರಿಮಿರೋಗಕ್ಕೂ ಕುರಕ್ಕೂ ಖಜ್ಜಿಗೂ ಸ್ಥಿರ ತಪ್ಪಿದ್ದಕ್ಕೂ ಉಪಯೋಗ.
ಸಾಧಾ: ಅಲಂಕಾರದ ಹೂವು.

124. ಕರ್ಮರ್ ಮರ. *Diospyros insculpta* (*Hamilt.*)
ಸಾಧಾ: ಮರ ಉತ್ತಮವಾದ ಅಡಿಗಬ್ಬು.

125. ಕರ್ಲಕ್ಕಿ ಗಿಡ ಇಲ್ಲವೆ ಲಕ್ಕಿ ಗಿಡ, ನೆಕ್ಕಿ ಗಿಡ, ಬಿಳೇ ನೆಕ್ಕಿ ಗಿಡ. *Vitex Negundo* (*Linn.*) ತ: ವೆಳೆನುಚಿ. ಮ: ಬೆನ್ನುಚ್ಚಿ. ತು: ನೆಕ್ಕಿ. ಸಂ: ನಿರ್ಗುಂಡಿ. ಮಹಾ: ಕೊ: ನಿಗುಂಡ.
ಹುಟ್ಟು: ದಕ್ಷಿಣ ಹಿಂದುಸ್ಥಾನವೂ ಬಂಗಾಳವೂ. ಪು: ಚೈತ್ರದಿಂದ ಜ್ಯೇಷ್ಠ ವರೆಗೆ.
ಔಷ: ಮೇಲಿನ 117ನೇ ಗಿಡದ ಗುಣ, ತ್ರಾಣ ಅರ್ಧದಷ್ಟು ಮಾತ್ರ.

126. ಕಲ್ಲಂಗಡ್ಲೆ ಗಿಡ. *Sida retusa* (*Linn.*) ತ: ಕರುಂದೋಟಿ. ಮ: ಕುರುಂತೋಟ್ಟಿ. ಸಂ: ಬಲಾ. ತು: ಕದೀರ್.
ಹುಟ್ಟು: ಮಲಬಾರ ತೀರ, ತಿರುವಂಕೋಡು, ಬಂಗಾಳ. ಪು: ಶ್ರಾವಣದಿಂದ ಮಾರ್ಗಶಿರ ವರೆಗೆ.
ಔಷ: ಬೇರಿನ ಕಷಾಯದಿಂದ ಎಣ್ಣೆ ಕಾಸಿದರೆ, ವಾತರೋಗಕ್ಕೆ ಬಹಳ ಒಳ್ಳೇದು. ಅದರಿಂದ ಚಾ ಸಹಾ ಮಾಡ ಬಹುದು. ಶರೀರ ಘಟ್ಟಿ ಮಾಡುವಂಥಾದ್ದು.
ಸಾಧಾ: ಎಲೆಗಳಿಗೆ ಒಳ್ಳೇ ಶೀಗೇ ಗುಣ.

127. ಕಲ್ಲುಶುಂಠಿ. *Zingiber zerumbet* (*Roxb.*)
ಔಷ: ಉಬ್ಬಸಕ್ಕೆ ಒಳ್ಳೇದು.
ಸಾಧಾ: ಪುಡಿ ಮಾಡಿ ಪದಾರ್ಥಗಳಿಗೆ ಶೇರಿಸಿ ತಿನ್ನುತ್ತಾರೆ.

128. ಕಸಕಸೆ ಗಿಡ. *Papaver somniferum* (*Linn.*)
ಹುಟ್ಟು: ವಿಶೇಷವಾಗಿ ಬಂಗಾಳ. ಪು: ಮಾಘ, ಫಾಲ್ಗುಣ.
ಔಷ: ಸನ್ನಿರೋಗಕ್ಕೂ ರಕ್ತಭೇದಿಗೂ ನೋವಿಗೂ ನಿದ್ರಾಭಂಗಕ್ಕೂ ಆಗುತ್ತದೆ.

129. ಕಳಂಗಳೆ ಗಿಡ ಇಲ್ಲವೆ ಚಿಟ್ಟಾಮಟ್ಟೆ ಗಿಡ. *Pavonia Zeylanica* (*Car.*) ತ: ಸಿತ್ರುಮುಟ್ಟಿ.

ಹುಟ್ಟು: ದಕ್ಷಿಣ ಹಿಂದುಸ್ಥಾನವು, ದಖ್ಖಣವು. ಪು: ಆಷಾಢದಿಂದ ಭಾದ್ರಪದ ವರೆಗೆ.

ಔಷ: ಬೇರಿನ ಕಷಾಯ ಜ್ವರಕ್ಕೆ ಆಗುತ್ತದೆ.

130. ಕಾಂಚಾಳದ ಮರ ಇಲ್ಲವೆ ಕೆಂಪು ಮಂದಾರ. *Bauhinia variegata* (*Linn.*) *Bauhinia purpurea* (*Wall.*) ಮ: ಚೊವನ್ನಮಂದರಿ.

ಹುಟ್ಟು: ದಕ್ಷಿಣದ ತೀರಗಳು. ಪು: ಮಾಘ, ಫಾಲ್ಗುಣ.

ಔಷ: ಕೆತ್ತೆಗೆ ಚೊಗುರು ಗುಣ. ಕೊಬ್ಬಿದವರಿಗೆ ಬೇರಿನ ಕಷಾಯ ಒಳ್ಳೇದು.

ಸಾಧಾ: ಪರಿಮಳ ಮತ್ತು ಅಲಂಕಾರದ ಹೂವು. ಕೆತ್ತೆ ಬಣ್ಣಕ್ಕೂ ಚರ್ಮ ಹದ ಮಾಡುವದಕ್ಕೂ ಆಗುತ್ತದೆ.

131. ಕಾಕಮಾರಿ. *Anamirta cocculus* (*W. & A.*) ತ: ಕಾಕಕುಲ್ಲಿ.

ಹುಟ್ಟು: ಕೊಂಕಣ ಮಲಬಾರ ತೀರಗಳು.

ಔಷ: ಬೀಜ ಕಠಿಣ ವಿಷವುಳ್ಳದ್ದಾದರೂ ಕೆಲವು ರೋಗಗಳಲ್ಲಿ ಉಪಯೋಗಿಸ ಬಹುದು. ಎಣ್ಣೆ ವೈಯುರಿಗೆ, ಕಾಯಿ ಖಜ್ಜಿಗೂ ಹುಳಕ್ಕೂ ಕೆಟ್ಟ ಹುಣ್ಣುಗಳಿಗೂ ಗಂಡಮಾಲಿಗೂ ಆಗುತ್ತದೆ.

ಸಾಧಾ: ಮೀನು ಕಾಗೆ ತಗಣೆ ನಾಶನ.

132. ಕಾಕಮೊಂಚೀ ಗಿಡ. *Solanum trilobatum* (*Linn.*)

ಹುಟ್ಟು: ಹೆಚ್ಚಾಗಿ ದಖ್ಖಣ, ಕನ್ಯಾಕುಮಾರಿ.

ಔಷ: ಕೆಮ್ಮಿಗೂ ಕ್ಷಯರೋಗಕ್ಕೂ ಆಗುತ್ತದೆ.

133. ಕಾಕಿ ಗಿಡ ಇಲ್ಲವೆ ಕಾಕೆ ಗಿಡ. *Canthium parviflorum* (*Lam.*)

ಹುಟ್ಟು: ತಿರುವಂಕೋಡು, ಮಲಬಾರ ತೀರ, ಚೋಲಮಂಡಲ. ಪು: ಚೈತ್ರ, ವೈಶಾಖ.

ಔಷ: ರಕ್ತಭೇದಿಗೂ ಉಷ್ಣಭೇದಿಗೂ ಅಶಕ್ತಿಗೂ ಆಗುತ್ತದೆ.

ಸಾಧಾ: ಒಳ್ಳೇ ಬೇಲಿಯಾಗುತ್ತದೆ. ಎಲೆಗಳು ಪದಾರ್ಥಕ್ಕೆ ಶೇರಿಸಿ ತಿನ್ನುತ್ತಾರೆ.

134. ಕಾಕೆತರೊಳ್ಳಿ ಗಿಡ ಇಲ್ಲವೆ ಕಾಗೆಸರ್ಪ ಗಿಡ. *Connarus monocarpus.*

ಔಷ: ಮಕ್ಕಳ ಚವಿಗೂ ಶೀತಕ್ಕೂ ಆಗುತ್ತದೆ.

135. ಕಾಗಿನೇರಳೆ ಗಿಡ ಇಲ್ಲವೆ ಕಪ್ಪು ನೇರಳೆ ಗಿಡ. *Premna herbacea.*

ಹುಟ್ಟು: ಸಾಧಾರಣ.

ಔಷ: ಕೆತ್ತೆ ಬಹಳ ಚೊಗುರು.

ಸಾಧಾ: ಮರ ಕೆಲಸಕ್ಕೆ ಒಳ್ಳೇದು. ಅದು ನೀರಲ್ಲಿ ಹಾಕಿದರೆ ಕೆಡುವದಿಲ್ಲ. ಹಣ್ಣು ತಿನ್ನುತ್ತಾರೆ. ಚಿಗುರು ಎಲೆಗಳು ಕುರಿಗಳಿಗೂ ಆಡುಗಳಿಗೂ ಆಹಾರ.

136. ಕಾಚಿ ಗಿಡ ಇಲ್ಲವೆ ಬದನೆ ಗಿಡ. *Solanum melongena* (*Linn.*) ಮ: ವಯಿದಿನೆ. ಸಂ: ವೃಂತಾಕ. ಹಿಂ: ಬೈಂಗನ್. ತು: ಬದನೆ. ಮಹಾ: ವಾಯಿಂಗೆ.

ಔಷ: ಕಾಯಿ ಸೂಚಿಯಿಂದ ಕುಕ್ಕಿ ಎಳ್ಳೆಣ್ಣೆಯಲ್ಲಿ ಕಾಸಿದರೆ, ಹಲ್ಲು ನೋವಿಗೆ ಒಳ್ಳೇದು.

ಸಾಧಾ: ಒಳ್ಳೇ ಪಲ್ಯ.

137. ಕಾಚಿವಾಳ ಗಿಡ ಇಲ್ಲವೆ ಬಿಳೀ ಮಂದಾರ. *Bauhinia accuminata* (*Linn.*)

ಹುಟ್ಟು: ಮಲಬಾರ ತೀರವು, ಬಂಗಾಳವು.

ಔಷ: ಬೇರು ಲಿಂಬೇ ರಸದಲ್ಲಿ ಕೊಟ್ಟರೆ, ನಂಜು ಗುಣ. ಹೂವು ಮೆಣಸಿನ ಸಂಗಡ ಅರದು ತಲೆನೋವಿಗೆ ಉಪಯೋಗಿಸ ಬಹುದು.

138. ಕಾಚು ಮರ ಇಲ್ಲವೆ ತರೆ ಗಿಡ. *Acacia catechu* (*Willd.*) ಸಂ: ಕದಿರ. ಮ: ಕರೆಂಗಾಲಿ.

ಹುಟ್ಟು: ಮಲಬಾರ ತೀರವೂ ದಕ್ಷಿಣವೂ ಬಂಗಾಳವೂ. ಪು: ಜ್ಯೇಷ್ಠದಿಂದ ಆಶ್ವೀಜ ವರೆಗೆ.

ಔಷ: ಚೊಗರು ಗುಣ.

ಸಾಧಾ: ಬಣ್ಣಕ್ಕೆ ಬಹು ಉಪಯೋಗ.

139. ಕಾಡ ಕಬ್ಬು ಇಲ್ಲವೆ ಹುಚ್ಚು ಕಬ್ಬು. (*Wild sugarcane*).

ಸಾಧಾ: ಬೇಲಿ ಮಾಡುತ್ತಾರೆ. ಆಕಳು ಕರು ಹಾಕಲಿಕ್ಕೆ ಕಷ್ಟವಾದರೆ, ತಿನ್ನಿಸುತ್ತಾರೆ.

140. ಕಾಡ ಕೆಸು ಗಿಡ. *Colocasia antiquorum* (*Schott.*) ತು: ಕಾಡ ತೇವು

ಸಾಧಾ: ಪಲ್ಯ. ಜೀರ್ಣ ಮಾಡುತ್ತದೆ.

141. ಕಾಡ ಕೈಲ್‌ನಾರು ಮರ ಇಲ್ಲವೆ ಭೂತಕರಳು. *Isora corylifolia* (*Shott and Endl.*)

ಹುಟ್ಟು: ಗುಡ್ಡಗಳ ಬದಿಯಲ್ಲಿ. ಪು: ಭಾದ್ರಪದದಿಂದ ಕಾರ್ತಿಕ ವರೆಗೆ.

ಔಷ: ಪಿತ್ತದೋಷಕ್ಕೆ. ಕಾಯಿ ಪುಡಿ ಮಾಡಿ ಅಂಬಲಿಯಾಗಿ ಕಣ್ಣು ನೋವಿಗೆ ಉಪಯೋಗಿಸುತ್ತಾರೆ.

142. ಕಾಡ ಕೊಂಡೆ ಮರ. *Inga bigemina* (*Willd*). ಸಂ: ಅರಗ್ವಥ.

ಹುಟ್ಟು: ಕೊಂಕಣ ತೀರ. ಪು: ಫಾಲ್ಗುಣದಿಂದ ವೈಶಾಖ ವರೆಗೆ.

ಔಷ: ಎಲೆಗಳ ಕಷಾಯ ಕೇಶ ವೃದ್ಧಿಗೆ; ಕುಷ್ಠ ರೋಗಕ್ಕೂ ಆಗುತ್ತದೆ. ಕಾಮಿಲೆಯಲ್ಲಿ ಉಪಯೋಗ.

143. ಕಾಡ ಗರ್ಗರಿ ಗಿಡ ಇಲ್ಲವೆ ಮದ್ದರಸ, ಬೊಡದರಗ ಗಿಡ, ಕೊಡಶಿಗಿನ ಗಿಡ. *Cluytia collina* (*Roxb.*) ತ: ಮೊಡುಗು ಮರಂ.

ಹುಟ್ಟು: ಕೊಂಕಣ, ಓಢ್ರ ದೇಶ. ಪು: ಫಾಲ್ಗುಣದಿಂದ ವೈಶಾಖ ವರೆಗೆ.

ಔಷ: ಕ್ರಿಮಿರೋಗಕ್ಕೂ ಗ್ರಹಣಿಗೂ ಸನ್ನಿರೋಗಕ್ಕೂ ಹೊಟ್ಟೆನೋವಿಗೂ ಮೂಲವ್ಯಾಧಿಗೂ ಅತಿಸಾರಕ್ಕೂ ಒಳ್ಳೇದು. ಅದರ ಕೆತ್ತೆ ಬೇರು ಮತ್ತು ಕಾಯಿ ವಿಷ, ಆದದರಿಂದ ಜಾಗ್ರತೆಯಿಂದ ಬೇಯಿಸಿ ಪ್ರಯೋಗಿಸ ಬೇಕು.

144. ಕಾಡ ತೊಗರಿ ಗಿಡ. *Astylosia condollei* (*W. & A.*)

ಹುಟ್ಟು: ಕಾಡು.

ಸಾಧಾ: ಬೀಜ ತಿನ್ನ ಬಹುದು. ಎಲೆಗಳು ದನಕ್ಕೆ ಆಹಾರ.

145. ಕಾಡು ಜೀರಿಗೆ ಇಲ್ಲವೆ ಕಾಳಜೀರಿಗೆ. *Veronica anthelmintica* (*Willd.*)

ಹುಟ್ಟು: ದಕ್ಷಿಣ ಹಿಂದುಸ್ಥಾನವು, ಬಂಗಾಳವು. ಪು: ಕಾರ್ತಿಕ ಮಾರ್ಗಶಿರ.

ಔಷ: ಕೆಮ್ಮಿಗೂ ಹೊಟ್ಟೆನೋವಿಗೂ ವಾತರೋಗಕ್ಕೂ ಬಾಣಂತಿಗೂ ಸರ್ಪವಿಷಕ್ಕೂ ಉಪಯೋಗ.

146. ಕಾಡೆಳ್ಳು ಗಿಡ ಇಲ್ಲವೆ ಹುಚ್ಚು ಎಳ್ಳು ಗಿಡ. *Guizotia oleifera* (*D. C.*)

ಹುಟ್ಟು: ದಕ್ಖಣ, ಮದ್ರಾಸ್, ಬಂಗಾಳ.

ಸಾಧಾ: ಎಣ್ಣೆ ಮಾಡುವದುಂಟು.

147. ಕಾರ್ಚಿ ಬಳ್ಳಿ ಇಲ್ಲವೆ ಅಕ್ಕಲಕರೆ ಬಳ್ಳಿ, ಮಡಹಾಗಲ ಬಳ್ಳಿ. *Momordica dioica* (*Roxb.*)

ಹುಟ್ಟು: ದಕ್ಷಿಣ ಹಿಂದುಸ್ಥಾನದ ಕಾಡುಗಳು. ಪು: ಶ್ರಾವಣದಿಂದ ಆಶ್ವೀಜ ವರೆಗೆ.

ಔಷ: ಎಲೆಗಳ ರಸ ತಲೆನೋವಿಗಾಗುತ್ತದೆ.

ಸಾಧಾ: ಗಡ್ಡೆ ಮತ್ತು ಕಾಯಿ ಒಳ್ಳೇ ಪಲ್ಯ.

148. ಕಾವಂಚೆ ಹುಲ್ಲು ಇಲ್ಲವೆ ಕಾಮಂಚ ಹುಲ್ಲು, ಕಾಚಿ ಹುಲ್ಲು, ಮಜ್ಜಿಗೆ ಹುಲ್ಲು. *Andropogon citratum* (*D. C.*) ತ: ಕಾಮಚಿ ಪುಲ್ಲು.

ಹುಟ್ಟು: ಪಶ್ಚಿಮ ತೀರವು, ಬಂಗಾಳವು

ಔಷ: ಜೀರ್ಣಕರ. ಎಣ್ಣೆ ವಾತರೋಗಕ್ಕೆ ಬಹು ಒಳ್ಳೇದು.

ಸಾಧಾ: ಪರಿಮಳ. ಎಲೆಗಳಿಂದ ಚಾ ಮಾಡುತ್ತಾರೆ. ಅದನ್ನು ತಿನ್ನುವ ಪದಾರ್ಥಕ್ಕೆ ಸಹಾ ಕೂಡಿಸುತ್ತಾರೆ.

149. ಕೃಷ್ಣತಾವರೆ ಇಲ್ಲವೆ ಕಪ್ಪು ತಾವರೆ. *Canna indica* (*Linn.*)

ಹುಟ್ಟು: ಸಮಸ್ತ ಹಿಂದುಸ್ಥಾನ.

ಸಾಧಾ: ವಿಷ ಮೆದ್ದ ದನಕ್ಕೆ ತುಂಡು ಮಾಡಿ, ಗಂಜಿ ನೀರಿನಲ್ಲಿ ಬೇಯಿಸಿ ಮೆಣಸು ಶೇರಿಸಿ ಕುಡಿಸುತ್ತಾರೆ. ಗಡ್ಡೆ ತಿನ್ನ ಬಹುದು.

ಉದ್ಯೋಗಗಳಿಂದಲೂ ಆಸ್ತಿಯಿಂದಲೂ ವೃತ್ತಿ ವ ಕಸಬುಗಳಿಂದಲೂ
ಹುಟ್ಟುವ ಆದಾಯ ಮತ್ತು ನಫೇ ಮೇಲೆ
ತೆರಿಗೆಗಳನ್ನು ವಿಧಿಸುವ ಬಗ್ಯೆ ಉಂಟಾದ

೧೮೮೬ನೆ ಇಸವಿ ೯ನೆ ಆಕ್ಟಿನ ಸಾರಾಂಶ.

೨. ಈ ಆಕ್ಟು ೧೮೮೬ನೆ ಇಸವಿ ಏಪ್ರೈಲ ತಿಂಗಳ ೧ನೆ ತಾರೀಕಿನ ಆರಭ್ಯ ಜಾರಿಗೆ ಬಂದಿರುತ್ತದೆ.

೪. ಸಂಬಳ ವ ಚತ್ತೆ ಕೂಡಿ ತಿಂಗಳು ಒಂದಕ್ಕೆ ೫೦೦ ರೂಪಾಯಿಗೆ ಮೀರದೆ ಇದ್ದು ಸಿವಿಲ್ ನವುಕರಿಯಲ್ಲಿ ಇಲ್ಲದೆ ಇರುವ ಶ್ರೀಮಹಾರಾಣಿಯವರ ಸೈನ್ಯಕ್ಕೆ ಅಥವಾ ಶ್ರೀ ಮಹಾರಾಣಿಯವರ ಇಂಡ್ಯ ಸೈನ್ಯಕ್ಕೆ ಶೇರಿದ ಉದ್ಯೋಗಸ್ಥರು, ವಾರಾಂಟ್ ಉದ್ಯೋಗ

ಗಸ್ಥರು, ಹುದ್ದೆ ಹೊಂದದವರಾದ ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದವರಾದ ಸೈನ್ಯದವರು ಇಂಥವರ ಸಂಬಳ ವ ಚತ್ತೆಗೂ ಅಥವಾ ಮತಸಂಬಂಧವಾದ ಯಾ ಧರ್ಮಕರವಾದ ಕೆಲಸಗಳಿಗೆ ಮಾತ್ರವೇ ಇಡೋಣಾದ್ದಾಗಿ ಉಪಯೋಗಿಸೋಣಾಗುವ ಯಾವ ಚರ ಸ್ಥಿರ ಸೊತ್ತಿಗೂ ಈ ಆಕ್ಟಿನಲ್ಲಿರುವ ಯಾವದೂ ಸಂಬಂಧಿಸುವದಿಲ್ಲ.

೧೦. ಈ ಸಂವತ್ಸರ ವ ಇದರನಂತರ ಪ್ರತಿ ಸಂವತ್ಸರದಲ್ಲಿಯೂ ಪ್ರತಿ ಸಂಘದ ಬಾಬತು ಇಂಡ್ಯದಲ್ಲಿರುವ ಖಜಾನಚಿ, ಕಾರ್ಯದರ್ಶಿ ಯಾ ಪ್ರಧಾನ ಮುತಾಲಿಕ ಯಾ ಆಡಳತೆಗಾರ, ಬ್ರಿತ್ಯ ಇಂಡ್ಯದಿಂದ ಮತ್ತೊಂದು ದೇಶದಲ್ಲಿ ಜಹಜು ವ್ಯಾಪಾರ ನಡಿಸುವ ಸಂಘದ ವಿಷಯದಲ್ಲಿ, ಆ ಸಂಘದ ಸಾಲಿಯಾನ ಲೆಖ್ಖಗಳು ಕಡೆಯಲ್ಲಿ ಕೈದು ಮಾಡಿದಾಗ ಆ ಸಂವತ್ಸರದಲ್ಲಿ ಸದರಿ ಸಂಘದ ಜಹಜುಗಳ ಪೈಕಿ ವ್ಯಾಪಾರದಲ್ಲಿದ್ದ ಪ್ರತಿ ಒಂದು ಜಹಜಿನಿಂದ ಎಷ್ಟು ಉತ್ಪತ್ತಿಯಾಗಿರುತ್ತದೋ, ಅದರಿಂದ ಖರ್ಚು ಕಳದು ಉಳಿದ ನಫೆಯ ಅರ್ಧ ಮೊಬಲಗಿಗೆ ಶೇಕಡಾ ಒಂದು ರೂಪಾಯಿ ಪ್ರಕಾರ ಸರ್ಕಾರಕ್ಕೆ ಪಾವತಿ ಮಾಡ ತಕ್ಕದ್ದು.

ಇತರ ವಿಧವಾದ ಪ್ರತಿ ಸಂಘದ ವಿಷಯದಲ್ಲಿ, ಆ ಸಂಘದ ಸಾಲಿಯಾನ ಲೆಖ್ಖಗಳು ಕಡೆಯಲ್ಲಿ ಕೈದು ಮಾಡಿದ್ದಾಗ ಆ ಸಂವತ್ಸರದಲ್ಲಿ ಸದರಿ ಸಂಘದವರಿಗೆ ಬ್ರಿತ್ಯ ಇಂಡ್ಯದಲ್ಲಿ ಉತ್ಪತ್ತಿಯಾಗಿ ಖರ್ಚು ಕಳದು ಉಳಿಯುವ ಇಡೀ ನಫೆಯ ಮೇಲೆ ಶೇಕಡಾ ಒಂದು ರೂಪಾಯಿ ಪ್ರಕಾರ ಸರ್ಕಾರಕ್ಕೆ ಪಾವತಿ ಮಾಡ ತಕ್ಕದ್ದು. ಮತ್ತು ಏಪ್ರಿಲ್ ತಿಂಗಳ ೩೦ನೆ ತಾರೀಕಿನಲ್ಲಿ ಯಾ ಅದಕ್ಕೆ ಮುಂಚೆ ಅಂಥಾ ಲೆಖ್ಖಗಳ ಫಲವನ್ನು ತಿಳಿಸುವಂಥಾ ಲೆಖ್ಖದ ಪಟ್ಟಿಯನ್ನು ಬರೆದು ತಯಾರು ಮಾಡಿ ಅವನ ದಸ್ಕತು ಹಾಕಿ ಕಲೆಕ್ಟರವರಿಗೆ ಕೊಡ ತಕ್ಕದ್ದು.

ತೆರಿಗೆ ನಿಶ್ಚಯಿಸುವ ಸಂವತ್ಸರಕ್ಕೆ ಮುಂಚೆ ಬರುವ ಮಾರ್ಚಿ ತಿಂಗಳ ೩೧ನೆ ತಾರೀಕಿಗೆ ಮುಗಿಯುವ ಸಂವತ್ಸರದೊಳಗಾಗಿ ಈ ಪ್ರಕರಣದಲ್ಲಿ ನಮೂದಿಸಿದ ಪ್ರಕಾರ ಲೆಖ್ಖ ಕೈದು ಮಾಡದಂಥಾ ಸಂಘದ ವಿಷಯದಲ್ಲಿ, ಸದರಿ ಸಂಘದ ಖಜಾನಚಿ, ಕಾರ್ಯದರ್ಶಿ ಯಾ ಪ್ರಧಾನ ಮುತಾಲಿಕ ಯಾ ಆಡಳತೆಗಾರ ಒಂದು ಲೆಖ್ಖದ ಪಟ್ಟಿಯನ್ನು ತಯಾರು ಮಾಡಿ, ಆ ಸಂವತ್ಸರದ ಏಪ್ರಿಲ್ ತಿಂಗಳ ೩೦ನೆ ತಾರೀಕಿನಲ್ಲಿ ಯಾ ಅದಕ್ಕೆ ಮುಂಚೆ ಕಲೆಕ್ಟರವರಿಗೆ ಕೊಡ ತಕ್ಕದ್ದು; ತೆರಿಗೆ ನಿಶ್ಚಯಿಸುವ ಸಂವತ್ಸರಕ್ಕೆ ಮುಂಚೆ ಬರುವ ಮಾರ್ಚಿ ತಿಂಗಳ ೩೧ನೆ ತಾರೀಕಿಗೆ ಮುಗಿಯುವ ಸಂವತ್ಸರದಲ್ಲಿ (ಸಂಗತ್ಯಾನುಸಾರವಾಗಿ) ಸದರಿ ಜಹಜುಗಳಿಂದ ಯಾ ಸಂಘದಿಂದ ಉತ್ಪತ್ತಿಯಾದ ಹಣದಲ್ಲಿ ಖರ್ಚು ಕಳದು ಉಳಿದ ನಫೆ ಇಷ್ಟೆಂದು ಆ ಲೆಖ್ಖದ ಪಟ್ಟಿಯಲ್ಲಿ ನಮೂದಿಸಿ ದಸ್ಕತು ಹಾಕಿ ಕೊಡ ತಕ್ಕದ್ದು.

೧೩. ಪ್ರಾಯ ಪ್ರಬುದ್ಧನಾಗದವನ, ವಿವಾಹವಾದ ಸ್ತ್ರೀಯ, ಹುಚ್ಚು ಹಿಡಿದವನ, ಅಥವಾ ಹುಟ್ಟುಹುಚ್ಚನ ಸ್ಥಿತಿಸಂರಕ್ಷಕನು ಯಾ ಪೋಷಕನು ಯಾ ವಿಚಾರಕನು ಯಾ ರಕ್ಷಣಾಸಚಿ, ಅಥವಾ ಅನ್ಯದೇಶ ನಿವಾಸಿಯ ಮುತಾಲಿಕನು, ಅವರ ಆದಾಯ ವ ನಫೆಯ ಲೆಖ್ಖದ ಪಟ್ಟಿಯನ್ನು ಕಲೆಕ್ಟರವರು ಕೇಳಿದ್ದಾಗ ಬರೆದು ದಸ್ಕತು ಹಾಕಿ ಅದು ಯಥಾರ್ಥವಾದ್ದೆಂದು ಪ್ರಮಾಣಪೂರ್ವಕವಾಗಿ ತಿಳಿಯ ಪಡಿಸಿ ಕೊಡ ತಕ್ಕದ್ದು.

೧೪. ಈ ಆಕ್ಟಿಗನುಗುಣವಾದ ತೆರಿಗೆಗೆ ಯಾರ್ಯಾರು ಗುರಿಯಾಗಿದ್ದಾರೆಂಬುವದನ್ನು ಸದರಿ ಪಟ್ಟಿಯ ಪ್ರಕಾರ ಪ್ರತಿ ಒಬ್ಬನು ಕೊಡ ಬೇಕಾದ ತೆರಿಗೆಯ ಮೊಬಲಗು ಇಂತಿಷ್ಟು ಎಂಬದನ್ನೂ ಕಲೆಕ್ಟರವರು ಆಗಿಂದಾಗ್ಯೆ ನಿಶ್ಚಯಿಸ ತಕ್ಕದ್ದು.

೧೫. ತೆರಿಗೆ ನಿಶ್ಚಯಿಸುವ ಸಂವತ್ಸರದ ಒಳಗಾಗಿ ಈ ಭಾಗಕ್ಕನುಗುಣವಾದ ತೆರಿಗೆಗೆ ಪ್ರಥಮತಾ ಗುರಿಯಾಗುವವನ ವಿಷಯದಲ್ಲಿ ಸಂಗತ್ಯಾನುಸಾರವಾಗಿ ಕಲೆಕ್ಟರವರು ಹುಕುಂ ಮಾಡುವ ಪ್ರಕಾರ, ಆ ಕಾಲಕ್ಕೆ ಅವನ ಆದಾಯದ ವ ನಫೆಯ ಸರಾಸರಿ ಮೊಬಲಗು ಎಷ್ಟಾಗುತ್ತದೋ ಅದರ ಮೇಲೆ ಲೆಖ್ಖ ಮಾಡ ತಕ್ಕದ್ದು.

೧೬. ಕಲೆಕ್ಟರವರು ಈ ಆಕ್ಟಿಗನುಗಣವಾದ ತೆರಿಗೆಗೆ ಗುರಿಯಾಗುವ ಪ್ರತಿ ಒಬ್ಬಗೆ ಈ ಕೆಳಗಿನ ತಪಸೀಲು ನಮೂದಿಸಿ ಒಂದು ನೋಟೀಸು ಸಾದರ ಮಾಡ ತಕ್ಕದ್ದು.

೧. ಅಂಥಾ ಮನುಷ್ಯನ ಹೆಸರು ಮತ್ತು ವೃತ್ತಿ, ಕಸಬು, ಅಥವಾ ಆದಾಯದ ಯಾ ನಫೆಯ ಇತರ ಮೂಲ.

೨. ಯಾವ ಸಂವತ್ಸರಕ್ಕೆ ಯಾ ಸಂವತ್ಸರದ ಭಾಗಕ್ಕೆ ತೆರಿಗೆ ಪಾವತಿ ಮಾಡ ಬೇಕಾದ್ದೋ, ಆ ಸಂವತ್ಸರ ಯಾ ಸಂವತ್ಸರದ ಭಾಗ.

೩. ಅವನ ಆದಾಯ ಯಾ ನಫೆ ಉತ್ಪತ್ತಿಯಾಗುವ ಸ್ಥಳ ಯಾ ಸ್ಥಳಗಳು, ಜಿಲ್ಲೆ ಯಾ ಜಿಲ್ಲೆಗಳು.

೪. ಪಾವತಿ ಮಾಡ ಬೇಕಾದ ಮೊಬಲಗು.

ಸದರಿ ಮೊಬಲಗನ್ನು ಆ ನೋಟೀಸು ಸಾದರಾದ ೧೫ ದಿವಸಗಳೊಳಗೆ ಪಾವತಿ ಮಾಡ ಬೇಕೆಂದು ಅದರಲ್ಲಿ ನಮೂದಿಸ ತಕ್ಕದ್ದು.

೧೭. ಸದರಿ ಮೊಬಲಗನ್ನು ಕಲೆಕ್ಟರವರಿಗೆ ಪಾವತಿ ಮಾಡ ತಕ್ಕದ್ದು. ಹಾಗೆ ಪಾವತಿ ಮಾಡಿದವನಿಗೆ ಅವರು ರಶೀದು ಕೊಡ ತಕ್ಕದ್ದು.

ಪರಂತು, ಅಂಥಾ ಆದಾಯ ಯಾ ನಫೆ ಒಂದು ಸ್ಥಳ ಯಾ ಜಿಲ್ಲೆಗಿಂತ ಹೆಚ್ಚು ಸ್ಥಳಗಳಲ್ಲಿ ಯಾ ಜಿಲ್ಲೆಗಳಲ್ಲಿ ಉತ್ಪತ್ತಿಯಾಗುವದಾದರೆ, ನೋಟೀಸಿನಲ್ಲಿ ನಮೂದಿಸೋಣಾದವನು ಯಾವ ಸ್ಥಳದಲ್ಲಿ ಯಾ ಜಿಲ್ಲೆಯಲ್ಲಿ ವಾಸ ಮಾಡುತ್ತಾನೋ, ಅಲ್ಲಿಯ ಕಲೆಕ್ಟರವರಿಗೆ ಪಾವತಿ ಮಾಡಿ ರಶೀದು ಪಡಕೊಳ್ಳ ತಕ್ಕದ್ದು; ಅಥವಾ ಒಂದು ವರ್ತಕ ಕೂಟದ ವಿಷಯದಲ್ಲಿ ಅದರ ಕೆಲಸ ನಡಿಸುವ ಮುಖ್ಯ ಸ್ಥಾನ ಬ್ರಿಟಿಶ ಇಂಡ್ಯದಲ್ಲಿ ಎಲ್ಲಿದೆಯೋ, ಅಲ್ಲಿಯ ಕಲೆಕ್ಟರವರಿಗೆ ಪಾವತಿ ಮಾಡಿ ರಶೀದು ಪಡಕೊಳ್ಳ ತಕ್ಕದ್ದು.

ಅಂಥಾ ರಶೀದು ಕೊಡುವ ಕಲೆಕ್ಟರವರು ಅಥವಾ ಆಗಿಂದಾಗ್ಯೆ ಅವರಿಂದ ಆ ಬಗ್ಯೆ ಅಧಿಕಾರ ಹೊಂದುವ ಇತರ ಉದ್ಯೋಗಸ್ಥನು ಅದಕ್ಕೆ ದಸ್ಕತು ಮಾಡಿ ಕೊಡ ತಕ್ಕದ್ದು; ಸದರಿ ದಸ್ಕತನ್ನು ಬೇರೆ ಸಾಕ್ಷಿಯನ್ನು ಅಪೇಕ್ಷಿಸದೇ ಸರಿಯಾದ್ದೆಂದು ಅಂಗೀಕರಿಸ ತಕ್ಕದ್ದು.

೧೮. ಅಂಥಾ ಪ್ರತಿ ರಶೀದಿಯಲ್ಲಿ ನಮೂದಿಸ ಬೇಕಾದದ್ದೇನಂದರೆ:—

(೧) ಯಾರಿಂದ ಯಾ ಯಾರಿಗೋಸ್ಕರ ತೆರಿಗೆ ಪಾವತಿ ಮಾಡೋಣಾಗುತ್ತದೋ, ಅವನ ಹೆಸರು ಮತ್ತು ಅವನ ಆದಾಯದ ಯಾ ನಫೆಯ ಮೂಲ ಯಾ ಮೂಲಗಳು;

(೨) ಯಾವ ಸಂವತ್ಸರಕ್ಕೆ ಯಾ ಸಂವತ್ಸರದ ಭಾಗಕ್ಕೆ ತೆರಿಗೆ ಪಾವತಿ ಮಾಡೋಣಾಯಿತೋ, ಆ ಸಂವತ್ಸರ ಯಾ ಸಂವತ್ಸರದ ಭಾಗ;

(೩) ಪಾವತಿ ಮಾಡೋಣಾದ ಮೊಬಲಗು ಮತ್ತು ಪಾವತಿಯ ತಾರೀಕು.

(೪) ಆದಾಯ ಯಾ ನಫೆ ಉತ್ಪತ್ತಿಯಾಗುವ ಸ್ಥಳ ಯಾ ಸ್ಥಳಗಳು, ಜಿಲ್ಲೆ

ಯಾ ಜಿಲ್ಲೆಗಳು; ಅದಕ್ಕೆ ಸಂಬಂಧವಾದ ಸಮಸ್ತ ವಿಷಯಗಳಲ್ಲಿಯೂ ಅದನ್ನು ಸ್ವತಸ್ಸಿದ್ಧವಾದ ಸಾಕ್ಷ್ಯವಾಗಿ ಅಂಗೀಕರಿಸ ತಕ್ಕದ್ದು.

೧೯. ಯಾವನಾದರೊಬ್ಬನು ತನಗೆ ವಿಧಿಸಿದ ತೆರಿಗೆಯ ಮೊಬಲಗನ್ನು ಕುರಿತು ಆಕ್ಷೇಪಿಸುವವನಾಗಿದ್ದರೆ, ಅಥವಾ ಈ ಭಾಗಕ್ಕನುಗುಣವಾಗಿ ತನಗೆ ತೆರಿಗೆ ವಿಧಿಸ ಕೂಡದು ಎಂದು ಹೇಳುವವನಾಗಿದ್ದರೆ, ಅವನು ತೆರಿಗೆ ಕಮ್ಮಿ ಮಾಡ ಬೇಕು ಯಾ ಮೋಖುಪ್ ಮಾಡ ಬೇಕು ಎಂಬ ತನ್ನ ಹಕ್ಕನ್ನು ಸ್ಥಿರ ಪಡಿಸುವದಕ್ಕಾಗಿ ಕಲೆಕ್ಟರವರಿಗೆ ಅರ್ಜಿ ಮೂಲಕವಾಗಿ ಜಾಹಿರು ಮಾಡಿ ಕೊಳ್ಳ ಬಹುದು; ಯಾವಾಗಂದರೆ ಮೇಲೆ ಕಾಣಿಸಿರುವ ನೋಟಿಸಿನಲ್ಲಿ ನಮೂದಿಸಿದ ವಾಯಿದೆಯ ಒಳಗಾಗಿ, ಅಥವಾ ಸದರಿ ನೋಟೀಸು ತಲಪಲಿಲ್ಲವೆಂದು ಕಲೆಕ್ಟರವರಿಗೆ ಸಮಾಧಾನವಾದರೆ, ಆ ವಾಯಿದೆ ಕಳದನಂತರ ಒಂದು ತಿಂಗಳ ಒಳಗೆ ಯಾವಾಗಲಾದರೂ ಆ ಪ್ರಕಾರ ಅರ್ಜಿ ಬರ ಕೊಳ್ಳ ಬಹುದು.

ಅರ್ಜಿಯು ಈ ಆಕ್ಟಿಗೆ ಸೇರಿರುವ B ಗುರ್ತು ಪಟ್ಟಿಯಲ್ಲಿರುವ ನಮೂನೆಯ ಪ್ರಕಾರವಾಗಲಿ ಸಂಗತ್ಯಾನುಸಾರವಾಗಿ ಕೂಡಿದ ಮಟ್ಟಿಗೆ ಅದರ ಪ್ರಕಾರವಾಗಲಿ ಇರ ತಕ್ಕದ್ದು. ಅದನ್ನು ೮ ಆಣೆ ಕಿಮ್ಮತಿನ ತಸ್ಸೆ ಕಾಗದದಲ್ಲಿ ಬರಿಯ ತಕ್ಕದ್ದು. ಕಾನೂನು ಪ್ರಕಾರ ದಾವಾ ಅರ್ಜಿಗಳನ್ನು ದೃಢ ಪಡಿಸ ಬೇಕಾದ ಮೇರಿಗೆ ಅರ್ಜಿದಾರನು ಯಾ ಇತರ ತಕ್ಕ ಜನ ಸದರಿ ಅರ್ಜಿಯಲ್ಲಿದ್ದ ವಿವರಗಳನ್ನು ದೃಢ ಪಡಿಸ ತಕ್ಕದ್ದು.

ಸುಳ್ಳೆಂದು ತನಗೆ ಗೊತ್ತಾದ್ದು ಯಾ ಸುಳ್ಳೆಂದು ತಾನು ನಂಬಿದ್ದು ಯಾ ನಿಶ್ಚಯವೆಂದು ತಾನು ನಂಬದೇ ಇದ್ದದ್ದು, ಇಂಥಾ ಸುಳ್ಳು ಸಂಗತಿಗಳು ಅಂಥಾ ಅರ್ಜಿಯಲ್ಲಿ ನಮೂದಿಸಿದರೆ, ಅಂಥವನನ್ನು ನ್ಯಾಯಸಂಬಂಧವಾದ ನಡವಳತೆಯಲ್ಲಿ ಮನಃಪೂರ್ವಕವಾಗಿ ಸುಳ್ಳು ಸಾಕ್ಷಿ ಕೊಟ್ಟವನೆಂದು ಗ್ರಹಿಸ ತಕ್ಕದ್ದು.

೨೦. ಅರ್ಜಿ ದರ್ಯಾಪ್ತಿ ಬಗ್ಗೆ ಕಲೆಕ್ಟರವರು ದಿವಸವನ್ನು ನೇಮಕ ಮಾಡ ತಕ್ಕದ್ದು. ಮತ್ತು ಆ ಪ್ರಕಾರ ನೇಮಕ ಮಾಡಿದ ದಿವಸದಲ್ಲಿ ಅಥವಾ ದರ್ಯಾಪ್ತಿಯನ್ನು ಮತ್ತೊಂದು ದಿವಸಕ್ಕೆ ನಿಲ್ಲಿಸಿದ್ದೋಣಾಗಿದ್ದರೆ, ಆ ದಿವಸದಲ್ಲಿ ಸದರಿ ಅರ್ಜಿಯನ್ನು ಕುರಿತು ವಿಚಾರಣೆ ಮಾಡಿ ಅದರ ಮೇಲೆ ಹುಕುಂ ಕೊಡ ತಕ್ಕದ್ದು.

ಸದರಿ ಹುಕುಂ ಅರ್ಜಿದಾರನ ಪಕ್ಷವಾಗಿರ ಬಹುದು, ಅಥವಾ ಸುಮ್ಮನೆ ಅರ್ಜಿಯನ್ನು ತಿರಸ್ಕರಿಸ ಬಹುದು, ಅಥವಾ ಅರ್ಜಿಯನ್ನು ತಿರಸ್ಕರಿಸಿ ಅರ್ಜಿದಾರನ ತೆರಿಗೆಯನ್ನು ಇನ್ನು ಹೆಚ್ಚಿಸಿ ಆ ಮೊಬಲಗನ್ನು ಹುಕುಮಿನಲ್ಲಿ ನಮೂದಿಸ ಬಹುದು.

ಆ ಹುಕುಂ ಅರ್ಜಿದಾರನ ಪಕ್ಷವಾಗಿದ್ದರೆ, ಕಲೆಕ್ಟರವರು ತಸ್ಸೆ ಕಿಮ್ಮತನ್ನು ಕೂಡಲೆ ಅವನಿಗೆ ವಾಪಸು ಕೊಡ ತಕ್ಕದ್ದು.

ಆ ಹುಕುಂ ಅರ್ಜಿಯನ್ನು ಸುಮ್ಮನೆ ತಿರಸ್ಕರಿಸಿದರೆ, ಅಥವಾ ಅರ್ಜಿಯನ್ನು ತಿರಸ್ಕರಿಸಿ ಅರ್ಜಿದಾರನ ತೆರಿಗೆಯನ್ನು ಇನ್ನೂ ಹೆಚ್ಚಿಸಿದರೆ, ಅರ್ಜಿದಾರನು (ಸಂಗತ್ಯಾನುಸಾರವಾಗಿ) ಸದರಿ ನೋಟೀಸಿನಲ್ಲಿ ಯಾ ಹೆಚ್ಚಿಸಿದ ಹುಕುಮಿನಲ್ಲಿ ನಮೂದಿಸಿದ ಮೊಬಲಗನ್ನು ಸದರಿ ಹುಕುಂ ಕೊಟ್ಟ ಒಂದು ವಾರದ ಒಳಗೆ ಪಾವತಿ ಮಾಡ ತಕ್ಕದ್ದು.

೨೧. ೨೦ನೆ ಪ್ರಕರಣಕ್ಕನುಗುಣವಾಗಿ ಯಾವ ಹುಕುಮಿನಿಂದಾದರೂ ಅಸಂತುಷ್ಟನಾಗುವ ಯಾವ ಮನುಷ್ಯನಾಗಲಿ ಅವನಿಗೆ ವಿಧಿಸಿದಂಥಾ ಅಥವಾ ಹೆಚ್ಚಿಸಿದಂಥಾ ತೆರಿಗೆಯ ಮೊ

ಬಲಗನ್ನು ಪಾವತಿ ಮಾಡಿ ಬಿಟ್ಟು, ಸದರಿ ಹುಕುಂ ಕೊಟ್ಟ ತಾರೀಕಿನಿಂದ ೧೫ ದಿವಸಗಳೊಳಗೆ ಆ ಡಿವಿಜನಿನ ಕಂದಾಯ ಕಮ್ಮಿಷನರವರ ಬಳಿಯ ಬರಹಮೂಲಕವಾಗಿ ಅಪ್ಪೀಲು ದಾಖಲು ಮಾಡ ಬಹುದು. ಅಂಥಾ ಅಪ್ಪೀಲಿನ ಮೇಲೆ ಅವರು ಕೊಡುವ ಫೈಸಲು ಆಖೈರು ಫೈಸಲಾಗಿರ ತಕ್ಕದ್ದು.

ಈ ಪ್ರಕರಣಕ್ಕನುಗುಣವಾಗಿ ದಾಖಲ್ ಮಾಡುವ ಪ್ರತಿ ಅಪ್ಪೀಲ ಅರ್ಜಿಯು ಒಂದು ರೂಪಾಯಿ ಕಿಮ್ಮತಿನ ತಸ್ಪೆ ಕಾಗದದಲ್ಲಿ ಆಗ ತಕ್ಕದ್ದು. ಅದರ ಸಂಗಡ ಅರ್ಜಿಯ ನಕಲು ವ ಕಲೆಕ್ಟರು ಕೊಟ್ಟ ಹುಕುಮು (ಈ ಎರಡನ್ನು ಬಾಶಿ ಕಾಗದದಲ್ಲಿರ ಬಹುದು). ಮತ್ತು ಈ ವಿಷಯದಲ್ಲಿ ಸಂಬಂಧವಾದ ಇತರ ದಸ್ತೈವಜುಗಳು ಏನಾದರೂ ಇದ್ದರೆ, ಅವುಗಳನ್ನೆಲ್ಲಾ ಕಳುಹಿಸಿ ಕೊಡ ತಕ್ಕದ್ದು.

ಸದರಿ ಅಪ್ಪೀಲಿನ ಮೇಲೆ ಆದ ಫೈಸಲು ಅಪ್ಪೀಲುದಾರನ ಪಕ್ಷವಾಗಿದ್ದರೆ, ಅವನು ಅಪ್ಪೀಲು ಮಾಡಿದ ಅರ್ಜಿಯ ತಸ್ಪೆ ಕಿಮ್ಮತನ್ನು ಅವನು ಕೊಡ ಬೇಕಾದ ಹಣಕ್ಕಿಂತ ಹೆಚ್ಚಾಗಿ ಕೊಟ್ಟ ಹಣದ ಸಮೇತ ಯಾ (ಅರ್ಜಿದಾರನು ಈ ಆಕ್ಟಿಗನುಗುಣವಾದ ತೆರಿಗೆಗೆ ಗುರಿಯಾದವನಲ್ಲ ಎಂದು ಫೈಸಲಾದಲ್ಲಿ) ಅವನು ಕೊಟ್ಟ ಎಲ್ಲಾ ಹಣದ ಸಮೇತ ಕೂಡಲೆ ವಾಪಸು ಕೊಡ ತಕ್ಕದ್ದು.

೨೨. ಅರ್ಜಿದಾರನಿಗೆ ತೆರಿಗೆ ಹ್ಯಾಗೆ ನಿಶ್ಚಯಿಸ ಬೇಕೆಂಬ ವಿಷಯದಲ್ಲಿ ಸಾಕ್ಷಿ ಕೊಡಲಿಕ್ಕೆ ತಕ್ಕವನು ಎಂದು ತೋರುವ ಯಾರನ್ನಾದರೂ ಕಲೆಕ್ಟರವರಾಗಲೀ ಕಮ್ಮಿಷನರವರಾಗಲೀ ಸಮನ್ ಕೊಟ್ಟು ಹಾಜರಾಗ ಬೇಕೆಂದು ಕರಿಸಲೂ, ಆ ಪ್ರಕಾರ ಬಂದವನನ್ನೂ ಅರ್ಜಿದಾರನನ್ನೂ ಪ್ರಮಾಣ ಮಾಡಿಸಿ ದರ್ಯಾಪ್ತಿ ಮಾಡಲೂ ಬಹುದು. ಮತ್ತು ಅರ್ಜಿದಾರನಿಗೆ ಬ್ರಿತ್ಪ ಇಂಧ್ಯದಲ್ಲಿ ಉತ್ಪತ್ತಿಯಾಗುವ ಆದಾಯದ ಯಾ ನಫೆಯ ಮೂಲಕ್ಕೆ ಸಂಬಂಧ ಪಟ್ಟದ್ದಾಗಿ ಅವರ ಪೈಕಿ ಪ್ರತಿ ಒಬ್ಬನ ಆಧೀನದಲ್ಲಿರುವ ದಸ್ತೈವಜುಗಳನ್ನು ಹಾಜರು ಮಾಡಿ ತೋರಿಸ ಬೇಕೆಂದು ಹುಕುಂ ಮಾಡ ಬಹುದು.

೨೩. ಈ ಆಕ್ಟಿಗನುಗುಣವಾಗಿ ಒಬ್ಬನಿಗೆ ತೆರಿಗೆ ನಿಶ್ಚಯಿಸುವಲ್ಲಿ ೧೭ನೇ ಪ್ರಕರಣದ ಪ್ರಕಾರ ಕೊಟ್ಟ ರಶೀದಿಯಲ್ಲಿ ಅವನ ಆದಾಯದ ಯಾ ನಫೆಯ ಮೂಲ ಬಿಟ್ಟು ಹೋಗಿಯದೆ ಎಂತಲೂ ಅದು ಆಗಲೆ ತಿಳಿದಿದ್ದರೆ ಅವನ ತೆರಿಗೆ ಇನ್ನೂ ಹೆಚ್ಚುವದೆಂತಲೂ ಕಲೆಕ್ಟರವರಿಗೆ ನಂಬಲಿಕ್ಕೆ ಕಾರಣವಿದ್ದಲ್ಲಿ ಅವರು ಆ ಬಗ್ಗೆ ಅವನು ಕೊಡ ಬೇಕಾಗುವ ಮೊಬಲಗನ್ನು ನಮೂದಿಸಿ ಅವನಿಗೆ ಮತ್ತೊಂದು ನೋಟೀಸನ್ನು ಸಾದರು ಮಾಡಿಸ ತಕ್ಕದ್ದು. ಅಂಥಾ ಸಂಗತಿಯಲ್ಲಿ ಹದಿನಾರು ಮೊದಲು ಇಪ್ಪತ್ತೆರಡರ ವರೆಗಿನ (ಈ ಎರಡು ಶೇರಿದ) ಪ್ರಕರಣಗಳಲ್ಲಿ ಅಡಗಿರುವ ನಿಬಂಧನೆಗಳನ್ನು ಅನುಸರಿಸಿ ನಡೆಯ ತಕ್ಕದ್ದು.

೨೪. ಹದಿಮೂರನೆ ಪ್ರಕರಣದ ಪ್ರಕಾರ ಕೊಡ ಬೇಕಾದ ಲೆಖ್ಖದ ಪಟ್ಟಿಯನ್ನು ಯಾ ಪ್ರಮಾಣಪತ್ರಿಕೆಯನ್ನು ಕೊಡಲಿಕ್ಕೆ ತಪ್ಪುವ ಪ್ರತಿ ಸ್ಥಿತಿಸಂರಕ್ಷಕನಿಗೆ, ಪೋಷಕನಿಗೆ, ವಿಚಾರಕನಿಗೆ, ಯಾ ರಕ್ಷಣಾಸಚಿಗೆ, ಯಾ ಮುತಾಲಿಕನಿಗೆ, ಮೆಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ ಎಷ್ಟು ದಿವಸಗಳ ಸಾವಕಾಶ ಆಯಿತೋ, ಅಷ್ಟು ದಿವಸಗಳಿಗೆ ದಿನ ಒಂದಕ್ಕೆ ಹತ್ತು ರೂಪಾಯಿ ಜುಲ್ಮಾನೆ ಹಾಕ ತಕ್ಕದ್ದು.

ಈ ಪ್ರಕರಣಕ್ಕನುಗುಣವಾಗಿ ವಿಧಿಸಿದ ಯಾವ ಜುಲ್ಮಾನೆಯನ್ನಾದರೂ ಪೂರ್ಣವಾಗಿ ಆಗಲಿ ಅದರ ಒಂದು ಭಾಗವನ್ನಾಗಲಿ ಮಾಫು ಮಾಡುವದಕ್ಕೆ ಡಿವಿಜನಿನ ಕಂದಾಯ ಕಮ್ಮಿಷನರವರು ಅಧಿಕಾರ ಉಳ್ಳವರಾಗಿರ ತಕ್ಕದ್ದು.

೨೫. ಯಾರಾದರೂ ೧೬ನೇ ಪ್ರಕರಣಕ್ಕನುಗುಣವಾದ ನೋಟೀಸು ಸಾದರಾದ ಮೇಲೆ, ಸದರಿ ನೋಟೀಸಿನಲ್ಲಿ ಕಾಣಿಸಿದ ವಾಯಿದೆ ಒಳಗೆ ತಾನು ಕೊಡ ಬೇಕಾದ ಮೊಬಲಗನ್ನು ಕೊಡದೇ ಹೋದರೆ, ಮೆಜಿಸ್ಟ್ರೇಟರ ಮುಂದೆ ತಪ್ಪು ಸಾಬಿತಾದ ಮೇಲೆ, ಅವನಿಗೆ ಸದರಿ ಕಾಣಿಸಿದ ಎರಡಷ್ಟು ಮೊಬಲಗನ್ನು ಜುಲ್ಮಾನೆ ಹಾಕ ತಕ್ಕದ್ದು. ಪರಂತು ೧೯ನೇ ಪ್ರಕರಣಕ್ಕನುಗುಣವಾಗಿ ಅವನು ಅರ್ಜಿ ಕೊಡದೆ ಇದ್ದರೆ ಮಾತ್ರ ಅಂಥಾ ಜುಲ್ಮಾನೆಗೆ ಗುರಿಯಾಗುತ್ತಾನೆ.

ಅಂಥಾ ಯಾವ ಮನುಷ್ಯನಾದರೂ ೧೯ನೇ ಪ್ರಕರಣಕ್ಕನುಗುಣವಾಗಿ ಅರ್ಜಿ ಕೊಟ್ಟು ಹಣ ಕೊಡ ಬೇಕೆಂದು ಅದರ ಮೇಲೆ ಹುಕುಂ ಆದ್ದಲ್ಲಿ ಸದರಿ ಹುಕುಂ ಆದ ಒಂದು ವಾರದ ಒಳಗೆ ಪಾವತಿ ಮಾಡದೆ ಇದ್ದರೆ, ಮೆಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ ಸದರಿ ನೋಟೀಸಿನಲ್ಲಿ ಕಾಣಿಸಿದ ಎರಡಷ್ಟು ಮೊಬಲಗನ್ನು ಆ ಮನುಷ್ಯನಿಗೆ ಜುಲುಮಾನೆ ಮಾಡ ತಕ್ಕದ್ದು.

ಹಾಗೆ ತಪ್ಪು ಸಾಬೀತಾದವನಿಂದ ಜುಲ್ಮಾನೆ ವಸೂಲಾದ ಮೇಲೆ, ಕಲೆಕ್ಟರವರು ಇನ್ನೇನು ಹೆಚ್ಚು ಹಣ ಕೇಳದೆ ಅವನಿಗೆ ರಶೀದು ಕೊಡ ತಕ್ಕದ್ದು. ಅಂಥಾ ಪ್ರತಿ ರಶೀದಿಯ ತಾರೀಕು ಜುಲ್ಮಾನೆ ವಸೂಲಾದ ತಾರೀಕಿನಿಂದ ಎಣಿಸ ಬೇಕು. ಮತ್ತು ಮೇಲೆ ಹೇಳಿದ ನಿಬಂಧನೆಗಳ ಪ್ರಕಾರ ವಿನಹಾ, ಈ ಆಕ್ಟಿನಲ್ಲಿ ರಶೀದಿಗಳಿಗೆ ಸಂಬಂಧ ಪಟ್ಟ ನಿಬಂಧನೆಗಳು ಈ ಪ್ರಕರಣಕ್ಕನುಗುಣವಾದ ನಿಬಂಧನೆಗಳಿಗೆ ತಾಗುತ್ತವೆ.

೨೬. ಒಂದು ವರ್ತಕಕೂಟದ ಸಂಗತಿಯಲ್ಲಿ ಜುಲ್ಮಾನೆ ವಿಧಿಸುವ ಮೆಜಿಸ್ಟ್ರೇಟನು ಆ ವರ್ತಕಕೂಟಕ್ಕೆ ಅಥವಾ ಅದರ ಅಂಶಕರ ಪೈಕಿ ಎಲ್ಲವರಿಗೆ ಯಾ ಅವರಲ್ಲಿ ಯಾರೊಬ್ಬನಿಗೆ ಶೇರಿದ ಯಾ ಯಾವ ಚರಸೊತ್ತನ್ನಾದರೂ ಜಪ್ತು ಮಾಡಿ ಲೈಲಾಮಿನಿಂದ ಹಣ ವಸೂಲು ಮಾಡುವಂತೆ ಕೈಹಿಂಡಿಪತ್ರಿಕೆ ಕೊಡ ಬಹುದು.

೨೭. ೨೪ನೇ ಯಾ ೨೫ನೇ ಪ್ರಕರಣಕ್ಕೆ ಒಳಪಟ್ಟ ಯಾವ ತಪ್ಪಿಗೋಸ್ಕರವಾಗಲಿ ಕಲೆಕ್ಟರವರ ಪ್ರೇರಣೆ ಹೊರ್ತು ಯಾರ ಮೇಲಾದರೂ ಮೊಕದ್ದಮೆ ತರ ಕೂಡದು.

ತೆರಿಗೆಯ ಪಾವತಿ.

೨೮. ೮ನೇ ಯಾ ೯ನೇ ಪ್ರಕರಣದ ಪ್ರಕಾರ ವಜಾ ಮಾಡಿದ ತೆರಿಗೆಗಳ ವಿನಹಾ ಈ ಆಕ್ಟಿಗನುಗುಣವಾದ ಸಮಸ್ತ ತೆರಿಗೆಗಳು ಪ್ರತಿ ಸಂವತ್ಸರದ ಏಪ್ರಿಲ ತಿಂಗಳ ಮೊದಲನೇ ತಾರೀಕಿನಲ್ಲಿ ಪಾವತಿಯಾಗ ತಕ್ಕದ್ದು.

ಕಂತುಗಳು.

ಪರಂತು ಸದರೀ ಪ್ರಕಾರ ಪಾವತಿಯಾಗ ಬೇಕಾದ ಮೊಬಲಗು ೨೪ ರೂಪಾಯಿಗೆ ಸಮವಾಗಿ ಯಾ ಅದಕ್ಕೆ ಮಿಾರಿರುವ ಪ್ರತಿ ಸಂಗತಿಯಲ್ಲಿ ಅದನ್ನು ಪ್ರತಿ ಸಂವತ್ಸರದಲ್ಲಿ ಎರಡು ಸಮ ಕಂತುಗಳಾಗಿ ಪಾವತಿ ಮಾಡ ಬಹುದು; ಮೊದಲನೆ ಕಂತನ್ನು ೧೬ನೇ ಪ್ರಕರಣದಲ್ಲಿ ನಮೂದಿಸಿರುವ ನೋಟೀಸು ಸಾದರಾದ ಮೇಲೆ ೧೫ ದಿವಸಗಳೊಳಗೆ ಯಾವಾಗಾ

ದರೂ ಪಾವತಿ ಮಾಡ ತಕ್ಕದ್ದು. ಎರಡನೆ ಕಂತನ್ನು ಅಕ್ಟೋಬರ ತಿಂಗಳ ಮೊದಲನೇ ತಾರೀಕಿನಲ್ಲಿ ಪಾವತಿ ಮಾಡ ಬೇಕು.

೩೦. ಯಾವನಾದರೂ ಮೊದಲನೆ ಕಂತನ್ನು ಮಾತ್ರ ಪಾವತಿ ಮಾಡಿ, ಏಪ್ರಿಲ ತಿಂಗಳ ಮೊದಲನೆ ತಾರೀಕಿನ ಮತ್ತು ಅಕ್ಟೋಬರು ತಿಂಗಳಿನ ಎರಡನೆ ತಾರೀಕಿನ ಮಧ್ಯದಲ್ಲಿ ಸತ್ತ ಪಕ್ಷದಲ್ಲಿ ಆಗಲೀ, ಯಾ ಅವನಿಗೆ ಯಾವ ಮೂಲಕ ಉತ್ಪತ್ತಿಯಾಗುವ ನಫೆಯ ಮೇಲೆ ತೆರಿಗೆ ನಿಶ್ಚಯಿಸಿಯದೆಯೋ, ಆ ವೃತ್ತಿ ಯಾ ಕಸಬು ನಡಿಸುವರೆ ರೋಗ ಯಾ ಇತರ ದುರ್ಬಲದಿಂದ ಅಸಮರ್ಥನಾಗಿ ಹೋದ ಪಕ್ಷದಲ್ಲಿಯಾಗಲೀ, ಯಾ ದಿವಾಳಿ ತೆಗದ ದೇಣೇದಾರರ ಬಿಡುಗಡೇ ಬಗ್ಗೆ ಉಂಟಾದ ಆಕ್ಟಿನ ಪ್ರಯೋಜನವನ್ನು ಪಡ ಕೊಂಡ ಪಕ್ಷದಲ್ಲಿ ಆಗಲೀ, ತನ್ನ ದೇಣೇದಾರನ ಪ್ರಯೋಜನಕ್ಕಾಗಿ ತನ್ನ ಆಸ್ತಿಯನ್ನೆಲ್ಲಾ ಸಂರಕ್ಷಕರ ವಶ ಪಡಿಸಿದಲ್ಲಿ ಆಗಲೀ, ಅವನಿಂದ ಎರಡನೆ ಕಂತಿನ ಹಣವನ್ನು ತೆಗದು ಕೊಳ್ಳ ಹಕ್ಕಿರಲಿಕ್ಕಿಲ್ಲ.

ಯಾವದಾದರೊಂದು ವರ್ತಕಕೂಟ ಸದರಿ ಮೊದಲನೆ ಕಂತನ್ನು ಮಾತ್ರ ಪಾವತಿ ಮಾಡಿ ಏಪ್ರಿಲ ತಿಂಗಳ ಮೊದಲನೆ ತಾರೀಕಿನ ಮತ್ತು ಅಕ್ಟೋಬರ ತಿಂಗಳಿನ ಎರಡನೆ ತಾರೀಕಿನ ಮಧ್ಯದಲ್ಲಿ ಪಾಲುಗಾರಿಕೆ ಬಿಟ್ಟು ಬಿಟ್ಟರೆ, ಯಾ ದಿವಾಳಿ ತೆಗದ ದೇಣೇದಾರರ ಬಿಡುಗಡೇ ಬಗ್ಗೆ ಉಂಟಾದ ಆಕ್ಟಿನ ಪ್ರಯೋಜನವನ್ನು ಪಡ ಕೊಂಡರೆ, ಯಾ ಆಸ್ತಿಯನ್ನೆಲ್ಲಾ ದೇಣೇದಾರರ ಪ್ರಯೋಜನಕ್ಕಾಗಿ ಸಂರಕ್ಷಕರ ವಶ ಪಡಿಸಿದರೆ, ಅಂಥಾ ವರ್ತಕಕೂಟದಿಂದ ಎರಡನೆ ಕಂತಿನ ಹಣವನ್ನು ತೆಗದು ಕೊಳ್ಳ ಹಕ್ಕಿರಲಿಕ್ಕಿಲ್ಲ.

೩೨. ಮೇಲೆ ಹೇಳಿದ ಎರಡನೆ ಕಂತು ಪಾವತಿ ಮಾಡಲಿಕ್ಕೆ ಗುರಿಯಾದ ಯಾವನ ಮೇಲಾದರೂ ಕಲೆಕ್ಟರವರು ಒಂದು ನೋಟೀಸನ್ನು ಸಾದರು ಮಾಡಿಸಿದರೆ, ಮತ್ತು ಆ ನೋಟೀಸು ಸಾದರಾದ ೭ ದಿವಸಗಳೊಳಗೆ ಅ ಕಂತಿನ ಹಣವನ್ನು (ಇಂತಿಷ್ಟೆಂದು ಅದರಲ್ಲಿ ನಮೂದಿಸಿ) ಅವನು ಪಾವತಿ ಮಾಡ ಬೇಕೆಂದು ಅವನಿಗೆ ತಿಳಿಸಿದ್ದರೆ, ನೋಟೀಸು ಜಾರಿ ಮಾಡಿಸಿ ಕೊಂಡವನು ಅದರಲ್ಲಿ ಕಾಣಿಸಿದ ಮೊಬಲಗನ್ನು ಸದರಿ ವಾಯಿದೆಯೊಳಗೆ ಪಾವತಿ ಮಾಡದೆ ಹೋದ್ದಲ್ಲಿ, ಮೆಜಿಸ್ಟ್ರೇಟರ ಮುಂದೆ ತಪ್ಪು ಸಾಬೀತಾದ ಮೇಲೆ, ನೋಟೀಸಿನಲ್ಲಿ ನಮೂದಿಸಿರುವದರ ಎರಡಷ್ಟು ಮೊಬಲಗನ್ನು ಅವನಿಗೆ ಜುಲ್ಮಾನೆ ಹಾಕ ತಕ್ಕದ್ದು.

ಕಂದಾಯ ಕಾನೂನಿನ ಪ್ರಕಾರ ಮಾಡುವ ವಸೂಲಾತಿ.

೩೩. ಕಲ್ಕತ್ತ ಮದ್ರಾಸು ಬೊಂಬಾಯಿ ಷಹರುಗಳ ಸ್ಥಳಿಕ ಸರಹದ್ದುಗಳ ಹೊರಗೆ ಈ ಆಕ್ಟಿಗೆ ವಿರೋಧವಾದ ತಪ್ಪುನಡಿಯುವ ಯಾವ ಸಂಗತಿಯಲ್ಲಾದ್ಯದರೂ ಕಲೆಕ್ಟರವರು ತಮಗೆ ಯುಕ್ತವಾಗಿ ತೋರಿದ ಪಕ್ಷದಲ್ಲಿ, ಮತ್ತು ಸಂಗತ್ಯಾನುಸಾರವಾಗಿ ೧೮ನೇ ಯಾ ೨೩ನೇ ಯಾ ೩೨ನೇ ಪ್ರಕರಣದಲ್ಲಿ ತೋರಿಸಿದ ನೋಟೀಸು ಅವನಿಗೆ ಸಾದರಾಗಿದ್ದ ಪಕ್ಷದಲ್ಲಿ, ಈ ಆಕ್ಟಿಗನುಗುಣವಾಗಿ ಪಾವತಿಯಾಗ ಬೇಕಾದ ಯಾವ ತೆರಿಗೆಯನ್ನಾಗಲೀ ಕಂತನ್ನಾಗಲೀ ಜಮೀನ್ ಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಾಗಿ ಅವನಿಂದ ವಸೂಲು ಮಾಡ ಬಹುದು.

ಆ ತಪ್ಪಿತಸ್ಥನಿಂದ ಸದರೀ ಮೊಬಲಗು ವಸೂಲಾದ ಮೇಲೆ ಕಲೆಕ್ಟರವರು ಇನ್ನೇನು ಹೆಚ್ಚು ಹಣ ತೆಗದು ಕೊಳ್ಳದೆ ಅವನಿಗೆ ಒಂದು ರಶೀದಿ ಕೊಡ ತಕ್ಕದ್ದು.

೩೪. ೧೮೬೯ನೇ ಇಸವಿ ಏಪ್ರಿಲ ತಿಂಗಳಿಗಾಗಿ ೧೮೬೮ನೇ ಇಸವಿಯ ೬ನೇ ಆಕ್ಟಿನ ೫ನೇ ಪ್ರಕರಣದ ಪ್ರಕಾರ ಯಾರಾದರೂ ತೆರಿಗೆಯನ್ನು ಪಾವತಿ ಮಾಡಿ ಇದ್ದರೆ, ಅದನ್ನು ಈ ಆಕ್ಟಿನ ೪ನೇ ಭಾಗಕ್ಕನುಗುಣವಾಗಿ ಸದರಿಯವನು ಮೊದಲು ದಫಾ ಪಾವತಿ ಮಾಡುವ ಮೊಬಲಗಿನಿಂದ ವಜಾ ಮಾಡ ತಕ್ಕದ್ದು.

೩೭. ಸಾಧ್ಯವಾದ್ದಾಗ್ಯೆಲ್ಲಾ ನೋಟೀಸನ್ನು ಅದರಲ್ಲಿ ಯಾರ ಹೆಸರು ಕಾಣಿಸಿದೆಯೋ ಅವನಿಗೆ ಸಾದರು ಮಾಡ ತಕ್ಕದ್ದು, ಅಥವಾ ವರ್ತಕಕೂಟದ ವಿಷಯದಲ್ಲಿ, ಅದರ ಯಾವನಾದರೊಬ್ಬ ಪಾಲುದಾರನಿಗೆ ಸಾದರು ಮಾಡ ತಕ್ಕದ್ದು.

ಸದರಿ ಮನುಷ್ಯನಾಗಲೀ ಪಾಲುದಾರನಾಗಲೀ ಶಿಕ್ಕದಿದ್ದ ಪಕ್ಷದಲ್ಲಿ ಅವನ ಸಂಗಡ ವಾಸಿಸುವ ಅವನ ಕುಟುಂಬದ ಯಾವನಾದರೊಬ್ಬ ಪ್ರಾಯಸ್ಥನಾದ ಗಂಡಸಿಗೆ ಸಾದರು ಮಾಡ ತಕ್ಕದ್ದು. ಅಂಥಾ ಪ್ರಾಯಸ್ಥನಾದ ಗಂಡಸು ಯಾರೂ ಶಿಕ್ಕದಿದ್ದ ಪಕ್ಷದಲ್ಲಿ ಆ ನೋಟೀಸಿನಲ್ಲಿ ನಮೂದಾಗಿರುವ ಮನುಷ್ಯ ಯಾ ವರ್ತಕಕೂಟ ವಾಡಿಕೆಯಾಗಿ ವಾಸಿಸುವ ಯಾ ಕೆಲಸ ನಡಿಸುವ ಮನೆಯ ಹೊರಬಾಗಲಿಗೆ ನೋಟೀಸು ಸಾದರು ಮಾಡುವ ಉದ್ಯೋಗಸ್ಥನು ಅದನ್ನು ಹಚ್ಚ ತಕ್ಕದ್ದು.

A ಗುತ್ತುರ್ಗ ಪಟ್ಟಿ.

ಸಂವತ್ಸರಕ್ಕೆ ಹುಟ್ಟುವ ನಫೇ ಕಿಮ್ಮತು

				ರೂಪಾಯಿ.		
೫೦೦ ರೂಪಾಯಿಗೆ ಮಿಾರಿ		೭೫೦ಕ್ಕೆ ಕಮ್ಮಿಯಾದರೆ		೬	೦	೦
೭೫೦	,,	೧,೦೦೦	,,	೮	೮	೦
೧,೦೦೦	,,	೧,೫೦೦	,,	೧೨	೦	೦
೧,೫೦೦	,,	೨,೦೦೦	,,	೧೭	೦	೦
೨,೦೦೦	,,	೩,೦೦೦	,,	೨೪	೦	೦
೩,೦೦೦	,,	೪,೦೦೦	,,	೩೪	೦	೦

ಅದಕ್ಕೆ ಮಿಾರಿದ ಆದಾಯ ಯಾ ನಫೆಯ ವಿಷಯದಲ್ಲಿ ನಿಶ್ಚಯಿಸೋಣಾದ ಮೊಬಲಗು ೧೦,೦೦೦ ರೂಪಾಯಿಗಳಿಗಿಂತ ಕಮ್ಮಿಯಾಗಿರುವ ಪರ್ಯಂತರ ಪ್ರತಿ ೧,೦೦೦ ರೂಪಾಯಿ ಬಗ್ಯೆ ಯಾ ಅದರ ಭಿನ್ನಾಂಶದ ಬಗ್ಯೆ ಹೆಚ್ಚಾಗಿ ಕೊಡ ಬೇಕಾದದ್ದು ೧೦ ೦ ೦

೧೦,೦೦೦ ರೂಪಾಯಿಗೆ ಮಿಾರಿ		೧೨,೦೦೦ಕ್ಕೆ ಕಮ್ಮಿಯಾದರೆ		೧೧೦	೦	೦
೧೨,೫೦೦	,,	೧೫,೦೦೦	,,	೧೩೫	೦	೦

ಮಂಡೂಕಸ್ತುತಿ.

ಎರಡು ಮೂರು ಸಾವಿರ ವರುಷಗಳ ಹಿಂದೆ ಒಂದಾನೊಂದು ದಿನ ಬರಗಾಲದಲ್ಲಿ ವಶಿಷ್ಠನೆಂಬ ಋಷಿಯು ಪರ್ಜನ್ಯನೆಂಬ ಮಳೇ ದೇವತೆಯುಂಟೆಂಬ ಭಾವದಿಂದ ಬಿನ್ನವಿಸಿ, ಋಗ್ವೇದದಲ್ಲುಳಿದಿರುವ ಪರ್ಜನ್ಯಸ್ತುತಿ ಎಂಬ ಒಂದು ಸೂಕ್ತದಿಂದ (ಅಂದರೆ ಸು-ಉಕ್ತವೆಂಬ ಒಳ್ಳೇ ನುಡಿಯಿಂದ) ಆ ದೇವತೆ ಕೊಂಡಾಡಿದನಂತೆ. ಅದೇನಂದರೆ,

ಋಗ್ವೇದಸಂಹಿತೆಯ ೭ನೇ ಮಂಡಲದ ೧೦೨ನೇ ಸೂಕ್ತ.

ಪರ್ಜನ್ಯಾಯ ಪ್ರ ಗಾಯತ ದಿವಸ್ ಪುತ್ರಾಯ ಮೀಳ್ಹುಷೇ |
ಸ ನೋ ಯವಸಮ್ ಇಛತು || ೧ ||
ಯೋ ಗರ್ಭಮ್ ಓಷಧೀನಾಂ ಗವಾಂ ಕೃಣೋತ್ಯ್ ಅರ್ವತಾಮ್ |
ಪರ್ಜನ್ಯಃ ಪುರುಷೀಣಾಮ್ || ೨ ||
ತಸ್ಮಾ ಇದ್ ಆಸ್ಯೇ ಹವಿರ್ ಜುಹೋತಾ ಮಧುಮತ್ತಮಮ್ |
ಇಳಾಂ ನಃ ಸಂಯತಂ ಕರತ್ || ೩ ||

ಎನ್ನಲಾಗಿ

ದಿವದ ಮಗನೂ (ಮಳೆ) ಕರೆಯುವವನೂ ಆದ ಪರ್ಜನ್ಯನಿಗೆ ಗಾಯನ ಮಾಡಿರಿ! ಅವನು ನಮಗೆ ಪೈರನ್ನು ದಯೆ ಪಾಲಿಸಲಿ! || ೧ || ಓಷಧಿಗಳಿಗೂ ದನಗಳಿಗೂ ಕುದುರೆಗಳಿಗೂ ಸ್ತ್ರೀಯರಿಗೂ ಗರ್ಭವನ್ನು ಯಾವನು ಉಂಟು ಮಾಡುತ್ತಾನೋ, ಆ ಪರ್ಜನ್ಯನಿಗೆಯೇ (ಅಗ್ನಿಯ) ಬಾಯಿಯಲ್ಲಿ ಬಹಳ ಮಧುವಾದ ಹವಿಸ್ಸನ್ನು ಅರ್ಪಿಸಿರಿ! ಆಹಾರವನ್ನು ನಮಗೆ ತಪ್ಪದಲೇ ಉಂಟು ಮಾಡಲಿ!—ವಶಿಷ್ಠನು ಈ ಸೂಕ್ತ ಹಾಡುತ್ತಿರಲು, ಕಪ್ಪೆಗಳು ಟ್ರೊಂಯಿಂಟ್ರೊಂಯಿಮೆಂದು ಕೂಗಲಿಕ್ಕಾಗಿ ಅವನು ಸಂತೋಷಗೊಂಡು, ಅವನ್ನು ದೇವತೆಗಳೆಂದು, ಹಿಡು ಕೊಂಡು, ಮಂಡೂಕಸ್ತುತಿ ಎಂಬ ಸೂಕ್ತದಿಂದ ಕೊಂಡಾಡಿದನಂತೆ. ಅದೇನಂದರೆ,

ಋಗ್ವೇದಸಂಹಿತೆಯ ೭ನೇ ಮಂಡಲದ ೧೦೩ನೇ ಸೂಕ್ತ.

ಸಂವತ್ಸರಂ ಶಶಯಾನಾ ಬ್ರಾಹ್ಮಣಾ ವ್ರತಚಾರಿಣಃ |
ವಾಚಮ್ ಪರ್ಜನ್ಯಜಿನ್ವಿತಾಮ್ ಪ್ರ ಮಂಡೂಕಾ ಅವಾದಿಷುಃ || ೧ ||
ದಿವ್ಯಾ ಆಪೋ ಅಭಿ ಯದ್ ಏನಮ್ ಆಯನ್ ದೃತಿಂ ನ ಶುಷ್ಕಂ ಸರಸೀ ಶಯಾನಮ್ |
ಗವಾಮ್ ಅಹ ನ ಮಾಯುರ್ ವತ್ಸಿನೀನಾಮ್ ಮಂಡೂಕಾನಾಂ ವಗ್ನುರ್ ಅತ್ರಾ ಸಮ್ ಏತಿ || ೨ ||
ಯದ್ ಈಮ್ ಏನಾನ್ ಉಶತೋ ಅಭ್ಯ್ ಅವರ್ಷೀತ್ ತೃಷ್ಯಾವತಃ ಪ್ರಾವೃಷ್ಯ್ ಆಗತಾಯಾಮ್ |
ಅಖ್ಖಲೀಕೃತ್ಯಾ ಪಿತರಂ ನ ಪುತ್ರೋ ಅನ್ಯೋ ಅನ್ಯಮ್ ಉಪ ವದನ್ತಮ್ ಏತಿ || ೩ ||
ಅನ್ಯೋ ಅನ್ಯಮ್ ಅನು ಗೃಭ್ಣಾತ್ಯ್ ಏನೋರ್ ಅಪಾಮ್ ಪ್ರಸರ್ಗೇ ಯದ್ ಅಮನ್ದಿಷಾತಾಮ್ |
ಮಂಡೂಕೋ ಯದ್ ಅಭಿವೃಷ್ಟಃ ಕನಿಷ್ಕನ್ ಪೃಶ್ನಿಃ ಸಮ್ಪೃಂಕ್ತೇ ಹರಿತೇನ ವಾಚಮ್ || ೪ ||
ಯದ್ ಏಷಾಮ್ ಅನ್ಯೋ ಅನ್ಯಸ್ಯ ವಾಚಂ ಶಾಕ್ತಸ್ಯೇವ ವದತಿ ಶಿಕ್ಷಮಾಣಃ |
ಸರ್ವಂ ತದ್ ಏಷಾಂ ಸಮೃಧೇವ ಪರ್ವ ಯತ್ ಸುವಾಚೋ ವದಥನಾಧ್ಯ್ ಅಪ್ಸು || ೫ ||
ಗೋಮಾಯುರ್ ಏಕೋ ಅಜಮಾಯುರ್ ಏಕಃ ಪೃಶ್ನಿರ್ ಏಕೋ ಹರಿತ ಏಕ ಏಷಾಂ |

ಸಮಾನಂ ನಾಮ ಬಿಭ್ರತೋ ವಿರೂಪಾಃ ಪುರುತ್ರಾ ವಾಚಮ್ ಪಿಪಿಶುರ್ ವದನ್ತಃ || ೬ ||
ಬ್ರಾಹ್ಮಣಾಸೋ ಅತಿರಾತ್ರೇ ನ ಸೋಮೇ ಸರೋ ನ ಪೂರ್ಣಮ್ ಅಭಿತೋ ವದನ್ತಃ |
ಸಂವತ್ಸರಸ್ಯ ತದ್ ಅಹಃ ಪರಿ ಷ್ಠ ಯನ್ ಮಂಡೂಕಾಃ ಪ್ರಾವೃಷೀಣಮ್ ಬಭೂವ || ೭ ||
ಬ್ರಾಹ್ಮಣಾಸಃ ಸೋಮಿನೋ ವಾಚಮ್ ಅಕ್ರತ ಬ್ರಹ್ಮ ಕೃಣ್ವನ್ತಃ ಪರಿವತ್ಸರೀಣಮ್ |
ಅಧ್ವರ್ಯವೋ ಘರ್ಮಿಣಃ ಸಿಷ್ವಿದಾನಾ ಆವಿರ್ ಭವನ್ತಿ ಗುಹ್ಯಾ ನ ಕೇ ಚಿತ್ || ೮ ||
ದೇವಹಿತಿಂ ಜುಗುಪುರ್ ದ್ವಾದಶಸ್ಯ ಋತುಂ ನರೋ ನ ಪ್ರ ಮಿನನ್ತ್ಯ ಏತೇ |
ಸಂವತ್ಸರೇ ಪ್ರಾವೃಷ್ಯ ಆಗತಾಯಾಂ ತಪ್ತಾ ಘರ್ಮಾ ಅಶ್ನುವತೇ ವಿಸರ್ಗಮ್ || ೯ ||
ಗೋಮಾಯುರ್ ಅದಾದ್ ಅಜಮಾಯುರ್ ಅದಾತ್ ಪೃಶ್ನಿರ್ ಅದಾದ್ ಧರಿತೋ ನೋ ವಸೂನಿ |
ಗವಾಮ್ ಮಂಡೂಕಾ ದದತಃ ಶತಾನಿ ಸಹಸ್ರಸಾವೇ ಪ್ರ ತಿರನ್ತ ಆಯುಃ || ೧೦ ||

ಎನ್ನಲಾಗಿ

ಕಪ್ಪೆಗಳು ಒಂದು ಸಂವತ್ಸರ ಸುಮ್ಮನೆ ಇದ್ದಂಥ ವ್ರತಚಾರಿಗಳಾದ ಬ್ರಾಹ್ಮಣರು (ಆಗಿದ್ದು,) ಪರ್ಜನ್ಯನಿಂದ ಪ್ರೀತಿ ಮಾಡಲ್ಪಟ್ಟ ವಾಕ್ಕನ್ನು ನುಡಿಸಿದವು. || ೧ || ದಿವ್ಯವಾದ ನೀರು ಇದಕ್ಕೆ (ಅಂದರೆ ಈ ಕೆರೆಗೆ), ಸರಸ್ಸಿನಲ್ಲಿಟ್ಟಿರುವ ಒಂದು ಒಣ ಚರ್ಮದ್ರೋಣಿಗೆಂಬಂತೆ (ಅಂದರೆ ಒಂದು ಒಣ ಕಪಲೆಗೆಂಬಂತೆ), ಬಂದಾಗ, ಎಲೇ, ಕರುಗಳುಳ್ಳ ಆಕಳುಗಳ ಒದರುವಿಕೆಯ ಹಾಗೆ ಕಪ್ಪೆಗಳ ನುಡಿದಾಟವು ಅಲ್ಲಿ ಒತ್ತರಿಸಿ ಬರುತ್ತದೆ. || ೨ || ಮಳೆಗಾಲ ಬಂದಲ್ಲಿ (ಪರ್ಜನ್ಯನು) ಆಶೆಯುಳ್ಳಂಥ ಮತ್ತು ನೀರಡಿಕೆಯುಳ್ಳಂಥ ಇವಕ್ಕೆ (ಅಂದರೆ ಈ ಕಪ್ಪೆಗಳಿಗೆ) ಮಳೆ ಹೊಯಿಸುವಂದು ಒಂದು, ಟ್ರೊಯಿಂಟ್ರೊಯಿಮೆಂದು, (ಅದೇ ಪ್ರಕಾರ) ನುಡಿದಾಡುವ ಮತ್ತೊಂದರ ಹತ್ತರ ಹೋಗುತ್ತದೆ; ತಂದೆಯ ಹತ್ತರ ಮಗನು ಹ್ಯಾಗೋ ಹಾಗೆಯೇ. || ೩ || ತಮಗೆ ನೀರು ಹೊಯ್ಯುವಲ್ಲಿ ತಾವು ಸಂತೋಷ ಪಡುವಾಗ ಒಂದು ಮತ್ತೊಂದನ್ನು ಹಿಡು ಕೊಳ್ಳುತ್ತದೆ; ಕಪ್ಪೆಯು ಮಳೆ ಹೊಯ್ಯಲ್ಪಟ್ಟದಾಗಿ ಹಾರ್ಯಾಡುತ್ತಿರಲು, ಬೇರೆ ಬೇರೆ ಬಣ್ಣವುಳ್ಳಂಥಾದ್ದು ಹಸರು ಬಣ್ಣವುಳ್ಳಂಥಾದ್ದರ ಕೂಡ ವಾಕ್ಕನ್ನು ಸಂಮೇಳನ ಮಾಡುತ್ತದೆ. || ೪ || ಗುರುವಿನ (ವಾಕ್ಕಿನ) ಪ್ರಕಾರ ಶಿಷ್ಯನು (ಹೇಳುವಂತೆ) ಅವುಗಳಲ್ಲಿ ಒಂದು ಮತ್ತೊಂದರ ವಾಕ್ಕನ್ನು ಹೇಳುವಾಗ ಅವುಗಳ ಮೈಯೆಲ್ಲಾ ಬೆಳೆಯುವ ಹಾಗಾಗುತ್ತದೆ; (ಕಪ್ಪೆಗಳೇ,) ನೀವು ನೀರಿನಲ್ಲಿ ಒಳ್ಳೇ ವಾಕ್ಕುಳ್ಳವಾಗಿ ನುಡಿದಾಡುವಾಗ (ಹಾಗಾಗುತ್ತದೆ. || ೫ || ಅವುಗಳಲ್ಲೊಂದು ಆಕಳಿನ ಒದರುವಿಕೆಯುಳ್ಳದ್ದು, ಮತ್ತೊಂದು ಆಡಿನ ಒದರುವಿಕೆಯುಳ್ಳದ್ದು; ಒಂದು ಬೇರೆ ಬೇರೆ ಬಣ್ಣವುಳ್ಳದ್ದು, ಮತ್ತೊಂದು ಹಸರು ಬಣ್ಣವುಳ್ಳದ್ದು. ಅವು ಒಂದೇ ಹೆಸರನ್ನು ಪಡ ಕೊಂಡಂಥವುಗಳು (ಆಗಿದ್ದರೂ) ತರತರದ ರೂಪವುಳ್ಳವಾಗಿವೆ; (ಅದಲ್ಲದೆ) ತಾವು ನುಡಿದಾಡುವಂಥವುಗಳು (ಆಗಿರುವಲ್ಲಿ) ವಾಕ್ಕನ್ನು ಬಹು ವಿಧವಾಗಿ ವಿಚಿತ್ರ ಮಾಡುತ್ತವೆ. || ೬ || ಅತಿರಾತ್ರ (ಎಂಬ) ಸೋಮಯಾಗದಲ್ಲಿ ಬ್ರಾಹ್ಮಣರು (ಪಾತ್ರಗಳಲ್ಲಿ) ಸರಸ್ಸಿನಂತೆ ಪೂರ್ಣ (ಆಗುತ್ತಿರುವ ಸೋಮವೆಂಬ ರಸದ) ಸುತ್ತಲು ನುಡಿದಾಡುವಂತೆ ನೀವು, ಕಪ್ಪೆಗಳೇ, (ಕೆರೆಯ) ಸುತ್ತು ನಿಲ್ಲುವ ಸಂವತ್ಸರದ ದಿನವೇ ಮಳೆಗಾಲದ್ದಾಯಿತು. || ೭ || (ಅಂಥಾ ಸೋಮಯಾಗದಲ್ಲಿ ಕಪ್ಪೆಗಳು) ಸೋಮ ಹೊಗಳುತ್ತಾ ಸಂವತ್ಸರದ ಪೂರ್ತಿಗೆ ಸಲ್ಲುವ ಬ್ರಹ್ಮವನ್ನು (ಅಂದರೆ ಬೆಳವಣಿಗೆಯನ್ನು) ಉಂಟು ಮಾಡುತ್ತಾ ಇರುವಂಥ ಬ್ರಾಹ್ಮಣ

ರು (ಆಗಿ,) ವಾಕ್ಕನ್ನು ಮಾಡಿದವು; (ಅದಲ್ಲದೆ ಅವು) ಘರ್ಮಗಳಿಗೆ (ಅಂದರೆ ಘರ್ಮಗಳೆಂಬ ಯಾಗಪಾತ್ರಗಳಿಗೆ) ಬಿಸಿ ಕೊಡುತ್ತಾ, ಬೆವರುತ್ತಾ (ಯಜಮಾನನಿಗೆ ಅಂದರೆ ಯಜ್ಞದ ಖರ್ಚು ಮಾಡುವವನಿಗೆ ನವ ಶಕ್ತಿ ಹುಟ್ಟಿಸಲಿಕ್ಕೆ ಪೇಚಾಡುತ್ತಾ) ಇರುವಂಥ ಅಧ್ವರ್ಯುಗಳು (ಅಂದರೆ ಯಾಗದಲ್ಲಿ ಹಾಲು ಮುಂತಾದ್ದನ್ನು ಬೇಯಿಸುವ ಉದ್ಯೋಗ ಗೈಯುವವರು ಆಗಿ) ಕಾಣ ಬರುತ್ತವೆ; (ಇನ್ನೂ ಬಿಲ್ಲದೊಳಗೆ) ಗೋಪ್ಯವಾಗಿ ಉಳಿಯುವಂಥವುಗಳು ಯಾವವೂ ಇಲ್ಲ. || ೮ || ಜನರು (ಆಗಿರುವ) ಅವು ದೇವತೆಗಳ ಕಟ್ಟಳೆಯನ್ನು ಕೈಕೊಂಡವು, ದ್ವಾದಶದ (ಅಂದರೆ ಹನ್ನೆರಡು ತಿಂಗಳಿನ) ಋತುವನ್ನು ಅಲಕ್ಷ್ಯ ಮಾಡುವದಿಲ್ಲ; ಸಂವತ್ಸರದ ಮಳೆಗಾಲ ಬರುವಲ್ಲಿ ಅವು ಬಿಸಿ ಕೊಟ್ಟಿರುವಂಥ (ಮತ್ತು ಹಾಲು ಮುಂತಾದ್ದು ಇರುವಂಥ) ಘರ್ಮಗಳು (ಎಂಬ ಪಾತ್ರಗಳು ಸಹ ಆಗಿದ್ದು,) ವಿಸರ್ಗ ಹೊಂದುತ್ತವೆ (ಅಂದರೆ ಅವುಗಳೊಳಗಿದ್ದದ್ದು ಮಳೆ ಎಂಬಂತೆ ಹೊರಗೆ ಹಾಕಿದಂತಾಗುತ್ತದೆ). || ೯ || ಆಕಳಿನ ಒದರುವಿಕೆಯುಳ್ಳದ್ದು ನಮಗೆ ಐಶ್ವರ್ಯ ಕೊಡಲಿ! ಆಡಿನ ಒದರುವಿಕೆಯುಳ್ಳದ್ದು ಕೊಡಲಿ! ಬೇರೆ ಬೇರೆ ಬಣ್ಣವುಳ್ಳದ್ದು ಕೊಡಲಿ! ಹಸರು ಬಣ್ಣವುಳ್ಳದ್ದು (ಕೊಡಲಿ)! ನೂರಾರು ಆಕಳುಗಳನ್ನು ಕೊಡುವಂಥ ಕಪ್ಪೆಗಳು ಸಾವಿರ (ವಿಧದ ಓಷಧಿಗಳನ್ನು) ಹುಟ್ಟಿಸುವ (ಈ ಮಳೆಗಾಲದಲ್ಲಿ ನಮ್ಮ) ಆಯುಷ್ಯವನ್ನು ಉದ್ದ ಮಾಡಲಿ! || ೧೦ ||

ನಮ್ಮ ಈ ಕಾಲದಲ್ಲಿಯೂ ಆಗಾಗ್ಯೆ ಹತ್ತಿಪ್ಪತ್ತು ಜನ ಬ್ರಾಹ್ಮಣರು ಹೊಳೆಗೆ ಹೋಗಿ, ಮೊದಲು ಆ ಪರ್ಜನ್ಯಸ್ತುತಿಯನ್ನು ಆ ಮೇಲೆ ಆ ಮಂಡೂಕಸ್ತುತಿಯನ್ನು ಹೇಳಿ, ಮಳೆ ಸಿದ್ಧಿಸುವ ಪೇಚಾಟ ಮಾಡಲಿಕ್ಕೆ ಹಿಂದೆಗೆಯದಿರುವರಂತೆ. ಓ ದೇವರೇ, ಸತ್ಯವೇನೆಂತ, ಅಂಥಾ ಬ್ರಾಹ್ಮಣರಿಗೆ ತಿಳಿಸು!

ಠ ಸ್ಸೆ ತೀ ರ್ವೆ.

ಠಸ್ಸೆ ತೀರ್ವೆ ವಿಷಯದ ಕ್ರಮಗಳು ಹೊಸತಾಗಿ ನಿರ್ಣಯವಾದ ೧೮೬೯ನೆ ಇಸವಿ XVIIIನೇ ಆಕ್ಟಿನಿಂದ ಬದಲಾದದರಿಂದ, ಅದರ ಪ್ರಕಾರ ಈ ಕೆಳಗಿನ ಸಾರಾಂಶ ತಿದ್ದಿರುತ್ತದೆ.

ಪಟಾಯಿಸ ತಕ್ಕ ಹುಂಡಿಗಳಿಗೆ (Bills of Exchage), ಅಥವಾ ವಾಯಿದೇ ಚೀಟುಗಳಿಗೆ (Promisory Notes) ಈ ಕೆಳಗೆ ಬರೆದಿರುವ ಪ್ರಕಾರವಾಗಿ ಸ್ಟೆಂಪ್ಸ್ ಹಚ್ಚ ಬೇಕು.

	ಒಂದೇ ಯಾದರೆ.		ದುಬಾರೆ ಯಾದರೆ.		ತಿಬಾರೆ ಯಾದರೆ.	
	ರೂ.	ಆ.	ರೂ.	ಆ.	ರೂ.	ಆ.
೧೦೦ ರೂಪಾಯಿಗೆ ಮೀರದಿದ್ದರೆ	೦	೧	೦	೧	೦	೧
೧೦೦ರೂಪಾಯಿಗೆ ಮೀರಿ ೨೦೦ „ „	೦	೨	೦	೧	೦	೧
೨೦೦ „ ೩೦೦ „ „	೦	೩	೦	೨	೦	೧
೩೦೦ „ ೪೦೦ „ „	೦	೪	೦	೩	೦	೨

					ಒಂದೇ ಯಾದರೆ.		ದುಬಾರೆ ಯಾದರೆ.		ತಿಬಾರೆ ಯಾದರೆ.	
					ರೂ.	ಆ.	ರೂ.	ಆ.	ರೂ.	ಆ.
೬೦೦	ರೂಪಾೖಗೆ ಮೀರಿ	೯೦೦	ರೂಪಾೖಗೆ	ಮೀರದಿದ್ದರೆ	೦	೯	೦	೫	೦	೩
೯೦೦	„	೧೨೦೦	„	„	೦	೧೨	೦	೬	೦	೪
೧೨೦೦	„	೧೫೦೦	„	„	೦	೧೫	೦	೮	೦	೫
೧೫೦೦	„	೨೫೦೦	„	„	೧	೮	೦	೧೨	೦	೮
೨೫೦೦	„	೫೦೦೦	„	„	೩	೦	೧	೮	೧	೦
೫೦೦೦	„	೭೫೦೦	„	„	೪	೮	೨	೪	೧	೮
೭೫೦೦	„	೧೦೦೦೦	„	„	೬	೦	೩	೦	೨	೦
೧೦೦೦೦	„	೧೫೦೦೦	„	„	೯	೦	೪	೮	೩	೦
೧೫೦೦೦	„	೨೦೦೦೦	„	„	೧೨	೦	೬	೦	೪	೦
೨೦೦೦೦	„	೨೫೦೦೦	„	„	೧೫	೦	೭	೮	೫	೦
೨೫೦೦೦	„	೩೦೦೦೦	„	„	೧೮	೦	೯	೦	೬	೦
೩೦೦೦೦	„	೪೦೦೦೦	„	„	೨೪	೦	೧೨	೦	೮	೦

೪೦೦೦೦೦ ರೂಪಾಯಿಗೆ ಮೀರದ ಯಾವದಾದರೂ ಕ್ರಯಚೀಟು ಪತ್ರಗಳಿಗೆ ಈ ಕೆಳಗಿನ ಠಸ್ಸೆ ಕ್ರಮವಾಗಿರುತ್ತದೆ:

					ಠಸ್ಸೆ.	
					ರೂ.	ಆ.
		೫೦	ರೂಪಾಯಿಗೆ	ಮೀರದಿದ್ದರೆ	೦	೮
೫೦	ರೂಪಾಯಿಗೆ ಮೀರಿ	೧೦೦	„	„	೧	೦
೧೦೦	„	೨೦೦	„	„	೨	೦
೨೦೦	„	೩೦೦	„	„	೩	೦
೩೦೦	„	೪೦೦	„	„	೪	೦
೪೦೦	„	೫೦೦	„	„	೫	೦
೫೦೦	„	೬೦೦	„	„	೬	೦
೬೦೦	„	೭೦೦	„	„	೭	೦
೭೦೦	„	೮೦೦	„	„	೮	೦
೮೦೦	„	೯೦೦	„	„	೯	೦
೯೦೦	„	೧೦೦೦	„	„	೧೦	೦
೧೦೦೦	„	೧೫೦೦	„	„	೧೫	೦
೧೫೦೦	„	೨೦೦೦	„	„	೨೦	೦
೨೦೦೦	„	೨೫೦೦	„	„	೨೫	೦
೨೫೦೦	„	೩೦೦೦	„	„	೩೦	೦
೩೦೦೦	„	೩೫೦೦	„	„	೩೫	೦

					ರಸ್ತೆ.	
					ರೂ.	ಆ.
೩೫೦೦	ರೂಪಾಯಿಗೆ ಮೀರಿ	೪೦೦೦	ರೂಪಾಯಿಗೆ	ಮೀರದಿದ್ದರೆ	೪೦	೦
೪೦೦೦	”	೪೫೦೦	”	”	೪೫	೦
೪೫೦೦	”	೫೦೦೦	”	”	೫೦	೦
೫೦೦೦	”	೫೫೦೦	”	”	೫೫	೦
೫೫೦೦	”	೬೦೦೦	”	”	೬೦	೦
೬೦೦೦	”	೬೫೦೦	”	”	೬೫	೦
೬೫೦೦	”	೭೦೦೦	”	”	೭೦	೦
೭೦೦೦	”	೭೫೦೦	”	”	೭೫	೦
೭೫೦೦	”	೮೦೦೦	”	”	೮೦	೦
೮೦೦೦	”	೮೫೦೦	”	”	೮೫	೦
೮೫೦೦	”	೯೦೦೦	”	”	೯೦	೦
೯೦೦೦	”	೯೫೦೦	”	”	೯೫	೦
೯೫೦೦	”	೧೦೦೦೦	”	”	೧೦೦	೦
೧೦೦೦೦	”	೧೧೦೦೦	”	”	೧೦೫	೦
೧೧೦೦೦	”	೧೨೦೦೦	”	”	೧೧೦	೦
೧೨೦೦೦	”	೧೩೦೦೦	”	”	೧೧೫	೦
೧೩೦೦೦	”	೧೪೦೦೦	”	”	೧೨೦	೦
೧೪೦೦೦	”	೧೫೦೦೦	”	”	೧೨೫	೦
೧೫೦೦೦	”	೧೬೦೦೦	”	”	೧೩೦	೦
೧೬೦೦೦	”	೧೭೦೦೦	”	”	೧೩೫	೦
೧೭೦೦೦	”	೧೮೦೦೦	”	”	೧೪೦	೦
೧೮೦೦೦	”	೧೯೦೦೦	”	”	೧೪೫	೦
೧೯೦೦೦	”	೨೦೦೦೦	”	”	೧೫೦	೦
೨೦೦೦೦	”	೨೧೦೦೦	”	”	೧೫೫	೦
೨೧೦೦೦	”	೨೨೦೦೦	”	”	೧೬೦	೦
೨೨೦೦೦	”	೨೩೦೦೦	”	”	೧೬೫	೦
೨೩೦೦೦	”	೨೪೦೦೦	”	”	೧೭೦	೦
೨೪೦೦೦	”	೨೫೦೦೦	”	”	೧೭೫	೦
೨೫೦೦೦	”	೨೬೦೦೦	”	”	೧೮೦	೦
೨೬೦೦೦	”	೨೭೦೦೦	”	”	೧೮೫	೦
೨೭೦೦೦	”	೨೮೦೦೦	”	”	೧೯೦	೦
೨೮೦೦೦	”	೨೯೦೦೦	”	”	೧೯೫	೦

						ಠಸ್ಸೆ. ರೂ.	ಆ.
೨೯೦೦೦	ರೂಪಾಯಿಗೆ ಮಿಾರಿ	೩೦೦೦೦	ರೂಪಾಯಿಗೆ	ಮಿಾರದಿದ್ದರೆ		೨೦೦	೦
೩೦೦೦೦	”	೪೦೦೦೦	”	”		೨೫೦	೦
೪೦೦೦೦	”	೫೦೦೦೦	”	”		೩೦೦	೦
೫೦೦೦೦	”	೬೦೦೦೦	”	”		೩೫೦	೦
೬೦೦೦೦	”	೭೦೦೦೦	”	”		೪೦೦	೦
೭೦೦೦೦	”	೮೦೦೦೦	”	”		೪೫೦	೦
೮೦೦೦೦	”	೯೦೦೦೦	”	”		೫೦೦	೦
೯೦೦೦೦	”	೧೦೦೦೦೦	”	”		೫೫೦	೦

೪೦೦,೦೦೦ ರೂಪಾಯಿಗೆ ಮಿಾರದೆ ಇರುವ ಹಣವಿನ ಬಗ್ಗೆ ಬರ ಕೊಡೋಣಾಗುವ ಯಾವದಾದರೂ ಪತ್ರಗಳ ಠಸ್ಸೆ ಶೀವೇಱ್ ಪಟ್ಟಿ ಯಾವದಂದರೆ:

					ಠಸ್ಸೆ. ರೂ.	ಆ.
		೨೫	ರೂಪಾಯಿಗೆ	ಮಿಾರದಿದ್ದರೆ	೦	೨
೨೫	ರೂಪಾಯಿಗೆ ಮಿಾರಿ	೫೦	”	”	೦	೪
೫೦	”	೧೦೦	”	”	೦	೮
೧೦೦	”	೨೦೦	”	”	೧	೦
೨೦೦	”	೩೦೦	”	”	೧	೮
೩೦೦	”	೪೦೦	”	”	೨	೦
೪೦೦	”	೫೦೦	”	”	೨	೮
೫೦೦	”	೬೦೦	”	”	೩	೦
೬೦೦	”	೭೦೦	”	”	೩	೮
೭೦೦	”	೮೦೦	”	”	೪	೦
೮೦೦	”	೯೦೦	”	”	೪	೮
೯೦೦	”	೧೦೦೦	”	”	೫	೦
೧೦೦೦	”	೧೫೦೦	”	”	೭	೮
೧೫೦೦	”	೨೦೦೦	”	”	೧೦	೦
೨೦೦೦	”	೨೫೦೦	”	”	೧೨	೮
೨೫೦೦	”	೩೦೦೦	”	”	೧೫	೦
೩೦೦೦	”	೩೫೦೦	”	”	೧೭	೮
೩೫೦೦	”	೪೦೦೦	”	”	೨೦	೦
೪೦೦೦	”	೪೫೦೦	”	”	೨೨	೮
೪೫೦೦	”	೫೦೦೦	”	”	೨೫	೦

					ತಸ್ತೆ.	
					ರೂ.	ಆ.
೫೦೦೦	ರೂಪಾಯಿಗೆ ಮೀರಿ	೫೫೦೦	ರೂಪಾಯಿಗೆ	ಮೀರದಿದ್ದರೆ	೨೭	೮
೫೫೦೦	„	೬೦೦೦	„	„	೩೦	೦
೬೦೦೦	„	೬೫೦೦	„	„	೩೨	೮
೬೫೦೦	„	೭೦೦೦	„	„	೩೫	೦
೭೦೦೦	„	೭೫೦೦	„	„	೩೭	೮
೭೫೦೦	„	೮೦೦೦	„	„	೪೦	೦
೮೦೦೦	„	೮೫೦೦	„	„	೪೨	೦
೮೫೦೦	„	೯೦೦೦	„	„	೪೫	೦
೯೦೦೦	„	೯೫೦೦	„	„	೪೭	೮
೯೫೦೦	„	೧೦೦೦೦	„	„	೫೦	೦
೧೦೦೦೦	„	೧೧೦೦೦	„	„	೫೨	೮
೧೧೦೦೦	„	೧೨೦೦೦	„	„	೫೫	೦
೧೨೦೦೦	„	೧೩೦೦೦	„	„	೫೭	೮
೧೩೦೦೦	„	೧೪೦೦೦	„	„	೬೦	೦
೧೪೦೦೦	„	೧೫೦೦೦	„	„	೬೨	೮
೧೫೦೦೦	„	೧೬೦೦೦	„	„	೬೫	೦
೧೬೦೦೦	„	೧೭೦೦೦	„	„	೬೭	೮
೧೭೦೦೦	„	೧೮೦೦೦	„	„	೭೦	೦
೧೮೦೦೦	„	೧೯೦೦೦	„	„	೭೨	೮
೧೯೦೦೦	„	೨೦೦೦೦	„	„	೭೫	೦
೨೦೦೦೦	„	೨೧೦೦೦	„	„	೭೭	೮
೨೧೦೦೦	„	೨೨೦೦೦	„	„	೮೦	೦
೨೨೦೦೦	„	೨೩೦೦೦	„	„	೮೨	೮
೨೩೦೦೦	„	೨೪೦೦೦	„	„	೮೫	೦
೨೪೦೦೦	„	೨೫೦೦೦	„	„	೮೭	೮
೨೫೦೦೦	„	೨೬೦೦೦	„	„	೯೦	೦
೨೬೦೦೦	„	೨೭೦೦೦	„	„	೯೨	೮
೨೭೦೦೦	„	೨೮೦೦೦	„	„	೯೫	೦
೨೮೦೦೦	„	೨೯೦೦೦	„	„	೯೭	೮
೨೯೦೦೦	„	೩೦೦೦೦	„	„	೧೦೦	೦
೩೦೦೦೦	„	೪೦೦೦೦	„	„	೧೧೨	೮
೪೦೦೦೦	„	೫೦೦೦೦	„	„	೧೨೫	೦

		ಠಸ್ಸೆ. ರೂ.	ಆ.
೫೦೦೦೦ ರೂಪಾಯಿಗೆ ಮೀರಿ	೬೦೦೦೦ ರೂಪಾಯಿಗೆ ಮೀರದಿದ್ದರೆ	೧೩೭	೮
೬೦೦೦೦ ,,	೭೦೦೦೦ ,, ,,	೧೫೦	೦
೭೦೦೦೦ ,,	೮೦೦೦೦ ,, ,,	೧೬೨	೮
೮೦೦೦೦ ,,	೯೦೦೦೦ ,, ,,	೧೭೫	೦
೯೦೦೦೦ ,,	೧೦೦೦೦೦ ,, ,,	೧೮೭	೮

ವಿಶೇಷ ಮೌಲ್ಯದ ಠಸ್ಸೆ ಕಾಗದ ಅವಶ್ಯವಾಗುವ ದಸ್ತೈವಜುಗಳ ಪಟ್ಟಿಯಿಂದ ತೆಗದದ್ದು.

ಕ್ರಯಸಾಧನ. ಅಡವುಪತ್ರ — ಅದನ್ನು ಬರ ಕೊಡುವ ಕಾಲದಲ್ಲಿ, ಅದರಲ್ಲಿ ನಮೂದಿಸಿದ ಆಸ್ತಿಯನ್ನು ಅಡವುದಾರನು ಸ್ವಾಧೀನದಲ್ಲಿ ಕೊಟ್ಟ ಪಕ್ಷಕ್ಕೆ. ಅಂಥಾ ಆಸ್ತೀ ಮೇಲೆ ಇನ್ನು ಸ್ವತಂತ್ರ ಹುಟ್ಟಿಸುವ ಬಗ್ಯೆ ಯಾ ದಾಸ್ತು ಮೂಲಕವಾಗಿಯಾಗಲೀ ಬೇರೆ ಪ್ರಕಾರವಾಗಲೀ ಆದ ದಸ್ತೈವಜು.

ಇವುಗಳಲ್ಲಿ ನಮೂದಿಸಿದ ಐವಜು	ಠಸ್ಸೆ. ರೂ.	ಆ.
೫೦ ರೂಪಾಯಿಗೆ ಮೀರದಿದ್ದರೆ	೦	೪
೫೦ ರೂಪಾಯಿಗೆ ಮೀರಿ ೧೦೦ ,, ,,	೧	೦
೧೦೦ ರೂಪ್ಯಾಯಿಂದ ೧೦೦೦ ರೂ. ವರೆಗೆ ಪ್ರತಿ ೧೦೦ ರೂ. ಯಾ ಅದರ ಅಂಶಕ್ಕೆ	೧	೦
೧೦೦೦ ,, ೧೦೦೦೦ ,, ,, ೫೦೦ ,, ,,	೫	೦
೧೦೦೦೦ ,, ೩೦೦೦೦ ,, ,, ೧೦೦೦ ,, ,,	೫	೦
೩೦೦೦೦ ,, ೧೦೦೦೦೦ ,, ,, ೧೦೦೦೦ ,, ,,	೫೦	೦
೧೦೦೦೦೦ ರೂಪಾಯಿ ಮೇಲೆ ,, ೨೦೦೦೦ ,, ,,	೭೫	೦

	ರೂ.	ಆ.
ಪಟಾಯಿಸ ತಕ್ಕ ಹುಂಡಿ (Bill of Exchange), ವಾಯಿದೇ ಚೀಟು (Promisory Note), ಕೇಳಿದ್ದಾಗಲೇ ಹಣ ಕೊಡ ಬೇಕಾಗಿ ಬರೆದಿರುವ ಹುಂಡಿ ಇವುಗಳಿಗೆ	೧	೦
೨೦ ರೂಪಾಯಿ ಯಾ ಅದಕ್ಕೆ ಮೀರಿರುವ ಯಾವದೊಂದು ಲೆಖ್ಖಾಚಾರವನ್ನಾಗಲಿ ಸಾಲವನ್ನಾಗಲಿ ತಗಾದೆಯನ್ನಾಗಲಿ, ಒಂದು ಪುಸ್ತಕದಲ್ಲಿ ಯಾ ಪ್ರತ್ಯೇಕ ಕಾಗದದಲ್ಲಿ ಕಾಣಿಸಿ, ಯಾ ಕೆಲವು ಫಡಿಚಾ ಮಾಡಿ ಅಥವಾ ಒಪ್ಪಿ ಬರಿಯೋಣಾದ ಒಂದು ಯಾದಾಸ್ತಿಗೆ	೦	೧
೨೦ ರೂಪಾಯಿಗೆ ಮೀರಿರುವ ಹಣವಾಗಲಿ, ಸಾಮಾನುಗಳು ಪಾವತಿ ಮಾಡಿದ್ದಾಗಿಯಾಗಲಿ, ಸಾಲವನ್ನು ಫಡಿಚಾ ಮಾಡಿಯಾಗಲಿ ಕೊಡುವ ರಶೀದಿಗೆ	೦	೧

	ರೂ.	ಆ.
ಯಾವದೊಂದು ಕೆಲಸವನ್ನು ಮಾಡಿಸುವ ಬಗ್ಗೆ ಮುಂಚಿತಾಗಿ ಕಾಯಿದೆ ಪ್ರಕಾರ ಬರಕೊಳ್ಳೋಣಾದ ದಸ್ತೈವಜಿನಲ್ಲಿ ನಮೂದಿಸಿದ ಕೆಲಸ ಮಾಡುವಂತೆ, ಅದರ ಭದ್ರತೆಗಾಗಿ ಬರಕೊಡೋಣಾಗುವ ದಸ್ತೈವಜು ಯಾ ಅಡವುಸಾಧನಕ್ಕೆ	೨	೦
ಕ್ರಯಚೀಟು ಮುಂತಾದ ಯಾವದೊಂದು ಬಲೀಯವಾದ ಸಾಧನವನ್ನು ಅಡವು ಇಟ್ಟು ತೆಕ್ಕೊಂಡ ಸಾಲವನ್ನು ೩ ತಿಂಗಳೊಳಗೆ ತಿರಿಗಿ ಸಲಾಯಿಸೋಣಾಗುವದೆಂದು ಬರ ಕೊಡೋಣಾದ ಕರಾರಿಗೆ ರುಜುವಾತಾಗಿರುವ ದಸ್ತೈವಜಿಗೆ.	೨	೦

ಐಗುಪ್ತದ ಸಂಗತಿ.



ಐಗುಪ್ತವೆಂಬ ದೇಶವನ್ನು ಕುರಿತು ಕೇಳಿದಿರಲ್ಲ? ಅದಕ್ಕೆ ಮಿಸ್ರವೆಂಬ ಹೆಸರು ಸಹ ಇದೆ. ಬೈಬೆಲೆಂಬ ದೇವವಾಕ್ಯ ಓದಿದವರು ಬಲ್ಲರೇನಂದರೆ: ಯೋಸೇಫನೆಂಬ ದೇವಭಕ್ತನು ಅಲ್ಲಿ ದೊಡ್ಡ ಸ್ಥಿತಿವಂತನಾಗಿ, ತನ್ನ ಕುಟುಂಬಸ್ಥರನ್ನು ತನ್ನ ಬಳಿಗೆ ಕರ ತಂದನು; ತರುವಾಯ ಇವರು ಬೆಳಬೆಳದು, ದೊಡ್ಡ ಜನಾಂಗವಾಗಿ, ಫರೋನನೆಂಬ ರಾಜನಿಂದ ವಾಚಾತೀತ ಉಪದ್ರವ ಪಡುತ್ತಿರಲಿಕ್ಕೆ, ಮೋಶೆ ಎಂಬ ಸದ್ಭಕ್ತನು ದೇವರ ಅಪ್ಪಣೆಯ ಮೇಲೆ ಇಸ್ರಯೇಲ್ಯರೆಂಬ ಆ ಜನಾಂಗವನ್ನು ತಪ್ಪಿಸಿ ರಕ್ಷಿಸಿದನು.

ಒಳ್ಳೇದು! ಆ ಐಗುಪ್ತ ದೇಶದಲ್ಲಿ ನೀಲೆಂಬ ಮಹಾ ನದಿ ಅದೆ. ಇದರ ನೀರು ಹರಿದು ಬರುವ ತಗ್ಗಿನಲ್ಲಿ ಭೂಮಿಯು ಅತ್ಯುತ್ಕೃಷ್ಟ; ಅಲ್ಲಿ ಜೋಳ, ಭತ್ತ, ಗೋಧಿ, ಎಳ್ಳು, ಹತ್ತಿ, ನೀಲಿ, ಹೊಗೆಸೊಪ್ಪು ಮುಂತಾದ್ದು ರಾಶಿರಾಶಿಯಾಗಿ ಹುಟ್ಟುವದು. ಐಗುಪ್ತದ ಮುಖ್ಯ ಮರಗಳು ಯಾವವಂದರೆ—ಉತ್ತತ್ತಿಯದು, ಅಂಜೂರದು, ಕಿತ್ತಲೆಯದು, ಇಪ್ಪೆಯದು, ಜಾಲಿಯದು.

ನೀಲು ನದಿಯ ನೀರು ಮುಟ್ಟದಲ್ಲಿ ಆಗಲಿ ಜನರು ನೀರನ್ನು ತಿರುಗಿಸದಲ್ಲಿ ಆಗಲಿ ಬರೇ ಉಸುಬುಗಾಡು ಇದೆ. ಅಯ್ಯಯ್ಯೋ, ಎಷ್ಟೋ ಉಸುಬು! ಅದರಲ್ಲಿ ದಿಕ್ಕೂ ದಾರಿಯೂ ಕಾಣುವದಿಲ್ಲ. ಮಳೆ ಬಿದ್ದದಾದರೆ, ಆ ಉಸುಬಿನ ಅರಣ್ಯವು ಆದರೂ ವನವಾದೀತು; ಆದರೆ ಮಳೆಯು ಆ ಕಡೆಯಲ್ಲಿ ತೀರ ಅಪರೂಪ.

ಐಗುಪ್ತದ ನಿವಾಸಿಗಳು ಹೆಚ್ಚಾಗಿ ಮೊಹಮ್ಮದಿಯರು; ಅವರ ರಾಜನು ಪಾಚ್ಛಾ ಎನ್ನಿಸಿ ಕೊಂಡು, ಕೊನ್ಸ್ತನ್ತೀನೊಪೊಲಿ ಎಂಬ ಪಟ್ಣದಲ್ಲಿರುವ ಸುಲ್ತಾನನ ಕೈಕೆಳಗಿದ್ಧಾನೆ. ಐಗುಪ್ತದ ಒಕ್ಕಲಿಗರಿಗೆ ಫೆಲ್ಲಾರೆಂಬ ಹೆಸರು. ಇವರು ಬಹು ಬಡವರಾಗಿದ್ಧಾರೆ; ಯಾಕಂದರೆ ಅಮಿತ ಕಂದಾಯ ಕೊಡ ಬೇಕಾಗುವದು ಮಾತ್ರವಲ್ಲದೆ ತರತರದ ಬಿಟ್ಟಿ ಕೆಲಸ ಮಾಡ ಬೇಕು. ಅದು ಹೊರ್ತಾಗಿ ಪಾಚ್ಛಾ ಎಂಬವನೊಬ್ಬನೇ ಮಗ್ಗ ಮುಂತಾದ ಯಂತ್ರಗಳಲ್ಲಿ ಆಗುವ ಜಿನಸುಗಳನ್ನು ಹುಟ್ಟಿಸ ಬಹುದು; ಪ್ರಜೆಯು ಅವನಿಂದ ಕೊಂಡು ಕೊಂಡು, ಮಾರ ಬೇಕು. ಹೀಗಿರಲಾಗಿ ಐಗುಪ್ತದಲ್ಲಿಯ ಪ್ರಜೆಗೆ ಸುಖವಿಲ್ಲ.

ಆರಂಭದಲ್ಲಿ ಈ ವರ್ತಮಾನಕ್ಕೆ ಕೂಡಿಸಿದ ಚಿತ್ರದಲ್ಲಿ ಫೆಲ್ಲಾರು ನೇಗಿಲು ಹೊಡೆಯುವದು ಕಾಣುತ್ತದೆ; ಕೆಳಗಡೆ ಫೆಲ್ಲಾರ ಹೆಂಗಸರು ಕಪ್ಪಲೆಯೊಳು ತಂದ ನೀರನ್ನು ಪಾತ್ರಕ್ಕೆ ಹೊಯ್ಯುವದು ತೋರುತ್ತದೆ.



ಪ್ರತಿಫಲವು.

ಒಂದು ಮನೆಯಲ್ಲಿ ಮುದುಕನಾದ ಹೆತ್ತಪ್ಪನೂ ಅವನ ಮಗನೂ ಸೊಸೆಯೂ ಮೊಮ್ಮಕ್ಕಳೂ ಕೂಡ ಇದ್ದರು. ಹೆತ್ತಪ್ಪನು ಮುದಿಪ್ರಾಯದಿಂದ ನಡುಗುತ್ತಾ ಒಮ್ಮಿಂದೊಮ್ಮೆ ತನ್ನ ಪಾತ್ರೆಯನ್ನು ಚನ್ನಾಗಿ ಹಿಡಿಯ ಕೂಡದೆ ಮೇಜಿನಲ್ಲಿ ಆಹಾರ ಚೆಲ್ಲಿ, ಪಾತ್ರ ಸಹಾ ಒಡದು ಬಿಟ್ಟನು. ಅದಕ್ಕೆ ಮಗನೂ ಸೊಸೆಯೂ ತಾಳ್ಮೆ ಇಲ್ಲದೆ ಗುಣುಗುಟ್ಟಿ, ಕಡೆಗೆ ಅವನನ್ನು ಊಟದ ಸಮಯದಲ್ಲಿ ಕೋಣೆಯ ಒಂದು ಮೂಲೆಯಲ್ಲಿ ಕೂಡ್ರಿಸಿ, ಒಂದು ಮರದ ಪಾತ್ರೆಯಲ್ಲಿ ತಿನ್ನಿಸಿದರು. ಮುದುಕನು ದುಃಖಿತನಾದರೂ ಇದನ್ನು ತಾಳಿ ಕೊಂಡಿದ್ದನು.

ಒಂದು ದಿನ ಈ ದುರ್ಬುದ್ಧಿಯುಳ್ಳ ಮಗನು ಮನೆಗೆ ಬರುವಾಗ, ತನ್ನ ಚಿಕ್ಕ ಮಗನು ಕೂತು ಕೊಂಡು ಮರದ ತುಂಡುಗಳನ್ನು ಕೂಡಿಸಲಿಕ್ಕೆ ಪ್ರಯತ್ನ ಮಾಡುವದನ್ನು ಕಂಡನು. ಎಲೇ ನನ್ನ ಮಗನೇ, ಏನು ಮಾಡುತ್ತೀ? ಎಂತ ಕೇಳಿದಕ್ಕೆ, ಹುಡುಗನು: ನೀನು ಮುದಿಪ್ರಾಯದವನಾದರೆ, ನಿನ್ನನ್ನು ಅದರಲ್ಲಿ ತಿನ್ನಿಸುವ ಹಾಗೆ ಒಂದು ಮರದ ಪಾತ್ರ ಮಾಡುತ್ತೇನಷ್ಟೇ, ಅಂದನು. ತಂದೆ ಇದನ್ನು ಕೇಳಿ, ಬೆರಗಿ, ತನ್ನ ಹೆಂಡತಿಯನ್ನು ದೃಷ್ಟಿಸಿ: ಅಹಾ ಇದು ನಮ್ಮ ನಡತೆಯ ಫಲವಾದೀತು ಎಂತ ಇವರಿಬ್ಬರು ಸಹ ಮಾತಿಲ್ಲದೆ ತಿಳು ಕೊಂಡು, ಆ ದಿನದಲ್ಲೇ ಮುದುಕನನ್ನು ಮೇಜಿನಲ್ಲಿ ಕೂಡ್ರಿಸಿ, ಇನ್ನು ಅವನ ಬಲಹೀನತ್ವವನ್ನು ತಾಳಿ ಕೊಂಡರು.

ಒಂದು ಸಾಮ್ಯವು.

ಒಬ್ಬ ಮನುಷ್ಯನು ತನ್ನನ್ನು ಹಿಂದಟ್ಟುವ ಮೃಗದ ಮುಂದೆ ಓಡಿ ಹೋಗಲು, ಒಂದು ಗುಣಿಯಲ್ಲಿ ಬಿದ್ದು, ಅದರ ಒಂದು ಪಾರ್ಶ್ವದಲ್ಲಿ ಬೆಳೆಯುವ ಒಂದು ಗಿಡದಲ್ಲಿ ಶಿಕ್ಕಿ ಕೊಂಡನು. ಅವನು ತನ್ನ ಸ್ಥಿತಿಯನ್ನು ಸ್ವಲ್ಪ ವಿಚಾರಿಸುವಾಗ ಅದು ಭಯಂಕರವಾದದ್ದೆಂದು ತಿಳು ಕೊಳ್ಳ ಬೇಕಾಯಿತು. ಯಾಕಂದರೆ ಗುಣಿಯ ಕಿನಾರೆಯಲ್ಲಿ ಆ ಮೃಗವು ಕಾದು ಕೊಂಡಿತು, ಅದರ ಅಡಿಯಲ್ಲಿ ಬೆಂಕಿ ಹಾರಿಸುವಂಥಾ ಬೇರೊಂದು ಕ್ರೂರವಾದ ಮೃಗವು ಅತಿ ಆಶೆಯಿಂದ ಅವನನ್ನು ದೃಷ್ಟಿಸುತ್ತಿತ್ತು. ಇದಲ್ಲದೆ ತನಗೆ ಆಧಾರವಾಗಿರುವ ಗಿಡದ ಬುಡದಲ್ಲಿ ಎರಡು ಇಲಿಗಳು ಒಂದು ಕಪ್ಪೂ ಒಂದು ಬಿಳೇದೂ ಅದರ ಬೇರನ್ನು ಎಡೆ ಬಿಡದೆ ಕಡಿಯುತ್ತಿದ್ದವು. ಹೀಗಾದರೂ ಆ ಮನುಷ್ಯನು ಗಿಡದಲ್ಲಿ ಕೆಲವು ಹಣ್ಣುಗಳನ್ನು ಕಂಡು, ಭಯವೆಲ್ಲ ಮರೆತು, ಅತಿ ಸಂತೋಷದಿಂದ ಅವುಗಳನ್ನು ತಿನ್ನಲಾರಂಭಿಸಿದನು.

ಇದರ ಅಭಿಪ್ರಾಯವೇನಂದರೆ: ಮನುಷ್ಯನನ್ನು ಹಿಂದಟ್ಟುವ ಮೃಗವು ಪಾಪವೇ, ಅವನು ಬಿದ್ದ ಗುಣಿಯು ಅವನ ಜೀವಕಾಲವೂ, ಗುಣಿಯ ಅಡಿಯಲ್ಲಿಯ ಮೃಗವು

ಮರಣವೂ, ಎರಡು ಇಲಿಗಳು ಮಾನುಷಜೀವವನ್ನು ಕಡಿದು ಬಿಡುವ ಹಗಲಿರುಳೂ, ಗಿಡದಲ್ಲಿರುವ ಹಣ್ಣುಗಳು ಲೌಕಿಕ ಭೋಜನವೂ ಎಂಬ ಹಾಗಾಯಿತು. ಆ ಎರಡು ಇಲಿಗಳು ತಮ್ಮ ಕೆಲಸ ತೀರಿಸುವ ಸಮಯ ಯಾರು ಬಲ್ಲ? ಕೆಳಗೆ ಕಾದುಕೊಂಡಿರುವ ಮೃಗಕ್ಕೆ ಪ್ರಾಪ್ತಿಯಾಗುವ ಘಳಿಗೆ ಯಾರು ಎಣಿಸಲಾಗುವದೋ? ಆದರೂ ಎಷ್ಟು ಮಂದಿ ತಮ್ಮ ಈ ಭಯಂಕರ ಸ್ಥಿತಿಯನ್ನರಿತು ಏನೂ ತೃಪ್ತಿ ಕೊಡದಂಥ ಆ ಹಣ್ಣುಗಳನ್ನು ಅತಿ ಆಶೆಯಿಂದ ಭಕ್ಷಿಸುವವರಾಗಿದ್ಧಾರೆ. ಇದು ಹೆಡ್ಡತನವೇ ಸರಿ.

ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿ ಕಲಿಸಿದ ಪ್ರಾರ್ಥನೆಯು.

ಪರಲೋಕದಲ್ಲಿರುವ ನಮ್ಮ ತಂದೆಯೇ. ನಿನ್ನ ನಾಮವು ಪರಿಶುದ್ಧವಾಗಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ. ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು. ನಾವು ನಮ್ಮ ಸಾಲಗಾರರಿಗೆ ಬಿಡುವ ಪ್ರಕಾರ, ನಮ್ಮ ಸಾಲಗಳನ್ನು ನಮಗೆ ಬಿಡು. ನಮ್ಮನ್ನು ಶೋಧನೆಯಲ್ಲಿ ಸೇರಿಸದೆ, ಕೇಡಿನೊಳಗಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಎಂದೆಂದಿಗೂ ನಿನ್ನವೇ. ಆಮೆನ್.

ಟಪ್ಪಾಲಿನ ವಿಷಯವಾದ ಮುಖ್ಯ ಕಟ್ಟಳೆಗಳು.

೧. ಇಂಡಿಯದ ಸಾಧಾರಣವಾದ ಕಾಗದಟಪ್ಪಾಲು.

ಈ ಟಪ್ಪಾಲಿನ ಮುಖಾಂತ್ರವಾಗಿ ಚಾರದಲ್ಲಿ ೧೨ ತೊಲೆಗಳಿಗೆ ಮಿಾರದ ಕಾಗದ ಮುಂತಾದವುಗಳು ಇದರ ಕೆಳಗಿನ ಪಟ್ಟಿಯಲ್ಲಿ ಕಾಣಿಸಿರುವ ನಿರಕುಗಳ ಪ್ರಕಾರ ಇಂಡಿಯಾ ಗವರ್ನಮೆಂಟ್ ಎಂಬ ಸರಕಾರದ ಕೆಳಗಿರುವ ದೇಶಗಳಲ್ಲಿಯ ಯಾವದಾದರೂ ಒಂದು ಟಪ್ಪಾಲುಕಟ್ಟೆಯಿಂದ ಬೇರೊಂದಕ್ಕೆ ಕಳುಹಿಸಲ್ಪಡ ಬಹುದು.

ಚಾರದಲ್ಲಿ	½ ತೊಲೆ	೧ ತೊಲೆ
	ಮಿಾರದ್ದಕ್ಕೆ	
ಟಪ್ಪಾಲದಸ್ತೂರಿ	೬ ಪೈ	೧ ಆಣೆ

ಚಾರದಲ್ಲಿ ಒಂದು ತೊಲೆಗೆ ಮೀರಿ ಇರುವ ಪ್ರತಿ ಒಂದು ತೊಲೆಗೆ ಯಾ ಅದರ ಅಂಶಕ್ಕೆ ಒಂದೊಂದು ಆಣೆಯ ಪ್ರಕಾರ ಹೆಚ್ಚಾಗಿ ದಸ್ತೂರಿ ಕೊಡ ತಕ್ಕದ್ದು.

ಕಾಗದವನ್ನು ಕಳುಹಿಸುವವನು ಅದನ್ನು, ದಸ್ತೂರಿ ಮುಂದಾಗಿ ಕೊಟ್ಟು ಆಗಲಿ, (bearing) ಬೇರಿಂಗ್ ಆಗಿ ಅಂದರೆ, ಕಾಗದ ಯಾರಿಗೆ ಕಳುಹಿಸ ಬೇಕೋ ಅವನೇ ದಸ್ತೂರಿ ಕೊಡ ಬೇಕೆಂತ ಆಗಲಿ, ಟಪ್ಪಾಲಿನ ಮೇಲೆ ಹಾಕ ಬಹುದು.

ಕಾಗದವನ್ನು ಟಪ್ಪಾಲಿನ ಮೇಲೆ ಹಾಕುವಾಗ ಅದರ ಬಲಗಡೆಯಲ್ಲಿ (stamp) ಸ್ಟೆಂಪ್ ಎಂಬ ಟಪ್ಪಾಲುಚೀಟನ್ನು ಹಚ್ಚಿದರೆ, ದಸ್ತೂರಿ ಮುಂದಾಗಿ ಕೊಟ್ಟ ಹಾಗೆ ಆಯಿತು.

ಕಾಗದಗಳು ಬೇರಿಂಗ್ ಆಗಿ ಕಳುಹಿಸಲ್ಪಟ್ಟರೆ, ಮೇಲಿನ ಪಟ್ಟಿಯಲ್ಲಿರುವ ನಿರಕಿನ ಇಮ್ಮಡಿ ದಸ್ತೂರಿ ವಸೂಲು ಮಾಡಲಾದೀತು.

ಮತ್ತು ಕಾಗದಕ್ಕೆ ಅದರ ಚಾರಕ್ಕೆ ನೇಮಿಸಿದ ಸರಿಯಾದ ಸ್ಟೆಂಪನ್ನು ಹಚ್ಚದೆ ಅದಕ್ಕಿಂತ ಕಡಿಮೆಯದನ್ನು ಹಚ್ಚಿದರೆ, ಆ ಸರಿಯಾದ ಸ್ಟೆಂಪಿಗೂ ಇದಕ್ಕೂ ಇರುವ ಹೆಚ್ಚು ಕಡಿಮೆಯ ಎರಡು ಪಾಲು ಹೆಚ್ಚು ವಸೂಲು ಮಾಡಲಾದೀತು.

ಒಬ್ಬನು ಒಂದು ಕಾಗದವನ್ನು ಟಪ್ಪಾಲಿನ ಮೇಲೆ ಹಾಕಿದ ತರುವಾಯ, ಗವರ್ನಮೆಂಟಿನ ಪರ ಅಪ್ಪಣೆ ಪಡಕೊಂಡ ವಿನಹಾ, ತನಗೆ ಅದನ್ನು ಹಿಂದೆ ಕೊಡಿಸ ಬೇಕೆಂತ ಹೇಳ ಕೂಡದು.

ಬಂಗೀ ಟಪ್ಪಾಲು ಇರುವಲ್ಲಿ ಚಾರದಲ್ಲಿ ೧೦ ತೊಲೆಗಳಿಗೆ ಮೀರಿ ಇರುವ ಯಾವ ಕಾಗದವನ್ನಾದರೂ ಕಾಗದಟಪ್ಪಾಲಿನಿಂದ ಕಳುಹಿಸ ಕೂಡದು.

ಆದರೆ ಬಂಗೀ ಟಪ್ಪಾಲು ಇಲ್ಲದ್ದಲ್ಲಿ ೧೦ ತೊಲೆಗಳಿಗೆ ಮೀರಿ ೪೦ ತೊಲೆಗಳಿಗೆ ಮೀರದೆ ಇರುವ ಕಾಗದಗಳು ಅಂಗೀಕರಿಸಲ್ಪಟ್ಟು, ಕಾಗದಟಪ್ಪಾಲಿನಿಂದ ಕಳುಹಿಸಲ್ಪಡುವವು.

ಕಾಗದಗಳು ಯಾವಾಗಲೂ, ಅಂದರೆ ಹಗಲಿನಲ್ಲಿಯೂ ಇರುಳಿನಲ್ಲಿಯೂ, ಟಪ್ಪಾಲಿನ ಮೇಲೆ ಹಾಕ ಬಹುದು. ಟಪ್ಪಾಲು ಕೈದು ಮಾಡುವ ಒಂದು ತಾಸಿನ ಮುಂಚೆ ಬಂದ ಕಾಗದಗಳೆಲ್ಲವೂ ಕಳುಹಿಸಲ್ಪಡುವವು. ಆದರೆ ಅದರ ತರುವಾಯ ಬಂದವುಗಳು ಎರಡನೇ ಟಪ್ಪಾಲಿನಿಂದ ಕಳುಹಿಸಲ್ಪಡುವವು.

ಟಪ್ಪಾಲದಸ್ತೂರಿಯ ಖರ್ಚನ್ನು ತಪ್ಪಿಸಿ ಕೊಳ್ಳುವ ಹಾಗೆ ಬೇರೆ ಬೇರೆಯವರಿಗೆ ಪ್ರತ್ಯ ಪ್ರತ್ಯೇಕವಾಗಿ ಬರೆದ ಕಾಗದಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಆಕ್ಟಿನ ಪ್ರಕಾರ ಶಿಕ್ಷೆಗೆ ಪಾತ್ರರಾಗುತ್ತಾರೆ.

ತಮ್ಮ ಕಾಗದವನ್ನು ಹೆಚ್ಚು ಭದ್ರತೆಯಿಂದ ತಲಪ ಬೇಕೆಂದು ಮನಸ್ಸುಳ್ಳವರು ಅದನ್ನು ೫ನೇ ಅಂಕೆಯ ಕೆಳಗೆ ವಿವರಿಸಿದ ಪ್ರಕಾರ ೪ ಆಣೆ ಕೊಟ್ಟು, ರೆಜಿಸ್ತ್ರಿ ಮಾಡಿಸ ಬಹುದು. ಅಥವಾ ಟಪ್ಪಾಲಚೀಟಿನ ಕ್ರಯದಿಂದಲೆ ಶಿಕ್ಕುವ ಟಪ್ಪಾಲ ಮುದ್ರೆಯುಳ್ಳ ಕಾಗದದ ಮೇಲೆ ಬರದು ಯಾ ಅಂಥಾ ಲಕೋಟೆಯಲ್ಲಿ ಹಾಕಿ ಕಳುಹಿಸ ಬಹುದು.

೨. ಇಂಡಿಯನ್ ಬುಕ್‌ಪೋಸ್ಟ್.

ಇದರಲ್ಲಿ ನಮೂನೆಕಟ್ಟುಗಳು ಎಂಬ ಕಟ್ಟುಗಳು ಶೇರಿರುತ್ತವೆ. ಇದರಿಂದ ಚಾರದಲ್ಲಿ ೨೦೦ ತೊಲೆಗಳಿಗೆ ಮೀರದ ಪುಸ್ತಕಗಳೂ ವರ್ತಮಾನಪತ್ರಿಕೆಗಳ ಕಟ್ಟುಗಳೂ ಛಾಪಿಸಿದ ಇತರ ಕಾಗದಗಳೂ, ಭೂಮಾರ್ಗವಾಗಿ ಕಳುಹಿಸುವ ವ್ಯಾಪಾರದ ಯಾ ಇತರ ಒಡವೆಗಳ ನ

ಮೂನೆಗಳೂ ಕೆಳಗಿನ ಪಟ್ಟಿಯಲ್ಲಿ ನಮೂದ ಇರುವ ನಿರಕುಗಳಿಗೆ ಸರಿಯಾಗಿ ಟಪ್ಪಾಲ್ ಚೀಟುಗಳನ್ನು ಮುಂದಾಗಿಯೇ ಹಚ್ಚಿದರೆ, ಬಂಗೀ ಟಪ್ಪಾಲಿನ ಮೇಲೆ ಕಳುಹಿಸಲ್ಪಡ ಬಹುದು.

	ಭಾರದಲ್ಲಿ		
	೧೦ ತೊಲೆಗೆ ಮೀರದಿದ್ದರೆ	೨೦ ತೊಲೆಗೆ ಮೀರದಿದ್ದರೆ	ಪ್ರತಿ ಹೆಚ್ಚಿಗೆ ೧೦ ತೊಲೆ ಯಾ ಅದರ ಅಂಶಕ್ಕೆ
ಪುಸ್ತಕದ ಕಟ್ಟು	೧ ಆಣೆ	೨ ಆಣೆ	೧ ಆಣೆ
ನಮೂನೆ ಕಟ್ಟು	೨ ಆಣೆ	೪ ಆಣೆ	೨ ಆಣೆ

ಈ ಟಪ್ಪಾಲಿನಿಂದ ಕಳುಹಿಸಲ್ಪಡುವ ಪುಸ್ತಕ ಮುಂತಾದ ಕಟ್ಟುಗಳು, ಉದ್ದದಲ್ಲಿ ೧½ ಫೂಟಿಗೆ ಅಥವಾ ಅಗಲದಲ್ಲಿ ಯಾ ದಪ್ಪದಲ್ಲಿ ೧ ಫೂಟಿಗೆ ಮೀರ ಬಾರದು. ಮೀರಿದರೆ ಅದು ಬಂಗೀ ಕಟ್ಟು ಎಂತ ಎಣಿಸೋಣಾಗಿ ಅದರ ಪ್ರಕಾರ ದಸ್ತೂರಿ ವಸೂಲು ಮಾಡೋಣಾದೀತು. ಪುಸ್ತಕದ ಕಟ್ಟುಗಳು ಬಂದ ಮಾಡದೆ ಅಥವಾ ಅದರ ಮಲ್ಲೂಪುಗಳನ್ನು ಪರೀಕ್ಷೆ ಬಗ್ಗೆ ಹೊರಗೆ ತೆಗಿಯುವ ಹಾಗೆ ಎರಡು ಬದಿಗಳಲ್ಲಿ ಮುಚ್ಚದೆ ಇರುವ ಒಂದು ಲಕೋಟೆಯಲ್ಲಿ ಕಳುಹಿಸ ತಕ್ಕದ್ದು. ಸದರಿ ಕಟ್ಟು ಹೆಚ್ಚು ಭದ್ರ ಪಡಿಸುವ ಬಗ್ಗೆ ಹಗ್ಗದಿಂದ ಕಟ್ಟ ಬಹುದು. ಈ ಕ್ರಮಕ್ಕೆ ವ್ಯತಿರಿಕ್ತವಾಗಿ ನಡಕೊಂಡರೆ, ಸದರಿ ಕಟ್ಟಿನ ಮೇಲೆ ಸಂಗತ್ಯಾನುಸಾರವಾಗಿ ಕಾಗದದ ಯಾ ಬಂಗೀ ಕಟ್ಟಿನ ಪ್ರಕಾರ ದಸ್ತೂರಿ ವಸೂಲು ಮಾಡಲಾದೀತು.

ಒಂದೇ ಲಿಫಾಪೆಯಲ್ಲಿ ಬೇಕಾದಷ್ಟು ಪುಸ್ತಕಗಳು ಅಥವಾ ವಿದ್ಯೆಗೆ ಸಂಬಂಧವಾದ ಪ್ರಕಟಣೆಗಳು ಕಳುಹಿಸಲ್ಪಡ ಬಹುದು; ಆದರೆ ಯಾವ (ಪತ್ರಿಕೆ) ಕಾಗದವಾದರೂ ಗರ್ಭಿಸ ಬಾರದು.

ತನಿಖಿ ಮಾಡದ ಹಾಗೆ ಮುಚ್ಚಲ್ಪಟ್ಟ ಅಥವಾ ಖುಲ್ಲಾ ಇರುವ ಕಾಗದ ಮುಂತಾದ್ದೇನಾದರೂ ಈ ಟಪ್ಪಾಲಿನಿಂದ ಕಳುಹಿಸಲ್ಪಡಲಿಕ್ಕಿಲ್ಲ. ಮತ್ತು ಕಾಗದದ ಭಾವವುಳ್ಳ ಯಾವ ಸಂಗತಿಯನ್ನಾದರೂ ಪುಸ್ತಕ ಮುಂತಾದ್ದು ಹಾಕಲ್ಪಟ್ಟ ಲಿಫಾಪೆಯ ಮೇಲೆ ಬರಿಯಲೂ ಛಾಪಿಸಲೂ ಕೂಡದು.

ಪುಸ್ತಕಗಳ ಕಟ್ಟಿನ ಮೇಲು ವಿಳಾಸದ ಪಟ್ಟಿ ಟಪ್ಪಾಲ ಕಟ್ಟೆಯಲ್ಲಿ ಇಡದೆ ಇರುವ ಕಾರಣ, ಅಂಥಾ ಪ್ರತಿ ಪುಸ್ತಕದ ಕಟ್ಟನ್ನು ೪ ಆಣೆ ಕೊಟ್ಟು, ರೆಜಿಸ್ತ್ರಿ ಮಾಡಿಸಿ ಕೊಳ್ಳ ಬಹುದು.

ಛಾಪಿಸದೆ ಇರುವಂಥಾ ಲಿಖಿತಗಳಾಗಲೀ ಲಿಖಿತಗಳ ಸ್ವಭಾವವುಳ್ಳ ಪತ್ರಗಳಾಗಲೀ ಅಥವಾ ಒಡರಿ ಹೋಗುವ ಯಾ ಅಪಾಯಕರವಾದ ವಸ್ತುಗಳಾಗಲೀ ಹೊರ್ತು, ಇತರ ಯಾವ ವಸ್ತುವನ್ನಾಗಲೀ ಇಂಡಿಯಾ ದೇಶದ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಬುಕ್‌ಪೋಸ್ತು ಅಥವಾ ನಮೂನೆ ಎಂಬ ಟಪ್ಪಾಲಿನ ದ್ವಾರಾ ಕಳುಹಿಸುವದಕ್ಕೆ ಆತಂಕವಿರುವದಿಲ್ಲ.

ಒಂದು ಕಟ್ಟಿಗೆ ಹಚ್ಚಿದ ದಸ್ತೂರಿ ಸಾಲದಿದ್ದರೆ, ಅಥವಾ ಏನೂ ದಸ್ತೂರಿ ಹಚ್ಚದಿದ್ದರೆ, ಆ ಕಡಿಮೆಯಾದ ಯಾ ಹಚ್ಚದಿದ್ದ ದಸ್ತೂರಿಯ ಇಮ್ಮಡಿಯಾಗಿ ಹೊರಿಸಿ, ನಿಶ್ಚೈಸಿದ ಸ್ಥಳಕ್ಕೆ ಮುಟ್ಟಿಸಲಾದೀತು.

ಟಪ್ಪಾಲಿಗೆ ಹಾಕುವ ಪುಸ್ತಕ ಮುಂತಾದ್ದನ್ನು ಟಪ್ಪಾಲಕಟ್ಟೆಯಲ್ಲಿರುವ ಕ್ಲರ್ಕನ ಕೈಯಲ್ಲಿ ಕೊಡ ಬಹುದು, ಅಥವಾ ಕಾಗದಪೆಟ್ಟಿಗೆಯಲ್ಲಿ ಹಾಕ ಬಹುದು.

೩. ಬಂಗೀ ಟಪ್ಪಾಲು.

ಈ ಟಪ್ಪಾಲಿನಲ್ಲಿ ಕಳುಹಿಸುವ ಸಮಸ್ತ ಒಡವೆಗಳಿಗೆ ಚಾರ ಮತ್ತು ಮೈಲುಗಳ ಲೆಖ್ಖದ ಪ್ರಕಾರ ದಸ್ತೂರಿ ಕಟ್ಟುತ್ತದೆ. ಹ್ಯಾಗಂದರೆ:

ದೂರ.	ತೂಕದಲ್ಲಿ					
	ಅರ್ಧ ಶೇರು ಯಾ ೪೦ ತೊಲೆಗಳಿಗೆ ಮೀರದಿದ್ದರೆ		ಒಂದು ಶೇರು ಯಾ ೮೦ ತೊಲೆಗಳಿಗೆ ಮೀರದಿದ್ದರೆ		ಪ್ರತಿ ಒಂದು ಹೆಚ್ಚಿಗೆ ಶೇರಿಗೆ (೮೦ ತೊಲೆ)	
	ರೂ.	ಆ.	ರೂ.	ಆ.	ರೂ.	ಆ.
೩೦೦ ಮೈಲುಗಳಿಗೆ ಮೀರದಿದ್ದರೆ,	೦	೮	೧	೦	೧	೦
೩೦೦ ಮೈಲುಗಳಿಗೆ ಮೀರಿದರೆ,	೧	೦	೨	೦	೨	೦

ಕಾಲುನಡೆಯಾಗಿ ಆಳಿನ ಮುಖಾಂತ್ರ ಯಾವದೊಂದು ಮಾರ್ಗವಾಗಿ ಬಂಗೀ ಟಪ್ಪಾಲು ಕಳುಹಿಸುವದಾದರೆ, ೮ ಶೇರುಗಳಿಗೆ ಮೀರುವ ಕಟ್ಟನ್ನು ತೆಗದು ಕೊಳ್ಳಲಿಕ್ಕಿಲ್ಲ; ಮತ್ತು ಈ ಟಪ್ಪಾಲ್ ದ್ವಾರಾ ೨೫ ಶೇರುಗಳಿಗೆ (೨೦೦೦ ತೊಲೆ) ಮೀರುವ ಕಟ್ಟನ್ನು ಯಾವ ಕಾರಣದಿಂದಾದರೂ ತೆಗದು ಕೊಳ್ಳಲಿಕ್ಕಿಲ್ಲ.

ಪತ್ರಿಕೆಗಳ ಟಪ್ಪಾಲೂ ಬಂಗೀ ಟಪ್ಪಾಲೂ ಬೇರೆ ಬೇರೆ ನಡಿಯುವ ಮಾರ್ಗಗಳಲ್ಲಿ ಬಂಗೀ ಕಟ್ಟಿನಲ್ಲಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ಗರ್ಭಿಸ ಕೂಡದು; ಆದರೆ ಟಪ್ಪಾಲುಗಾಡಿಗಳೂ ಲೋಹಮಾರ್ಗಗಳೂ ಇರುವಲ್ಲಿ ಪತ್ರಿಕೆಗಳ ಟಪ್ಪಾಲೂ ಬಂಗೀ ಟಪ್ಪಾಲೂ ಒಟ್ಟಿಗೆ ನಡಿಯುವದರಿಂದ, ಅಂಥಾ ಕಡೆಯಲ್ಲಿ ಪತ್ರಿಕೆಗಳನ್ನು ಬಂಗೀ ಕಟ್ಟಿನಲ್ಲಿ ಗರ್ಭಿಸಿ ಕಳುಹಿಸ ಕೂಡದು.

ಬಂಗೀ ಕಟ್ಟುಗಳನ್ನು ಯಾವಾಗಲೂ ಬಟ್ಟೆಯಲ್ಲಿ, ಅಥವಾ ಮೇಣವಸ್ತ್ರದಲ್ಲಿ, ಅಥವಾ ತವರದ ತಗಡಿನಲ್ಲಿ ಕಟ್ಟಿ ತರ ಬೇಕು. ಇದಲ್ಲದೆ ಆ ಗವಸಣಿಗೆ ಘಟ್ಟಿ ಮಾಡುವದಕ್ಕೆ ಹೊಲಿದ ಹೊಲಿಗೆಯ ಮೇಲೆ ಮೂರು ಇಂಚು ಮೀರದ ದೂರ ದೂರದಲ್ಲಿ (ನಡಿಯುವ ನಾಣ್ಯದಿಂದಲ್ಲಾ) ಯಾವದಾದರೂ ಮುದ್ರೆಯಿಂದ ಸ್ಪಷ್ಟವಾದ ಅಂಕಿತವನ್ನು ಹಾಕ ತಕ್ಕದ್ದು.

ಬಂಗೀ ಟಪ್ಪಾಲಿಗೆ ಕಟ್ಟುಗಳನ್ನು ತೆಕ್ಕೊಳ್ಳುವ ಸಮಯವು, ಆದಿತ್ಯವಾರ ಹೊರ್ತು, ಜಿಲ್ಲೆಗಳಲ್ಲಿ ಪ್ರತಿ ದಿನ ಮಧ್ಯಾನ್ಹದ ಮುಂಚೆ ೧೦ ಘಂಟೆಯಿಂದ ಮಧ್ಯಾನ್ಹದ ಮೇಲೆ ೪ ಘಂಟೆ ವರೆಗೆ, ರಾಜಧಾನಿಯಲ್ಲಿ ಮಧ್ಯಾನ್ಹದ ಮುಂಚೆ ೧೦ ಘಂಟೆಯಿಂದ ಮಧ್ಯಾನ್ಹದ ಮೇಲೆ ೫ ಘಂಟೆ ವರೆಗೆ ಟಪ್ಪಾಲುಕಟ್ಟೆಗೆ ಮುಂಚೆಯೇ ಬರದು ತಂದ ರಶೀದಿಗಳಿಗೆ ಟಪ್ಪಾಲುಮುದ್ರೆ ಹಾಕಿ ಕೊಡಲಾದೀತು.

ಸಮುದ್ರಮಾರ್ಗವಾಗಿ ಟಪ್ಪಾಲು ಕಳುಹಿಸುವಲ್ಲಿ, ಬಂಗೀ ಕಟ್ಟುಗಳಿಗೆ ೧೦೦ ತೊ

ಲೆಗೆ ೮ ಆಣೆಯ ಪ್ರಕಾರ ಹಡಗದ ದಸ್ತೂರಿಯಾಗಿ ಹೆಚ್ಚಿಗೆ ಕೊಡ ತಕ್ಕದ್ದು. ೧೦೦ ತೊಲೆಯ ಅಂಶಕ್ಕೆ ಸಹಾ ನೂರು ತೊಲೆ ಎಂಬಂತೆ ದಸ್ತೂರಿ ಕೊಡ ತಕ್ಕದ್ದು.

ಈ ದಸ್ತೂರಿ ಸರ್ಕಾರಿ ಹಡಗಗಳು ತೆಕ್ಕೊಂಡು ಹೋಗುವ ಕಟ್ಟುಗಳಿಗೆ ಮಾತ್ರವೆ ನೇಮಕ. ಬೇರೆ ಜನರ ಹಡಗಗಳು ಅಂಥಾ ಒಡವೆಗಳನ್ನು ತೆಕ್ಕೊಂಡು ಹೋಗುವ ಹಂಗಿಗೆ ಒಳಗಾಗಿರುವದಿಲ್ಲ.

೪. ತಿರಿಗಿ ಮೇಲುವಿಳಾಸ ಬರದು ಬೇರೆ ಕಡೆಗೆ ಕಳುಹಿಸುವ ವಿಷಯ.

ಟಪ್ಪಾಲಿನವರ ಮೇಲೆ ಕೆಳಗೆ ಕಾಣಿಸುವ ಸಮಯಗಳಲ್ಲಿ ಅಧಿಕ ಕೆಲಸವೂ ಕಷ್ಟವೂ ಬೀಳುವದರಿಂದ, ಪತ್ರಿಕೆಗಳಿಗೂ ಕಾಗದಗಳಿಗೂ ಪುಸ್ತಕಗಳಿಗೂ ಕಟ್ಟುಗಳಿಗೂ ತಿರಿಗಿ ಮುಂದೆ ಕಳುಹಿಸುವ ದಸ್ತೂರಿ ನೇಮಕವಾಗಿಯದೆ. ಯಾವಾಗ ಅಂದರೆ:

೧. ಪತ್ರಿಕೆ ಮುಂತಾದ್ದನ್ನು, ಮೊದಲು ವಿಳಾಸ ಬರದು ಕಳುಹಿಸಿದ ಠಾಣ್ಯದಲ್ಲಿ ಹೊಂದ ತಕ್ಕ ಜನವು ಇಲ್ಲದಿರುವದರಿಂದ, ಬೇರೊಂದು ಠಾಣ್ಯಕ್ಕೆ ಕಳುಹಿಸ ಬೇಕಾಗುವಾಗ.

೨. ಪತ್ರಿಕೆ ಮುಂತಾದ್ದು ಒಂದು ಟಪ್ಪಾಲುಕಟ್ಟೆಯೊಳಗಿಂದ ದಾಟಿ ಹೋಗುತ್ತಿರುವಷ್ಟರೊಳಗೆ ಒಪ್ಪಿಸಿ ಕೊಡಿಸುವ ಬಗ್ಗೆ, ಆ ಟಪ್ಪಾಲುಕಟ್ಟೆಯಲ್ಲಿ ನಿಲ್ಲಿಸುವಾಗ.

೩. ಮುಂಚೆ ಮೇಲುವಿಳಾಸವಿದ್ದ ಸ್ಥಳದಲ್ಲಿ, ಬೇರೊಂದು ಸ್ಥಳಕ್ಕೆ ಕಳುಹಿಸುವ ಬಗ್ಗೆ ಟಪ್ಪಾಲುಕಟ್ಟೆಯೊಳಗಿಂದ ದಾಟಿ ಹೋಗುತ್ತಿರುವಷ್ಟರೊಳಗೆ ನಿಲ್ಲಿಸುವಾಗ.

ಸರ್ಕಾರಿ ಉದ್ಯೋಗಸ್ಥರು ಉದ್ಯೋಗದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಿರುಗುವ ಸಮಯದಲ್ಲಿ, ಕಾಗದ ಮುಂತಾದ್ದನ್ನು ಖಾಸಗಿಯಲ್ಲಿ ಕಳುಹಿಸಿದರೆ, ಆ ಕಾಗದ ಮುಂತಾದ್ದನ್ನು ಮೇಲೆ ಹೇಳಿದ ಪ್ರಕಾರ ಬೇರೊಂದು ಕಡೆಗೆ ಕಳುಹಿಸಿ ಕೊಡುವ ಪಕ್ಷದಲ್ಲಿ, ಮುಂದೆ ಕಳುಹಿಸುವ ದಸ್ತೂರಿ ಅವರಿಗೂ ತಪ್ಪದು. ಸೋಲ್ಜರರಿಗೆ ವಿಲಾಯತಿಯಿಂದ ಬಂದ ಪತ್ರಿಕೆಗಳಿಗೆ ಮಾತ್ರವೆ ಹೆಚ್ಚಿಗೆ ದಸ್ತೂರಿ ಇಲ್ಲಾ.

೫. ಪತ್ರಿಕೆ, ವರ್ತಮಾನಕಾಗದ, ವಹಿ, ಪುಸ್ತಕಗಳ ರೆಜಿಸ್ತ್ರಿ ವಿಷಯ.

ಪತ್ರಿಕೆಗಳನ್ನೂ ವರ್ತಮಾನಕಾಗದಗಳನ್ನೂ ವಹಿಗಳನ್ನೂ ಪುಸ್ತಕಗಳನ್ನೂ ಸಾಧಾರಣ ಟಪ್ಪಾಲದಸ್ತೂರಿಯ ಹೊರ್ತು, ಬೇರೆ ೪ ಆಣೆ ರುಸುಮು ಕೊಟ್ಟು, ಪ್ರತ್ಯೇಕವಾಗಿ ರೆಜಿಸ್ತ್ರಿ ಮಾಡಿಸ ಬಹುದು; ಆದರೆ ದಸ್ತೂರಿಯನ್ನೂ ರುಸುಮನ್ನೂ ಮುಂದಾಗಿ ಸಲ್ಲಿಸ ಬೇಕು. ಯಾವ ಪತ್ರಿಕೆ, ವರ್ತಮಾನಕಾಗದ, ವಹಿ, ಪುಸ್ತಕವನ್ನಾದರೂ ಹಿಂದುಸ್ಥಾನ ಸರ್ಕಾರಕ್ಕೆ ಒಳಗಾಗಿರುವ ಅಥವಾ ಐಕ್ಯರಾಜ್ಯವೆಂಬ ಇಂಗ್ಲಿಷ ಸಂಸ್ಥಾನದಲ್ಲಿರುವ ಮತ್ತು ಕೊಲೊನಿಸ್ ಎಂಬ ಆಜ್ಞಾಧಿಕಾರದಲ್ಲಿರುವ ದೇಶಗಳಲ್ಲಿರುವ ಯಾವ ಸ್ಥಳಕ್ಕಾದರೂ ರೆಜಿಸ್ತ್ರಿ ಮಾಡಿಸ ಬಹುದು.

ರೆಜಿಸ್ತ್ರಿ ಮಾಡಲಿಕ್ಕೆ ಆಲೋಚಿಸಿದ ಕಾಗದಗಳನ್ನು, ಟಪ್ಪಾಲುಚೀಲ ಮುಚ್ಚುವದಕ್ಕೆ

ನಿಶ್ಚಯಿಸಿ ಇರುವ ಸಮಯದ ಅರ್ಧ ತಾಸಾದರೂ ಮುಂಚೆಯೆ ಟಪ್ಪಾಲುಕಟ್ಟೆಗೆ ತರ ಬೇಕು. ಆ ಸಮಯದ ತರುವಾಯ ತಂದರೆ, ತಡವಾಯಿತು ಎಂಬ ಅರ್ಥವುಳ್ಳ 'ಟೂ ಲೇಟ್' ಎಂಬ ಮುದ್ರೆ ಹಾಕಿ, ಮರುಸರ್ತಿಗೆಂದು ಇಡಲಾದಾವು.

ಪೋಸ್ಟ್‌ಮಾಸ್ತರನಾಗಲಿ ಬೇರೆ ಉದ್ಯೋಗಸ್ಥನಾಗಲಿ, ಪತ್ರಿಕೆಯನ್ನು ರೆಜಿಸ್ತ್ರಿ ಮಾಡಿಸುವವನಿಗೆ ರಶೀದಿ ಕೊಟ್ಟು, ಚೆಕ್ ಬೂಕಿನ ಅತ್ತಕಡೆಯಲ್ಲಿ ಆ ಬಗ್ಗೆ ಪ್ರತಿಯನ್ನು ಇಟ್ಟುಕೊಳ್ಳುವನು. ತಾರೀಕಿನ ಟಪ್ಪಾಲುಮುದ್ರೆಯನ್ನು ರಶೀದಿಗೂ ಪ್ರತಿಗೂ ಹಚ್ಚ ತಕ್ಕದ್ದು.

ರೆಜಿಸ್ತ್ರಿ ಮಾಡಿದ ಪತ್ರಿಕೆಯನ್ನು ಒಪ್ಪಿಸಿ ಕೊಡುವಾಗ, ಟಪ್ಪಾಲಿನವನು ಪತ್ರಿಕೆ ಹೊಂದಿದವನ ದಸ್ಕತನ್ನು ಹಳದಿ ಬಣ್ಣದ ಸುತ್ತುಕಾಗದದಲ್ಲಿ ಹಾಕಿಸಿ ಕೊಳ್ಳ ಬೇಕು; ಅಸಲು ರಶೀದಿಯನ್ನು ಪತ್ರಿಕೆ ಮುಟ್ಟಿಸಿದ ಟಪ್ಪಾಲುಕಟ್ಟೆಯಲ್ಲಿ ಇಟ್ಟು ಕೊಂಡು, ಅದರ ಜೋಡಿನ ರಶೀದಿಯನ್ನು ಆರಂಭದಲ್ಲಿ ಕಳುಹಿಸಿದ ಟಪ್ಪಾಲುಕಟ್ಟೆಗೆ ಅಂದಿನಿಂದ ಮೊದಲನೇ ಟಪ್ಪಾಲು ಹೋಗುವಾಗ ಕಳುಹಿಸಿ ಕೊಡ ತಕ್ಕದ್ದು.

ಟಪ್ಪಾಲು ಆಕ್ಟಿನ ೪೯ನೇ ಕಲಮಿನ ಪ್ರಕಾರ, ಸರ್ಕಾರದವರು ರೆಜಿಸ್ತ್ರಿ ಮಾಡಿದ ಪತ್ರಿಕೆಯ ಭದ್ರತೆಗೆ ಹೊಣೆಯಲ್ಲಾ, ಜವಾಬುದಾರರೂ ಅಲ್ಲಾ; ಆದಾಗ್ಯೂ, ಯಾವ ಉದ್ಯೋಗಸ್ಥನ ಅಜಾಗ್ರತೆಯಿಂದ ಅದು ಕಳದು ಹೋಗುತ್ತದೋ, ಅಥವಾ ಅಪಹಾರವಾಗುತ್ತದೋ, ಅವನಿಂದ ಖಂಡಿತವಾಗಿ ಉದಾಹರಣೆ ಕೇಳ್ಯಾರು, ಮತ್ತು ಆಗುವ ನಷ್ಟ ಅವನಿಂದ ಕೊಡಿಸ ಬಹುದು.

ರೆಜಿಸ್ತ್ರಿ ಮಾಡಿದ ಪಕ್ಷದಲ್ಲಿ ಒಂದು ಟಪ್ಪಾಲುಕಟ್ಟೆಯಿಂದ ಮತ್ತೊಂದಕ್ಕೆ ಹೆಜ್ಜೆ ಹಿಡಿದು ಹೋಗಲಿಕ್ಕೆ ಆಗುವ ಕಾರಣ, ಪತ್ರಿಕೆ ಕಳುಹಿಸುವದು ಅಧಿಕ ಭದ್ರವಾಗುತ್ತದೆ. ಆದ್ದರಿಂದ ರೆಜಿಸ್ತ್ರಿ ಮಾಡಿದ ಒಡವೆಯು, ನಿಬಂಧನೆಯ ಪ್ರಕಾರ ಎಚ್ಚರಿಕೆಯಲ್ಲಿ ಅಸಡ್ಡೆ ಮಾಡುವದರಿಂದ ಕಳದು ಹೋದರೆ, ಅಥವಾ ಅಪಹಾರವಾದರೆ, ಟಪ್ಪಾಲಿನ ಉದ್ಯೋಗಸ್ಥರನ್ನು ಅವರ ಅಸಡ್ಡೆಯ ಫಲವಾಗಿ ಜವಾಬುದಾರರೆಂದು ಮಾಡುವಲ್ಲಿ ಅವರು ಮತ್ತೊಬ್ಬರನ್ನು ದೂರಲಿಕ್ಕೆ ಕಾರಣವಿಲ್ಲ.

ರೆಜಿಸ್ತ್ರಿ ಮಾಡುವದರಿಂದ, ಪತ್ರಿಕೆ ಮುಂತಾದರ ಒಳಗಿರುವ ವಸ್ತುಗಳಿಗೆ ರಶೀದಿ ಕೊಟ್ಟ ಹಾಗೆ ಆಗದಿರುವದರಿಂದಲೂ, ಲಕೋಟೆಯನ್ನು ಟಪ್ಪಾಲುಕಟ್ಟೆಗೆ ಕೊಡುವ ಮುಂಚೆಯೂ ಮತ್ತೆಯೂ, ಹೊಂದುವವನ ಕೈಗೆ ಮುಟ್ಟಿಸಿದ ಮೇಲೆ ಸಹಾ, ಆ ವಸ್ತುಗಳನ್ನು ಅಪಹರಿಸ ಬಹುದಾಗಿರುವದರಿಂದಲೂ, ಬೆಲೆಯುಳ್ಳ ವಸ್ತುಗಳನ್ನು ಗರ್ಭಿತವಾಗಿ ಹೊಂದಲಿಕ್ಕೆ ನಿರೀಕ್ಷಿಸುವವನು, ರಶೀದಿ ಕೊಡುವ ಸಮಯದಲ್ಲಿ, ಟಪ್ಪಾಲಿನವನ ಕಣ್ಣ ಮುಂದೆ ಪತ್ರಿಕೆಯನ್ನು ತೆರೆಯ ತಕ್ಕದ್ದು.

ಹುಂಡಿಗಳೂ ಟಪ್ಪಾಲುಚೀಟುಗಳೂ ಬೇರೆ ಬೆಲೆಯುಳ್ಳ ಒಡವೆಗಳೂ ಇರುವ ಪತ್ರಿಕೆಯನ್ನು ಸಾಧಾರಣವಾಗಿ ರೆಜಿಸ್ತ್ರಿ ಮಾಡಿಸಿ, ದಪ್ಪವಾದ ಲಕೋಟೆಯಲ್ಲಿ ಭದ್ರವಾಗಿ ಮಡಿಚಿ, ಅಥವಾ ಗರ್ಭಿಸಿ, ಯಾವಾಗಲೂ ಅರಗಿನಿಂದ ಮುದ್ರೆ ಹಾಕ ಬೇಕು. ಈ ಪ್ರಕಾರ ಸಾಧ್ಯವಾಗುವಷ್ಟು ಅಪಾಯವಾಗದಂತೆ ಆದೀತು.

ಒಂದು ಪತ್ರಿಕೆಯು, ಹೊಂದ ತಕ್ಕವನಿಗಲ್ಲದೆ, ಯಾರಿಗೂ ಸಾಧಾರಣವಾಗಿ ವಿಶೇಷವಲ್ಲಾ; ಆದರೆ ಬೆಲೆಯುಳ್ಳ ಒಡವೆಗಳು ಗರ್ಭಿಸಿ ಇದ್ದರೆ, ಆ ಸಂಗತಿ ಬೇರೆ. ಟಪ್ಪಾಲುಕಟ್ಟೆ

ಯಲ್ಲಿ ಯಾರ್ಯಾರ ಕೈಯಿಂದ ನಡಿಯುತ್ತದೋ, ಅನೇಕರಾದ ಈ ಜನರಲ್ಲಿ ಆ ಪತ್ರಿಕೆಯಿಂದ ಅಭಿಲಾಷೆಯ ಶೋಧನೆ ಹುಟ್ಟುವದಕ್ಕೆ ಕಾರಣವಾಗುತ್ತದೆ. ಈ ದೆಶೆಯಿಂದ ಅಂಥಾ ಪತ್ರಿಕೆಗಳನ್ನು ರೆಜಿಸ್ತ್ರಿ ಮಾಡುವ ಮುಂಚಿಂತೆ ಒಳ್ಳೇದೆಂದು ತಿಳಿಸಿಯದೆ.

೬. ಸರ್ವರಿಗೆ ಸೂಚನಾಲೋಚನೆಗಳು.

ಟಪ್ಪಾಲಿನವರಿಗೆ ತಮ್ಮಿಂದಾಗುವಷ್ಟು ಆಧಾರ ಕೊಡುವ ಬಗ್ಗೆ ಸರ್ವರು ಕೆಳಗೆ ಬರುವ ಸೂಚನೆಗಳಿಗೂ ಆಲೋಚನೆಗಳಿಗೂ ಲಕ್ಷ್ಯ ಕೊಟ್ಟರೆ ಆದೀತು.

ಎಲ್ಲಾ ಒಡವೆಗಳನ್ನು, ಮುಖ್ಯವಾಗಿ ವರ್ತಮಾನಕಾಗದಗಳಿಗೆ ಅನೇಕ ಸರ್ತಿ ಸಂಭವಿಸುವ ಪ್ರಕಾರ, ಅವು ಅನೇಕವಾಗಿರುವಾಗ್ಯೆ, ಆಗುವಷ್ಟು ಬೇಗ ಟಪ್ಪಾಲಿಗೆ ಕಳುಹಿಸಿರಿ.

ಪತ್ರಿಕೆ ಹೊಂದುವವರ ಹೆಸರುಗಳನ್ನು ಸಂಕ್ಷೇಪಿಸದೆ ಪೂರ್ಣವಾಗಿಯೂ ಸ್ಪಷ್ಟ ಅಕ್ಷರದಿಂದಲೂ ಬರಿಯ ತಕ್ಕದ್ದು.

ಎಲ್ಲಾ ಪತ್ರಿಕೆಗಳನ್ನೂ ವರ್ತಮಾನಕಾಗದಗಳನ್ನೂ ಬೇರೆ ಕಟ್ಟುಗಳನ್ನೂ ಭದ್ರವಾಗಿ ಮಡಚಿ, ಮುದ್ರೆ ಹಾಕ ತಕ್ಕದ್ದು; ಇಲ್ಲದಿದ್ದರೆ, ಅವುಗಳನ್ನು ಅನೇಕ ಸರ್ತಿ ಆಚೆ ಈಚೆ ಹಾಕುತ್ತಿರುವದರಿಂದ, ಅವು ತೆರೆದು ಹೋದಾವು; ಇದಲ್ಲದೆ ಟಪ್ಪಾಲಿಗೆ ತೆಕ್ಕೊಂಡು ಹೋಗುವ ಚಾಕರರು ಅವುಗಳಲ್ಲಿರುವ ಒಡವೆಗಳನ್ನು ಎಬ್ಬಿಸಲಿಕ್ಕೆ ಸಾಕು.

ಟಪ್ಪಾಲಿಗೆ ಕಳುಹಿಸುವ ಸ್ವಲ್ಪ ಕಾಲದ ಮುಂಚೆಯೇ ಚೀಟು ಹಚ್ಚ ತಕ್ಕದ್ದು; ಮತ್ತು ಕಾಗದಗಳಿಗೆ ಹಚ್ಚುವ ಬಗ್ಗೆ ಚೀಟುಗಳನ್ನು ಕ್ರಯಕ್ಕೆ ಕೊಳ್ಳುವದಕ್ಕೆಂದು ಚಾಕರರ ಕೈಯಲ್ಲಿ ಎಂದಿಗೂ ಹಣ ಕೊಡ ಬಾರದು.

ಹಣವನ್ನಾಗಲಿ ಬೇರೆ ಬೆಲೆಯುಳ್ಳ ಒಡವೆಗಳನ್ನಾಗಲಿ ಟಪ್ಪಾಲಿನಲ್ಲಿ ಕಳುಹಿಸುವದಕ್ಕೆ ತಿಳಿದು ತೆಕ್ಕೊಳ್ಳಲಿಕ್ಕಿಲ್ಲಾ; ಆದರೂ ಬೆಂಕ್‌ನೋಟ್ ಎಂಬ ಹುಂಡೀ ಚೀಟುಗಳ ಅರ್ಧವನ್ನು ಕಳುಹಿಸುವದಕ್ಕೆ ನಿಷೇಧ ಇಲ್ಲ. ಅಂಥ ಹುಂಡಿಗಳನ್ನು ಗರ್ಭಿಸುವ ಪತ್ರಗಳು ರೆಜಿಸ್ತ್ರಿ ಮಾಡಿಸದೆ ಕಳುಹಿಸ ಬಾರದು.

ಏನಾದರೂ ವಿಶೇಷ ಒಡವೆಯನ್ನು ಕಳುಹಿಸುವದಾದರೆ, ಆ ಒಡವೆಯನ್ನು ರೆಜಿಸ್ತ್ರಿ ಮಾಡಿಸುವದು ಒಳ್ಳೇದು; ಯಾಕಂದರೆ, ಆ ಪ್ರಕಾರ ಮಾಡುವದರಿಂದ, ಟಪ್ಪಾಲಿನವರು ಅಂಥಾ ಒಡವೆ ತಪ್ಪಿ ಹೋದ ಪಕ್ಷದಲ್ಲಿ ಎಲ್ಲಿ ಕಾಣದೆ ಹೋಯಿತೊ, ಅಲ್ಲಿ ವರೆಗೆ ಹುಡುಕಿ ನೋಡಲಿಕ್ಕೆ ಆದೀತು.

ಬಂಗೀ ಕಟ್ಟುಗಳನ್ನು ಟಪ್ಪಾಲುಕಟ್ಟೆಯ ಪುಸ್ತಕಗಳಲ್ಲಿ ವಿವರವಾಗಿ ಬರದು ಇಡುವದರಿಂದ, ಅವುಗಳನ್ನು ಪ್ರತ್ಯೇಕ ರೆಜಿಸ್ತ್ರಿ ಮಾಡುವದು ಅಗತ್ಯವಲ್ಲಾ.

ಯಾರಾದರೂ ಬೇರೆ ಕಡೆಗೆ ಹೋಗಿ ಉಳಕೊಂಡರೆ, ಅದನ್ನು ಟಪ್ಪಾಲಿನವರಿಗೆ ಯಾವಾಗಲೂ ತಿಳಿಸ ತಕ್ಕದ್ದು.

ಒಂದು ಒಡವೆಯನ್ನು ಕಳುಹಿಸುವವನ ಹೆಸರು ಯಾವಾಗಲೂ ಪೂರ್ಣವಾಗಿ ಬರಿಯುವದು ಒಳ್ಳೇದು; ಯಾಕಂದರೆ ಆ ಒಡವೆ ಹೊಂದ ತಕ್ಕವನು ಸಿಕ್ಕದಿದ್ದ ಪಕ್ಷದಲ್ಲಿ, ಅದನ್ನು ಕಳುಹಿಸಿದವನಿಗೆ ತಿರಿಗಿ ಮುಟ್ಟಿಸುವದು ಸಾಧ್ಯವಾಗುತ್ತದೆ. ಇದಲ್ಲದೆ ಕಳುಹಿಸಿದವ

ನ ಹೆಸರನ್ನು ಕೂಲಂಕುಶವಾಗಿ ಲಕೋಟೆಯಲ್ಲಿ ಹೊರಗೆ ಬರದರೆ, ಹೊಂದ ತಕ್ಕವನು ಶಿಕ್ಕಿದ್ದರೂ ಟಪ್ಪಾಲಿನವರು ಲಕೋಟೆಯನ್ನು ಒಡೆಯದೆ, ಕಳುಹಿಸಿದವನಿಗೆ ಕೂಡಲೆ ತಿರಿಗಿ ಮುಟ್ಟಿಸುವರು.

ಕಳುಹಿಸಿದ ಒಡವೆ ನಷ್ಟವಾದರೆ, ತಪ್ಪಿ ಹೋದರೆ, ಅಥವಾ ಮುಟ್ಟುವದಕ್ಕೆ ತಡವಾದರೆ, ಟಪ್ಪಾಲಿಗೆ ಕೊಟ್ಟ ಸಂಗತಿಯ ವಿದ್ಯಮಾನಗಳ ವಿಷಯದಲ್ಲಿ ಆಗುವಷ್ಟು ವರ್ತಮಾನವನ್ನು ಸ್ಪಷ್ಟ ಮಾತುಗಳಿಂದ ಕೊಡ ತಕ್ಕದ್ದು. ಮತ್ತು ಫಿರ್ಯಾದು ಮಾಡುವವನ ಸ್ವಾಧೀನದಲ್ಲಿ ಇರುವಂಥಾ, ಈ ವಿಷಯದಲ್ಲಿ ಆಧಾರ ಕೊಡುವಂಥಾ ಪತ್ರಗಳನ್ನು ಸಹಾ ಕಳುಹಿಸಿ ಕೊಡ ತಕ್ಕದ್ದು.

ಯಾರಾದರೂ ಬೆಲೆಯುಳ್ಳ ಒಡವೆಗಳನ್ನು ಟಪ್ಪಾಲಿನಲ್ಲಿ ಕಳುಹಿಸುವದಾದರೆ, ಬರುವ ನಷ್ಟಕ್ಕೆ ತಾವೆ ಹೊಣೆ ಎಂಬದನ್ನು ಮನಸ್ಸಿನಲ್ಲಿ ಇಡ ಬೇಕು. ಯಾಕಂದರೆ, ಟಪ್ಪಾಲಿಗೆ ಒಪ್ಪಿಸುವ ಯಾವ ವಸ್ತುವಿನ ವಿಷಯದಲ್ಲಿಯಾದರೂ ನಷ್ಟ ಹಾನಿ ಬಂದರೆ, ಸರ್ಕಾರದವರು ಜವಾಬುದಾರರಲ್ಲಾ.

ಹುಚ್ಚು ನಾಯಿಯು ಕಚ್ಚಿದ ನಿಮಿತ್ತ

ಉಂಟಾಗುವ ಪೀಡೆಗೆ ಈ ಕೆಳಗೆ ಕಾಣಿಸಿದ ಪ್ರಕಾರ ಪರಿಹಾರ ಉಂಟು.

ಒಬ್ಬ ವಿಲಾಯತಿಯ ಪಂಡಿತನು ಈ ಅತಿ ಭಯಂಕರವಾದ ರೋಗದಿಂದ ಪೀಡಿಸಲ್ಪಟ್ಟ ಒಂದು ಸ್ತ್ರೀಗೆ ಔಷಧ ಕೊಡುತ್ತಿರುವಾಗ, ತನ್ನ ಕೈಯಲ್ಲಿರುವ ಒಂದು ಘಾಯಕ್ಕೆ ಅವಳ ಬಾಯಿಯಿಂದ ಬರುವ ನೊರೆಯು ತಾಗಿ, ಆ ರೋಗವು ದೇಹಕ್ಕೆ ಅಂಟಿತು. ಒಂಭತ್ತು ದಿವಸದನಂತರ ಗಂಟ್ಲಿನ ಕೆಳಗೆಯೂ ಕಣ್ಣುಗಳಲ್ಲಿಯೂ ಅತಿ ತೀವ್ರವಾದ ನೋವು ಉಂಟಾಗಿ, ಯಾವ ತರದ ಪಾನಗಳ ಮೇಲಾದರೂ ಅತಿ ಉಪೇಕ್ಷೆ ಹುಟ್ಟಿ, ಬಾಯಿಯಲ್ಲಿ ನೀರು ತುಂಬಿ, ಕಚ್ಚುವಂಥಾ ಅಪೇಕ್ಷೆ ಮೊದಲಾದ ಚಿನ್ಹೆಗಳು ತೋರಿದವು. ಕೂಡಲೆ ಅವನು ಒಂದು ವಾಯುಪರಿಕ್ಷಕ ಯಂತ್ರ ಹತ್ತರ ಇಟ್ಟು, ಅದರಲ್ಲಿ ಘಾಳಿಯ ಉಷ್ಣತೆಯು ೧೧೫ ಅಂಶ ವರೆಗೆ (Fahrenheit ಎಂಬ ಲೆಖ್ಖದ ಪ್ರಕಾರ) ಏರುವ ಪರಿಯಂತರ ಉಬ್ಬೆ ತೆಗದು ಕೊಂಡ ಕೂಡಲೆ, ಈ ಎಲ್ಲಾ ಚಿನ್ಹೆಗಳು ಪರಿಹಾರವಾದವು. ಇದೇ ರೀತಿಯಲ್ಲಿ ಲಂಕ್ಕಿಂತ ಹೆಚ್ಚು ಮಂದಿ ಜನರನ್ನು ಅವನು ಸ್ವಸ್ಥ ಮಾಡಿದನು. ಈ ರೋಗಕ್ಕೆ ಪರಿಹಾರಾರ್ಥವಾಗಿ ಉಬ್ಬೆ ಉಪಯೋಗಿಸಿ ಕೊಂಡರೆ, ಅದರಿಂದ ಉಂಟಾಗುವ ಪ್ರಯೋಜನವು ವಿಶೇಷವಾಗಿರುತ್ತದೆಂದು ಇದರಿಂದ ಸ್ಪಷ್ಟವಾಗುತ್ತದೆ. ಆದ ಕಾರಣ ಯಾರನ್ನಾದರೂ ಹುಚ್ಚು ನಾಯಿ ಕಚ್ಚಿದ ಕೂಡಲೆ, Russian steam bath ಎಂಬ ಉಬ್ಬೆಯನ್ನು ಕೂಡಲೆ ತೆಗದು ಕೊಂಡು, ಅನಂತರ ಮೇಲೆ ಕಾಣಿಸಿದ ಯಂತ್ರದಲ್ಲಿ ಉಷ್ಣತೆಯು (Centigrade ಎಂಬ ಲೆಖ್ಖದ ಪ್ರಕಾರ) ೫೭ ಅಂಶದ ವರೆಗೆ ವೇಗದಿಂದ, ತರುವಾಯ ೬೩ ಅಂಶದ ವರೆಗೆ

ಶಾಂತವಾಗಿ ಏರಿಸುವ ಪರಿಯಂತರ ಉಬ್ಬೆಯನ್ನು ೧ ವಾರದ ವರೆಗೆ ದಿನಾಲು ತೆಗದು ಕೊಳ್ಳುತ್ತಾ ಇರ ಬೇಕು.

ಮತ್ತೊಂದು ಉಪಾಯ.

ಹುಚ್ಚುತನವು ಕಾಣಿಸಿ ಕೊಳ್ಳುವದಕ್ಕೆ ಮುಂಚೆ ಜನರು ಪ್ರಯೋಗಿಸುವಂಥಾದ್ದು:

ಕೆಳಗೆ ಕಾಣಿಸಿರುವ ಜೀನಸುಗಳನ್ನು ಸಂಪಾದಿಸ ಬೇಕು.

ಹಸಿ ಅಕ್ಕಿ	೨	ರೂಪಾಯಿ	ತೂಕ.
ಕರಿ ಉಮ್ಮತದ ಎಲೆಗಳ ರಸ	೧	"	"
ಎಳ್ಳು	೧	"	"
ಶಿಯ್ಯಾಳದ ಕೆನೆ	೧	"	"
ಬೆಲ್ಲ	೧	"	"

ಮೂರು ಕುಡತೆ ತೆಂಗಿನ ಕಾಯಿಯ ನೀರಿನಲ್ಲಿ ಅಕ್ಕಿಯನ್ನೂ ಎಳ್ಳನ್ನೂ ಮೆತ್ತಗಾಗುವ ಪರ್ಯಂತರ ಇಟ್ಟು, ಅನಂತರ ಈ ನೀರಿನಲ್ಲಿ ಈ ನಾಲ್ಕು ಜೀನಸುಗಳನ್ನು (ಅಂದರೆ ಎಳ್ಳು, ಶಿಯ್ಯಾಳದ ಕೆನೆ, ಹಸಿ ಅಕ್ಕಿ ಮತ್ತು ಬೆಲ್ಲ) ಅರದು ತಕ್ಕಷ್ಟು ದಪ್ಪವಾದ ಗಂಜಿ ಮಾಡ ಬೇಕು. ಅತಿ ದಪ್ಪವಾದರೆ ಸ್ವಲ್ಪ ಎಳೆ ನೀರು ಕೂಡಿಸ ಬಹುದು. ಈ ಗಂಜಿಯಲ್ಲಿ, ಪ್ರಾಯಸ್ಥರಿಗಾದರೆ ೧ ರೂಪಾಯಿತೂಕ, ಚಿಕ್ಕವರಿಗಾದರೆ ಅರ್ಧರೂಪಾಯಿತೂಕ, ಕರಿ ಉಮ್ಮತದ ಎಲೆಗಳ ರಸ ಕೂಡಿಸಿ ಕೊಡ ಬೇಕು.

ಈ ಔಷಧವನ್ನು ಬೆಳಿಗ್ಯೆ ನಿರಾಹಾರ ಹೊಟ್ಟೆಯಲ್ಲಿ ತೆಗದು ಕೊಳ್ಳ ಬೇಕು. ಕೆಲವರಲ್ಲಿ ಮದ್ದು ತೆಗದು ಕೊಂಡ ಎರಡು ಮೂರು ತಾಸುಗಳ ಮೇಲೆ ಹುಚ್ಚುತನ ಕಾಣಿಸಿ ಕೊಳ್ಳುವದು; ಕೆಲವರಲ್ಲಿ ೧೦ ಅಥವಾ ೧೨ ತಾಸುಗಳ ಮೇಲೆ ಬರುವದು. ಹುಚ್ಚುತನ ಬರುವದರ ಗುರ್ತು ಏನಂದರೆ: ರೋಗಿಷ್ಠನಿಗೆ ಆಯಾಸವೂ ಬಲಹೀನತ್ವವೂ ಉಂಟಾಗುವದು. ಬಾಯಿಯೂ ಗಂಟ್ಲೂ ಒಣಗಿ ಹೋದರೆ, ಹುಚ್ಚುತನ ಬಹಳ ಸಮೀಪವಿರುವದೆಂದು ನೆನಸ ತಕ್ಕದ್ದು. ಅವನ ಬಾಯಿ ಬಹಳ ಒಣಗಿ ಹೋಗಿಯದೆಂದು ಹೇಳುವಾಗಲೂ, ಸ್ಥಿರ ತಪ್ಪುವಾಗಲೂ, ಅವನ ತೊಡೆಗಳನ್ನೂ ಕಾಲುಗಳನ್ನೂ ಚನ್ನಾಗಿ ಕಟ್ಟಿ, ಕೈಗಳನ್ನು ಬೆನ್ನಿಗೆ ಕಟ್ಟಿ, ಮತ್ತು ಅವನನ್ನು ಒಂದು ಕಂಭಕ್ಕೆ ಕಟ್ಟಿ, ತನ್ನನ್ನಾಗಲಿ ಬೇರೊಬ್ಬರನ್ನಾಗಲಿ ಕಚ್ಚ ಕೂಡದ ಹಾಗೆ ಮಾಡ ಬೇಕು. ಹುಚ್ಚುತನ ಕಾಣ ಬಂದಂದಿನಿಂದ ಅವನ ಹತ್ತರ ಹೋಗಲೂ ಅವನಿಗೆ ತಿನ್ನುವದಕ್ಕೆ ಕೊಡಲೂ ಬಾರದು; ತಾನಾಗಿ ಊಟ ಬೇಕೆಂದು ಕೇಳುವ ಪರ್ಯಂತರ ಏನೂ ಆಹಾರವನ್ನು ಕೊಡ ಬಾರದು.

ತಿನ್ನುವದಕ್ಕೆ ನೀರುಗಂಜಿಯನ್ನೂ ಮಜ್ಜಿಗೆಯನ್ನೂ ಕೊಡ ಬಹುದು.

ಕೆಲವು ಸರ್ತಿ ಹುಚ್ಚುತನ ಬಹಳ ಕಠಿಣವಾಗಿ ೧೨ ಅಥವಾ ೧೫ ತಾಸು ಪರ್ಯಂತರ ಇರುವದು; ಆದಾಗ್ಯು ತಿನ್ನಲಿಕ್ಕೆ ಕೊಡ ಬಾರದು. ಹುಚ್ಚುತನ ಹೆಚ್ಚು ಸಮಯದ ವರೆಗೆ ಇದ್ದರೆ, ರೋಗಿಷ್ಠನನ್ನು ತಂಪಾದ ಸ್ಥಳದಲ್ಲಿ ಇರಿಸ ಬೇಕು. ಅದು ಸಾಲದಾದರೆ ಒಂದೆರಡು ಕುಡತೆ ಮಜ್ಜಿಗೆಯನ್ನು ಒಂದು ಸೌಟು ನೀರುಳ್ಳಿಯ ರಸದಲ್ಲಿ ಕೂಡಿಸಿ ಕೊಡ ಬೇಕು.

ಕೆಲವು ತಿಂಗಳು ಪರ್ಯಂತರ ತಂಪು ಆಹಾರ ತೆಗೆದು ಕೊಂಡು ಪತ್ಯದಲ್ಲಿರ ಬೇಕು. ಅದು ಹ್ಯಾಗಂದರೆ: ಆರು ತಿಂಗಳು ಪರ್ಯಂತರ ಮೀನುಗಳನ್ನೂ ಉಷ್ಣ ತರದ ಮಾಂಸವನ್ನೂ ತಿನ್ನ ಬಾರದು; ४ ಅಥವಾ ೫ ತಿಂಗಳು ವರೆಗೆ ನೀರಿನಲ್ಲಿ ಹೋಗದೆ, ಆಗುವಷ್ಟು ಅದಕ್ಕೆ ಮುಟ್ಟದೆ ಇರ ಬೇಕು; ತಂಪು ನೀರನ್ನು ಕುಡಿಯದೆ ಬಿಸಿ ನೀರು ಮಾತ್ರ ಕುಡಿಯ ಬೇಕು; ಕೈ ಕಾಲು ಸಹಾ ಬಿಸಿ ನೀರಿನಿಂದಲೇ ತೊಳಿಯ ಬೇಕು.

ಕಚ್ಚಿದ ಕೆಲವು ದಿವಸಗಳ ಮೇಲೆ ಈ ಔಷಧ ಕೊಡ ತಕ್ಕದ್ದು. ಹುಚ್ಚುತನ ಬರುವದು ಬಹಳ ಸಮೀಪವಿದ್ದರೆ, ಈ ಔಷಧವು ಹೆಚ್ಚು ಪ್ರಯೋಜನವುಳ್ಳದ್ದಾಗಿ ಹೇಳುತ್ತಾರೆ. ಹುಚ್ಚುತನ ಬರುವದಕ್ಕೆ ಬಹಳ ತಡವಾದರೆ, ಔಷಧವು ಅಷ್ಟು ಪ್ರಯೋಜನದ್ದಲ್ಲಾ.

ಇದು ಪ್ರಖ್ಯಾತಿ ಹೊಂದಿದ ಔಷಧವಾಗಿರುತ್ತದೆ. ಕೆಲವು ದೇಶಸ್ಥರಿಗೆ ಅದು ಗೊತ್ತುಂಟು; ಆದರೆ ಅದನ್ನು ಅವರು ಬಹಳ ಮರೆ ಮಾಡುತ್ತಾರೆ. ಹುಚ್ಚು ನಾಯಿ ಕಚ್ಚಿ, ಈ ಔಷಧ ತೆಗೆದು ಕೊಂಡವರೊಳಗೆ ಒಬ್ಬನಿಗಾದರೂ ಸರಿಯಾದ ಹುಚ್ಚುತನ ವಾಗಲಿಲ್ಲ ಎಂದು ಹೇಳುತ್ತಾರೆ.

ಮನಸ್ಸಾಕ್ಷಿಯನ್ನು ಹ್ಯಾಗೂ ಮರೆ ಪಡಿಸ ಕೂಡುವದಿಲ್ಲ.

ವಿಲಾಯತಿಯಲ್ಲಿ ಹೊಲ್ಲಂದೆಂಬ ದೇಶವಿದೆ. ಇದರದೊಂದು ಪಟ್ಣದೊಳು ಮಹಾ ಐಶ್ವರ್ಯವುಳ್ಳ ಒಬ್ಬ ವಾಣಿಜನು ಇದ್ದನು. ಒಂದಾನೊಂದು ದಿವಸ ಅವನು ಮಾರಾಟಕ್ಕಾಗಿ ಬಹು ಬೆಲೆಯುಳ್ಳ ರತ್ನಾದಿಗಳನ್ನು ಕಟ್ಟಿ ಕೊಂಡು, ಕುದುರೆ ಹತ್ತಿ ಚಾಕರಿಯವನ ಸಮೇತ ಹೊರಟನು. ಅವರಿಬ್ಬರೂ ಏಕಸ್ಥರಾಗಿ ಒಂದು ಗಾಢಾಂಧದ ಕಾನನ ದಾಟುತ್ತಿರುವಲ್ಲಿ ಆ ಚಾಕರನು ಐಶ್ವರ್ಯದ ದುರಾಶೆಯಿಂದ ಮತಿಗೆಟ್ಟು, ಅದನ್ನು ಗೆಲ್ಲಲಿಕ್ಕೆ ದೇವರ ಸಹಾಯ ಬೇಡದೆ, ತನ್ನ ಕೈಯಲ್ಲಿರುವ ಯಜಮಾನನ ಕೈಕೋವಿ ಹಿಡಿದು, ಇವನ ಮೇಲೆ ಸುಟ್ಟು, ದ್ರವ್ಯವೆಲ್ಲಾ ಬಾಚಿ ಕೊಂಡು, ಹೆಣವನ್ನು ಒಂದು ಹಳ್ಳಕ್ಕೆ ಹಾಕಿ ಬಿಟ್ಟು, ಸಮುದ್ರದ ತೀರಕ್ಕೆ ಹೋಗಿ ಹಡಗವೇರಿ, ಇಂಗ್ಲಂದವನ್ನೈದಿ, ಅಲ್ಲಿಯದೊಂದು ಸಣ್ಣ ಪಟ್ಣದಲ್ಲಿ ವಸ್ತಿ ಮಾಡುವವನಾದನು. ತರುವಾಯ ತನ್ನ ಮೇಲೆ ಯಾರೂ ಸಂಶಯಗೊಳ್ಳದ ಹಾಗೆ ಚಿಕ್ಕ ವ್ಯಾಪಾರ ನಡಿಸಲಿಕ್ಕೆ ಹತ್ತಿ, ಚನ್ನಾಗಿ

ಸಾಗಿಸುತ್ತಿರಲು, ಆ ಪಟ್ಣದವರು ಅವನ ಮೇಲೆ ಸಂಬಿಕೆ ಇಟ್ಟು ಮನ್ನಿಸುವವರಾದರು. ದಿನ ಹೋಗುತ್ತಿರಲಾಗಿ ಒಬ್ಬ ಸ್ಥಿತಿವಂತನು ತನ್ನ ಮಗಳನ್ನು ಅವನಿಗೆ ಮದಿವೆ ಮಾಡಿ ಕೊಟ್ಟದ್ದಲ್ಲದೆ ಪಟ್ಣದವರೆಲ್ಲರೂ ಅವನನ್ನು, ತಮ್ಮ ನ್ಯಾಯಾಧಿಪನೆಂತ, ಆರಿಸಿ, ಸರಕಾರದಿಂದ ಸ್ಥಾಪಿಸಿ ಕೊಂಡರು. ದಿನದಿನಕ್ಕೆ ಅವನ ಮಾನ ಹೆಚ್ಚುತ್ತಾ ಇತ್ತು. ಆಗ ಒಬ್ಬಾನೊಬ್ಬ ಚಾಕರನು ತನ್ನ ಯಜಮಾನನನ್ನು ಕೊಂದದ್ದೆಂದು ವ್ಯಾಜ್ಯವು ಅವನ ಮುಂದೆ ಬಂತು. ಅವನ ಸಹಾಯಮಂತ್ರಿಗಳು ಅಂಥ ಅಪರಾಧವನ್ನು ಆ ಚಾಕರನ ಮೇಲೆ ಸ್ಥಿರ ಪಡಿಸಿ, ಮರಣಾಜ್ಞೆಗೈದು, ತಮ್ಮ ಮುಖ್ಯಸ್ಥನ ಅಪ್ಪಣೆ ಕೇಳಲು, ಇವನು ಬಹಳ ಹೊತ್ತು ಸುಮ್ಮನೆ ಕೂತು ಕೊಂಡು, ಮಾತಾಡದೆ, ಫಕ್ಕನೆ ಮುಖ ಕಳೆಗುಂದಿ ಗಡಗಡನೆ ನಡುಗುವವನಾದನು. ಸಹಾಯಮಂತ್ರಿಗಳು, ಒಂದು ರೋಗವು ಅವನಿಗೆ ಹಿಡಿಯಿತೆಂತ, ನೆನಸುವಲ್ಲಿ ಅವನು ಭೀಕರ ಸಂಕಟದಿಂದ ಪೀಡಿತನಾಗಿ, ಕುರ್ಚಿಯಿಂದ ತಟ್ಟನೆ ಎದ್ದು, ಆ ಕೊಲೆಗಾರನಿರುವಲ್ಲಿಗೆ ಹೋಗಿ, ನಿಂತು ಕೂಗಿದ್ದೇನಂದರೆ—ಮಂತ್ರಿಗಳಿರಾ, ದೇವರು ನೀತಿಯುಕ್ತ ನ್ಯಾಯಾಧಿಪನೇ! ಈ ಕೊಲೆಗಾರನಿಗಿಂತ ದೊಡ್ಡ ಪಾತಕಿಯು ನಾನೇ! ತನ್ನ ದುಷ್ಕರ್ಮವನ್ನು ೩೦ ವರುಷವಾದರೂ ಬಚ್ಚಿಟ್ಟು ಕೊಂಡಿದ್ದ ನನ್ನನ್ನು ದೇವರೇ ಈಗ ನಿಮ್ಮ ಮುಂದೆ ನಿಲ್ಲಿಸಿದ್ದಾನೆ! ಹ್ಯಾಗಂದರೆ, ಮಣ್ಣು ತಿನ್ನುವ ಹುಳದ ಹಾಗೆ ಇದ್ದ ನನ್ನನ್ನು ಮೇಲಕ್ಕೆ ಎತ್ತಿ ಸಾಕಿ ಸಲಹಿ ಎಣಿಕೆಯಿಲ್ಲದ ಉಪಕಾರ ಗೈಯುತ್ತಾ ಬಂದಿದ್ದಂಥ ನನ್ನ ಅತ್ಯುತ್ತಮ ಯಜಮಾನನನ್ನು ಕೊಂದ ಮಹಾ ಪಾತಕಕ್ಕೆ ನಾನು ಒಳ ಬಿದ್ದಂಥವನೇ! ಈಗ ನನ್ನ ಮೇಲೆ ಕಾಲ ಬಂದದೆ; ನರಕದ ಭಯವು ನನ್ನ ಮನಸ್ಸಾಕ್ಷಿಯನ್ನು ಪೀಡಿಸುತ್ತದೆ. ನನ್ನ ನ್ಯಾಯ ತೀರಿಸ ಬೇಕು! ನನಗೆ ಮರಣಾಜ್ಞೆ ಮಾಡಿರಿ!—ಈ ಮಾತುಗಳನ್ನು ಕೇಳಿದ ಮಂತ್ರಿಸಭೆಯವರೆಲ್ಲರಿಗೆ ದಿಗಿಲಿಂದ ರೋಮಾಂಚನವಾಯಿತು. ಅವರು ಅವನನ್ನು ಶೆರೆಮನೆಗೆ ಒಯ್ಯ ಹೇಳಿ, ಸೂಕ್ಷ್ಮ ವಿಚಾರಣವೆಸಗಿ, ಹೊಲ್ಲಂದು ದೇಶಕ್ಕೆ ಸಹ ಪತ್ರ ಕಳುಹಿಸಿ ಶೋಧಿಸುವಾಗ ಎಲ್ಲವೂ ಗೊತ್ತಿಗೆ ಬಂತು. ಆದ ಕಾರಣ ತಮ್ಮ ಮುಖ್ಯಸ್ಥನಾಗಿದ್ದ ಮಹಾಪರಾಧಿಯ ತಲೆ ಹೊಯಿಸಿದರು.

ಇದರ ಫಲಿತಾರ್ಥವೇನೆಂದರೆ—ಇಚ್ಛೆಯು ಗರ್ಭ ಧರಿಸಿ ಕೊಂಡು, ಪಾಪವನ್ನು ಹೆರುತ್ತದೆ; ಪಾಪವು ಸಂಪೂರ್ಣವಾದ ಮೇಲೆ ಮರಣವನ್ನು ಹೆರುತ್ತದೆ.

೧೮೭೦ನೇ ವರುಷದ ಗ್ರಹಣಗಳು.

ಈ ವರ್ಷದಲ್ಲಿ ೬ ಗ್ರಹಣಗಳು ಬರುತ್ತವೆ; ಅವುಗಳಲ್ಲಿ ೪ ಸೂರ್ಯಗ್ರಹಣಗಳು, ೨ ಚಂದ್ರಗ್ರಹಣಗಳು. ಹಿಂದುಸ್ಥಾನದಲ್ಲಿ ೨ ಚಂದ್ರಗ್ರಹಣಗಳು ಮಾತ್ರವೆ ಪ್ರತ್ಯಕ್ಷವಾಸುತ್ತವೆ. ಮುಂಚಿನ ಒಂದು ವರ್ಷದಲ್ಲಿ ವಿವರಿಸಿದ ಗ್ರಹಣನಿಯಮವನ್ನು ನಾವು ಈ ವರ್ಷ

ಪರೀಕ್ಷಿಸ ಬಹುದು. ಆ ಪ್ರಮಾಣವೇನಂದರೆ: ಪೂರ್ಣ ಚಂದ್ರಗ್ರಹಣ ಸಂಭವಿಸಿದ ಮೇಲೆ ಬರುವ ಅಮಾವಾಸೆಗೆ ಸೂರ್ಯಗ್ರಹಣವು ಅಪೂರ್ಣವಾಗುತ್ತದೆ; ಮತ್ತು ಒಂದು ಅಪೂರ್ಣ ಸೂರ್ಯಗ್ರಹಣ ಸಂಭವಿಸಿದ ಮೇಲೆ, ಬರುವ ಹುಣ್ಣಿಮೆಗೆ ಚಂದ್ರಗ್ರಹಣವು ಪೂರ್ಣವಾಗುತ್ತದೆ. ಈ ಅನುಕ್ರಮದ ಪ್ರಕಾರ ಈ ವರ್ಷದ ಗ್ರಹಣಗಳು ಬರುತ್ತವೆ. ಜನವರಿ ೧೭ರಲ್ಲಿ ಪೂರ್ಣ ಚಂದ್ರಗ್ರಹಣ; ಜನವರಿ ೩೧ರಲ್ಲಿ ಅಪೂರ್ಣ ಸೂರ್ಯಗ್ರಹಣ; ಜೂನ್ ೨೮ರಲ್ಲಿ ಅಪೂರ್ಣ ಸೂರ್ಯಗ್ರಹಣ; ಜುಲಾಯಿ ೧೩ರಲ್ಲಿ ಪೂರ್ಣ ಚಂದ್ರಗ್ರಹಣ. ಕ್ರಮಾನುಗತವಾಗಿ ಈ ವರ್ಷ ಬರುವ ಗ್ರಹಣಗಳನ್ನು ನೋಡಿ ಕೊಳ್ಳುವದಾದರೆ, ಕಾಲವನ್ನು ಮಂಗಳೂರಿನ ಕಾಲವಾಗಿಯೂ, ರೇಖೆಯನ್ನು ಪರಿಸು ರಾಜಧಾನಿಯ ರೇಖೆಯಾಗಿಯೂ ಎಣಿಸ ತಕ್ಕದ್ದು.

೧. ಜನವರಿ ೧೭ರಲ್ಲಿ ಪೂರ್ಣ ಚಂದ್ರಗ್ರಹಣ, ಹಿಂದುಸ್ಥಾನದಲ್ಲಿ ಪ್ರತ್ಯಕ್ಷ.

ಅರ್ಧ ಛಾಯೆಯಲ್ಲಿ ಚಂದ್ರದ ಪ್ರವೇಶ.	೪	ಘಂಟೆ	೫೬	ನಿಮಿಷ	ಮಧ್ಯಾನ್ಹದ ಮೇಲೆ.
ಭೂಛಾಯೆಯಲ್ಲಿ ಚಂದ್ರ ಪ್ರವೇಶ . .	೫	„	೫೬	„	„
ಪೂರ್ಣ ಗ್ರಾಸದ ಪ್ರಾರಂಭ	೬	„	೫೬	„	ಸಾಯಂಕಾಲ
ಗ್ರಹಣದ ಮಧ್ಯ	೭	„	೪೫	„	„
ಪೂರ್ಣ ಗ್ರಾಸದ ಅಂತ್ಯ	೮	„	೩೪	„	„
ಭೂಛಾಯೆಯೊಳಗಿಂದ ವಿಯೋಗ . .	೯	„	೩೫	„	„
ಅರ್ಧ ಛಾಯೆಯೊಳಗಿಂದ „ . . .	೧೦	„	೩೬	„	„

ಗ್ರಹಣ ಪರಿಮಾಣ: ಚಂದ್ರದ ವ್ಯಾಸವನ್ನು ಏಕವೆಂದು ಎಣಿಸಿದರೆ, ಗ್ರಹಣ ಪರಿಮಾಣವು = ೧·೬೫೪. ಈ ಗ್ರಹಣವು ಪೂರ್ಣಕ್ಕಿಂತ ಅಧಿಕವಾಗಿರುತ್ತದೆ. ಹ್ಯಾಗಂದರೆ, ಚಂದ್ರವು ಭೂಛಾಯೆಯನ್ನು ದಾಟುವಲ್ಲಿ, ಭೂವ್ಯಾಸವು ಚಂದ್ರವ್ಯಾಸಕ್ಕಿಂತ ಮೂರಷ್ಟು ದೊಡ್ಡದಾಗಿರುವದರಿಂದ, ಚಂದ್ರವು ಅಧಿಕ ಕಾಲ, ಅಂದರೆ ೧ ಘಂಟೆ ೩೮ ಮಿನಿಟು ವರೆಗೆ, ಭೂಛಾಯೆಯಲ್ಲಿ ಇರಲಾಗಿ, ಪೂರ್ಣಗ್ರಾಸ ಸಹಾ ಅಷ್ಟೆ ಕಾಲ ಇರುತ್ತದೆ. ಗ್ರಹಣವೆಲ್ಲಾದರ ಕಾಲಗತಿಯು ೩ ಘಂಟೆ ೩೮ ಮಿನಿಟು ಆಗುತ್ತದೆ. ಈ ಗ್ರಹಣವು ಆಸ್ಯ ಖಂಡದಲ್ಲೆಲ್ಲಾ ಪ್ರತ್ಯಕ್ಷ. ಹಿಂದು ದೇಶದ ಪಶ್ಚಿಮ ತೀರನಿವಾಸಿಗಳಿಗೆ ಘಟ್ಟಗಳ ಕಡೆಯಿಂದ ಚಂದ್ರ ಉದಯವಾಗುವಾಗಲೇ, ಚಂದ್ರವು ಭೂಛಾಯೆಯಿಂದ ಆಚ್ಛಾದವಾಗಿರಲಾಗಿ, ಅವರಿಗೆ ಗ್ರಹಣದ ಆರಂಭವು ಕಾಣುವದೆ ಇಲ್ಲ.

೨. ಜನವರಿ ೩೧ರಲ್ಲಿ ಅಪೂರ್ಣ ಸೂರ್ಯಗ್ರಹಣ, ಮಂಗಳೂರಲ್ಲಿ ಅಪ್ರತ್ಯಕ್ಷ.

ಗ್ರಹಣಾರಂಭ: ರೇಖಾಪಶ್ಚಿಮ ೧೪೮° ೨೪′, ಅಕ್ಷದಕ್ಷಿಣ ೬೦° ೩೭′, ೬ ಘಂಟೆ ೪೩ ಮಿನಿಟು, ಸಾಯಂಕಾಲ.

ಗ್ರಹಣದ ಮಹಾಕಾಲ: ರೇಖಾಪೂರ್ವ ೯೭° ೪೦′, ಅಕ್ಷದಕ್ಷಿಣ ೬೯° ೫೮′, ೮ ಘಂಟೆ ೨೫ ಮಿನಿಟು, ಸಾಯಂಕಾಲ.

ಗ್ರಹಣದ ಅಂತ್ಯ: ರೇಖಾಪೂರ್ವ ೩೦° ೩೧′, ಅಕ್ಷೋತ್ತರ ೪೨° ೨೧′, ೧೦ ಘಂಟೆ ೭ ಮಿನಿಟು, ಸಾಯಂಕಾಲ.

ಸೂರ್ಯವ್ಯಾಸವನ್ನು ಏಕವೆಂದು ಎಣಿಸಿದರೆ, ಈ ಗ್ರಹಣದ ಪರಿಮಾಣವು = ೦.೪೮೩, ಅಂದರೆ ೫ ೩/೪ ಅಂಗುಲ.

ಈ ಗ್ರಹಣವು ಹಿಂದು ದೇಶದಲ್ಲಿ ಪ್ರತ್ಯಕ್ಷವಾಗದಿರಲಿಕ್ಕೆ ಎರಡು ಕಾರಣಗಳುಂಟು: ಮೊದಲಾಗಿ, ಚಂದ್ರ ಛಾಯೆಯು ಹೆಚ್ಚಾಗಿ ಭೂಮಿಯ ದಕ್ಷಿಣಾರ್ಧದ ಮೇಲೆ, ದೇಶಗಳಿಲ್ಲದ ದಕ್ಷಿಣ ಧ್ರುವವಲಯದ ಮೇಲೆ ಬೀಳುತ್ತದೆ; ಎರಡನೆ, ಈ ಗ್ರಹಣವು ಹಿಂದು ದೇಶದ ಪಶ್ಚಿಮ ತೀರದಲ್ಲಿ ಸೂರ್ಯ ಅಸ್ತಮಯವಾಗಿ ೧ ತಾಸಿನ ಮೇಲೆ ಸಂಭವಿಸುವ ಕಾರಣ, ಸೂರ್ಯವು ಆಗ್ನೆ ಚಕ್ರವಾಳದ ಬಹಳ ಕೆಳಭಾಗದಲ್ಲಿ ಇರುತ್ತದೆ.

೩. ಜೂನ್ ೨೯ರಲ್ಲಿ ಅಪೂರ್ಣ ಸೂರ್ಯಗ್ರಹಣ, ಮಂಗಳೂರಲ್ಲಿ ಅಪ್ರತ್ಯಕ್ಷ.

ಗ್ರಹಣಾರಂಭ: ರೇಖಾಪೂರ್ವ ೧೪೭° ೩೮', ಅಕ್ಷದಕ್ಷಿಣ ೪೭° ೧೩', ೨ ಘಂಟಿ ೫೨ ಮಿನಿಟು, ಬೆಳಿಗ್ಗೆ.

ಗ್ರಹಣಮಧ್ಯ: ರೇಖಾಪಶ್ಚಿಮ ೧೭೧° ೪೫', ಅಕ್ಷದಕ್ಷಿಣ ೬೬° ೪೪', ೪ ಘಂಟಿ ೪೫ ಮಿನಿಟು, ಬೆಳಿಗ್ಗೆ.

ಗ್ರಹಣಾಂತ್ಯ: ರೇಖಾಪಶ್ಚಿಮ ೧೩೯° ೫೯', ಅಕ್ಷದಕ್ಷಿಣ ೪೨° ೫೯', ೬ ಘಂಟಿ ೩೯ ಮಿನಿಟು, ಬೆಳಿಗ್ಗೆ.

ಪರಿಮಾಣ = ೦.೬೩೫, ಅಂದರೆ ೭ ೩/೪ ಅಂಗುಲ.

ಈ ಗ್ರಹಣಕಾಲದಲ್ಲಿ ಚಂದ್ರಛಾಯೆಯು ಪೂರ್ಣವಾಗಿ ಭೂಮಿಯ ದಕ್ಷಿಣಾರ್ಧದಲ್ಲಿ ಬೀಳುತ್ತದೆ. ಹೀಗಾಗಿ ಗ್ರಹಣವು ನ್ಯೂಸೀಲಂಡ್ ಎಂಬ ನವದ್ವೀಪದಲ್ಲಿಯೂ, ಔಸ್ಟ್ರೇಲ್ಯದ ದಕ್ಷಿಣದಲ್ಲಿಯೂ, ಅದರ ಸುತ್ತಲಿರುವ ದ್ವೀಪಗಳಲ್ಲಿಯೂ ಕಾಣುತ್ತದೆ.

೪. ಜುಲಾಯಿ ೧೩ರಲ್ಲಿ ಪೂರ್ಣ ಚಂದ್ರಗ್ರಹಣ, ಮಂಗಳೂರಲ್ಲಿ ಪ್ರತ್ಯಕ್ಷ.

	ಘಂಟಿ.	ಮಿನಿಟು.	ಬೆಳಿಗ್ಗೆ.
ಅರ್ಧ ಛಾಯೆಯಲ್ಲಿ ಚಂದ್ರದ ಪ್ರವೇಶ . .	೦	೪೫	"
ಭೂಛಾಯೆಯಲ್ಲಿ	೧	೪೩	"
ಪೂರ್ಣ ಗ್ರಾಸದ ಆರಂಭ	೨	೪೩	"
ಗ್ರಹಣ ಮಧ್ಯ	೩	೩೩	"
ಪೂರ್ಣ ಗ್ರಾಸದ ಅಂತ್ಯ	೪	೨೩	"
ಭೂಛಾಯೆಯಿಂದ ವಿಯೋಗ	೫	೨೩	"
ಅರ್ಧ ಛಾಯೆಯಿಂದ ವಿಯೋಗ . . .	೬	೨೧	"

ಪೂರ್ಣ ಗ್ರಾಸವು ೧ ತಾಸು ೪೦ ಮಿನಿಟು ಇರುತ್ತದೆ. ಹಿಂದು ದೇಶದಲ್ಲಿ ಗ್ರಹಣಗತಿಯನ್ನು ಬುಡದಿಂದ ತುದಿ ವರೆಗೆ ನೋಡಲಿಕ್ಕಾಗುವದಿಲ್ಲ. ಮಧ್ಯ ರಾತ್ರಿಯ ಮೇಲೆ ಚಂದ್ರವು ಅರ್ಧಛಾಯೆಯಲ್ಲಿ ಸೇರುತ್ತದೆ. ಅದು ಹಿಂದು ಸಮುದ್ರದ ಮೇಲೆ ನಿಲ್ಲುವಾಗ್ಯೆ, ಭೂಛಾಯೆಯಲ್ಲಿ ಪ್ರವೇಶಿಸುತ್ತದೆ. ಮಂಗಳೂರಿನಲ್ಲಿ ಸೂರ್ಯವು ಮೂಡುವಾಗ್ಯೆ ಚಂದ್ರವು

ಪಶ್ಚಿಮದಲ್ಲಿ ಅರ್ಧ ಗ್ರಹಣ ಹಿಡಿದದ್ದಾಗಿ ಕಂತುತ್ತದೆ. ಆಗ್ಯೆ ಅದು ಭೂಛಾಯೆಯಿಂದ ವಿಯೋಗವಾಗುತ್ತದೆ ಮಾತ್ರ.

೫. ಜುಲಾಯಿ ೨೮ರಲ್ಲಿ ಅಪೂರ್ಣ ಸೂರ್ಯಗ್ರಹಣ, ಮಂಗಳೂರಲ್ಲಿ ಅಪ್ರತ್ಯಕ್ಷ.

ಗ್ರಹಣಾರಂಭ: ರೇಖಾಪಶ್ಚಿಮ ೧೪೧° ೨೦', ಅಕ್ಷೋತ್ತರ ೭೦° ೨೦', ೩ ಘಂಟೆ ೨೧ ಮಿನಿಟು, ಮಧ್ಯಾಹ್ನದ ಮೇಲೆ.

ಗ್ರಹಣ ಮಧ್ಯ: ರೇಖಾಪೂರ್ವ ೧೬೮° ೫೪', ಅಕ್ಷೋತ್ತರ ೬೯° ೨೧', ೪ ಘಂಟೆ ೧ ಮಿನಿಟು, ಮಧ್ಯಾಹ್ನದ ಮೇಲೆ.

ಗ್ರಹಣಾಂತ: ರೇಖಾಪೂರ್ವ ೧೩೨° ೬', ಅಕ್ಷೋತ್ತರ ೬೧° ೨೧', ೪ ಘಂಟೆ ೪೧ ಮಿನಿಟು, ಮಧ್ಯಾಹ್ನದ ಮೇಲೆ.

ಈ ಗ್ರಹಣದ ಪರಿಮಾಣವು=೦.೦೭೬, ಅಂದರೆ ೧ ಅಂಗುಲ ಸಹಾ ಪೂರ್ತಿ ಇಲ್ಲ. ಇದು ಉತ್ತರ ದೇಶಗಳಲ್ಲಿ ಮಾತ್ರವೆ, ಅಂದರೆ ಸಿಬೀರ್ಯದಲ್ಲಿಯೂ ರುಸ್ಯ ಮಹಾರಾಜ್ಯಕ್ಕೆ ಶೇರಿದ ಅಮೇರಿಕ ಭಾಗದಲ್ಲಿಯೂ ಪ್ರತ್ಯಕ್ಷ.

೬. ದಶಂಬರ ೨೨ರಲ್ಲಿ ಪೂರ್ಣ ಸೂರ್ಯಗ್ರಹಣ, ಮಂಗಳೂರಲ್ಲಿ ಅಪ್ರತ್ಯಕ್ಷ.

ಗ್ರಹಣಾರಂಭ: ರೇಖಾಪಶ್ಚಿಮ ೪೮° ೪', ಅಕ್ಷೋತ್ತರ ೩೫° ೩೮', ೩ ಘಂಟೆ ೧೨ ಮಿನಿಟು, ಮಧ್ಯಾಹ್ನದ ಮೇಲೆ.

ಗ್ರಹಣ ಮಧ್ಯ: ರೇಖಾಪಶ್ಚಿಮ ೭° ೨೨', ಅಕ್ಷೋತ್ತರ ೩೬° ೨೮', ೫ ಘಂಟೆ ೨೬ ಮಿನಿಟು, ಮಧ್ಯಾಹ್ನದ ಮೇಲೆ.

ಗ್ರಹಣಾಂತ: ರೇಖಾಪೂರ್ವ ೩೪° ೫೬', ಅಕ್ಷೋತ್ತರ ೨೬° ೪', ೭ ಘಂಟೆ ೪೦ ಮಿನಿಟು, ಸಾಯಂಕಾಲ.

ಕೇಂದ್ರಗ್ರಾಸದ ಗತಿ.

ರೇಖೆಯಿಂದ		ಅಕ್ಷದಿಂದ		ರೇಖೆಯಿಂದ		ಅಕ್ಷದಿಂದ	
೪೬° ೪'	ಪಶ್ಚಿಮ.	೫೬° ೧೨'	ಉತ್ತರ.	೦° ೨೨'	ಪೂರ್ವ.	೩೫° ೨೯'	ಉತ್ತರ.
೩೮° ೩೪'	"	೫೧° ೫೧'	"	೩° ೧೦'	"	೩೫° ೩೧'	"
೩೧° ೨೬'	"	೪೭° ೩೯'	"	೬° ೫೮'	"	೩೫° ೫೫'	"
೨೭° ೯'	"	೪೫° ೧೧'	"	೧೧° ೧೬'	"	೩೬° ೪೯'	"
೨೩° ೫೨'	"	೪೩° ೨೧'	"	೧೬° ೩೫'	"	೩೮° ೨೩'	"
೧೮° ೩೯'	"	೪೦° ೪೧'	"	೧೯° ೫೪'	"	೩೯° ೩೮'	"
೧೪° ೨೫'	"	೩೮° ೪೬'	"	೨೪° ೧೩'	"	೪೧° ೧೮'	"
೧೦° ೪೦'	"	೩೭° ೨೪'	"	೩೧° ೨೨'	"	೪೪° ೩೨'	"
೭° ೧೦'	"	೩೬° ೨೫'	"	೩೮° ೩೬'	"	೪೮° ೭'	"
೩° ೪೭'	"	೩೫° ೪೭'	"				

ಇಲ್ಲಿ ಹೇಳಿರುವ ಅಂಕೆಗಳಿಗನುಸಾರವಾಗಿ ಒಂದು ಒಳ್ಳೆ ಭೂಪಟವನ್ನು ವಿಚಾರಿಸುವದಾದರೆ, ಕೇಂದ್ರಗ್ರಹಣದ ಗೆರೆಯು ಗ್ರೀನ್ಲೆಂಡಿನ ದಕ್ಷಿಣದಲ್ಲಿ ಆರಂಭವಾಗಿ, ಹೆಚ್ಚಾಗಿ ದಕ್ಷಿಣ ಮತ್ತು ಸ್ವಲ್ಪ ಪೂರ್ವ ಕಡೆಗಾಗಿ ಅತಲಂತ ಸಾಗರವನ್ನು ದಾಟಿ, ಸ್ಪೈನ್ಯ ದೇಶದ ದಕ್ಷಿಣಕ್ಕೆ ಮಧ್ಯಸಮುದ್ರಕ್ಕೆ ಬಂದು, ಮೊದಲು ಓರಾನ್ ಎಂಬಲ್ಲಿ ಅಲ್ಜೀರ್ ಮುಟ್ಟಿ, ಅದನ್ನು ಪೂರ್ವ ಕಡೆಗಾಗಿ ದಾಟಿ, ತೂನಿಸ್ ಎಂಬಲ್ಲಿ ಆ ದೇಶವನ್ನು ಬಿಟ್ಟು, ಅಲ್ಲಿಂದ ಮಧ್ಯಸಮುದ್ರವನ್ನು ಉತ್ತರಪೂರ್ವ ಕಡೆಯಾಗಿ ಪ್ರವರ್ತಿಸಿ, ವಿಲಾಯತಿಗೆ ಶೇರಿದ ತುರ್ಕಿಸ್ಥಾನಕ್ಕೆ ಬಂದು, ಕೊನ್ಸ್ತಂತಿನಪುರ ಮುಟ್ಟಿ, ಕಡೆಯಲ್ಲಿ ಕಪ್ಪು ಸಮುದ್ರವನ್ನು ದಾಟಿ, ಅಸೊವ್ ಸಮುದ್ರದ ಪೂರ್ವ ದಿಕ್ಕಿನಲ್ಲಿ ಮುಗಿಯುತ್ತದೆ. ಈ ಗೆರೆಯ ಉತ್ತರದಲ್ಲಿ ಅಂಶದ ೪೮ ಕಲೆಗಳನ್ನೂ, ದಕ್ಷಿಣದಲ್ಲಿ ಅಷ್ಟೇ ಕಲೆಗಳನ್ನೂ ಎಣಿಸಿದರೆ, ಪೂರ್ಣಗ್ರಹಣವು ನಡಿಯುವ ಪ್ರದೇಶವು ನಮಗೆ ಶಿಕ್ಕಿದ ಹಾಗಾಯಿತು. ಈ ಪ್ರದೇಶದ ದಕ್ಷಿಣದಲ್ಲಿ ಗ್ರಹಣವು ಅಪೂರ್ಣವಾಗಿ ಕಾಣುತ್ತದೆ. ಇದಲ್ಲದೆ ಎಷ್ಟಕ್ಕೆ ದಕ್ಷಿಣದಲ್ಲಿರುತ್ತೇವೊ, ಅಷ್ಟಕ್ಕೆ ಗ್ರಹಣವು ಸಣ್ಣದಾಗಿ ಕಾಣುತ್ತದೆ. ದಕ್ಷಿಣ ಪ್ರಾಂತ್ಯರೇಖೆಯು ದಕ್ಷಿಣ ಕಡೆಗಾಗಿ ಅತಲಂತ ಸಾಗರವನ್ನು ಹಾದು, ಬಿಸ್ಕಯ ಸಮುದ್ರಕೊಲ್ಲಿಯ ದಕ್ಷಿಣದಲ್ಲಿ ಅಫ್ರಿಕ ಮುಟ್ಟಿ, ಉತ್ತರಪೂರ್ವ ಕಡೆಗಾಗಿ ಈ ಭೂಖಂಡವನ್ನು ದಾಟಿ, ಅರಬಿಸಮುದ್ರ ಕೊಲ್ಲಿಯಲ್ಲಿ ಮುಗಿಯುತ್ತದೆ. ಈ ಪ್ರಕಾರ ಆಸ್ಯ ಖಂಡದ ಪಶ್ಚಿಮ ಭಾಗದಲ್ಲಿ ಈ ಗ್ರಹಣ ಒಂದಿಷ್ಟು ಕಾಣ ಬರುತ್ತದೆ. ಗ್ರಹಣದ ಉತ್ತರ ಪ್ರಾಂತ್ಯ ರೇಖೆಯು ಬಹಳ ಉತ್ತರ ಕಡೆಗೆ ಉತ್ತರ ಸಮುದ್ರಗಳನ್ನು ಹಾದು ಹೋಗುತ್ತದೆ. ಅಲ್ಲಿ ಮನುಷ್ಯನಿವಾಸಿಗಳು ಇಲ್ಲ.

ವಾಯುವೇಗ.

ವಾಯು ಅಂದರೆ ಘಾಳಿ. ಘಾಳಿ ಬೀಸುತ್ತಿದ್ದರೆ, ಅದು ಇಂತಿಷ್ಟು ಕಾಲದಲ್ಲಿ ಇಂತಿಷ್ಟು ದೂರ ಹೋಗ ಬಹುದೆಂತ ನಿಶ್ಚಯ ಮಾಡ ಬಹುದು. ಇಂಥಾ ವಾಯುಗತಿಗೆ ವಾಯುವೇಗ ಅನ್ನುತ್ತಾರೆ. ವಾಯುವಿನ ವೇಗವು ಎಷ್ಟು ದೊಡ್ಡದಾಗಿರುತ್ತದೊ, ಅಷ್ಟಕ್ಕೆ ಬಲವಾಗಿ ಘಾಳಿಯು ನಮಗೆ ಸ್ಪರ್ಶವಾಗುತ್ತದೆ. ಈ ವೇಗದ ಸಂಖ್ಯೆಯನ್ನು ಸೆಕುಂದಕ್ಕೆ ಇಂತಿಷ್ಟು ಅಡಿ ಎಂಬದಾಗಿ ಲೆಖ್ಖ ಮಾಡುತ್ತಾರೆ. ಘಾಳಿಯು ೧ ಸೆಕುಂದದಲ್ಲಿ ೩ರಿಂದ ೬ ಅಡಿವರೆಗೆ ಗತಿಸಿದರೆ, ಅದು ಮರಗಳಲ್ಲಿರುವ ಎಲೆಗಳನ್ನೂ ಸಣ್ಣ ಕೊಂಬೆಗಳನ್ನೂ ಅಲ್ಲಾಡಿಸುವದು. ಘಾಳಿಯು ಒಂದು ಸೆಕುಂದದಲ್ಲಿ ೧೫, ೨೦ ಅಥವಾ ೩೦ ಅಡಿ ದೂರಕ್ಕೆ ಹರಿದು ಹೋಗುವದಾದರೆ, ಆಗ್ಯೆ ನಾವು ಘಾಳಿ ಚನ್ನಾಗಿ ಬೀಸುತ್ತದೆ ಅನ್ನುತ್ತೇವೆ. ಅಂಥಾ ಘಾಳಿಯು ಶುಮಾರು ಬಲವಾದ ಕೊಂಬೆಗಳನ್ನು ಅಲ್ಲಾಡಿಸುತ್ತದೆ. ವಾಯುವೇಗವು ಸೆಕುಂದಕ್ಕೆ ೪೦ರಿಂದ ೬೦ ಅಡಿಯಷ್ಟಾಗಿದ್ದರೆ, ಅದಕ್ಕೆ ಶುಮಾರಿನ ಬಿರುಘಾಳಿ ಅನ್ನುತ್ತೇವೆ. ಅದು ಶುಮಾರಿನ ಗೆಲ್ಲುಗಳನ್ನು ಮುರಿದು ಬಿಡುವದು. ಘಾಳಿಯು ಸೆಕುಂದಕ್ಕೆ ೬೫ ಅಡಿಗಿಂತ ಹೆಚ್ಚು ಬೀಸಿದರೆ, ೭೦ರಿಂದ ೮೦ ಅಡಿಯಷ್ಟಾದರೆ, ಅದು ಮರಗಳನ್ನು ಬೇರೊಂದಿಗೆ ಕಿತ್ತು ಹಾಕುವದು. ವೇಗವು ಸೆಕುಂದಕ್ಕೆ ೧೦೦ರಿಂದ ೧೫೦ ಅಡಿಯಷ್ಟಾದರೆ, ಅದಕ್ಕೆ ಪ್ರಚಂಡ

ವಾಯು ಅನ್ನ ತಕ್ಕದ್ದು. ಅಂಥಾ ಘಾಳಿಯು ಒಳ್ಳೇ ಮನೆಗಳನ್ನು ಸಹಾ ಕಿತ್ತು ಹಾಕುತ್ತದೆ. ಅದು ೧ ಚಚ್ಚೌಕ ಅಡಿಯಷ್ಟು ಸ್ಥಳದಲ್ಲಿ ೪೦, ೫೦ ರಾತಲು ಭಾರದಷ್ಟು ಬಲದಿಂದ ಬಡಿಯುತ್ತದೆ.

ಪ್ರಚಂಡವಾಯು.

ಪ್ರಚಂಡವಾಯುವಿಗೂ ಮಿಕ್ಕಾದ ಘಾಳಿಗೂ ವೇಗದಿಂದಲೂ ಬಲದಿಂದಲೂ ಮಾತ್ರವಲ್ಲ, ಬೇರೆ ಕಾರಣಗಳಿಂದ ಸಹಾ ಹೆಚ್ಚು ಕಡಿಮೆ ಉಂಟು. ಹ್ಯಾಗಂದರೆ, ಮಿಕ್ಕಾದ ಘಾಳಿಗಳ ಹಾಗೆ ಅದು ಒಂದೇ ಕಡೆಗೆ ಹರಿದು ಹೋಗದೆ, ಸುಳಿಘಾಳಿಯಾಗಿ ಯಾವದಾದರೂ ಒಂದು ಮಧ್ಯದ ಸುತ್ತಲೂ ಚಕ್ರಾಕಾರವಾಗಿ ಮಹಾ ವೇಗದಿಂದ ಬೀಸುತ್ತದೆ. ಬೀದಿಯಲ್ಲಿ ಅಥವಾ ಹೊಲದಲ್ಲಿ ಧೂಳಿ ಎಲೆ ಮುಂತಾದ್ದನ್ನು ಹಾರಿಸಿ ಕೊಂಡು ಹೋಗುವ ಸುಳಿಘಾಳಿಯು ಹ್ಯಾಗೆ ಉಂಟಾಗುತ್ತದೆ ಎಂಬದರ ವಿಚಾರದಿಂದ, ಸಣ್ಣದರಲ್ಲಿ ಪ್ರಚಂಡವಾಯುವಿನ ಸ್ವಭಾವವನ್ನು ತಿಳಕೊಳ್ಳ ಬಹುದು. ಹೆಚ್ಚು ಕಡಿಮೆ ಏನಂದರೆ, ಸಾಧಾರಣ ಸುಳಿಘಾಳಿಯ ವ್ಯಾಸವು ಸಣ್ಣದು, ಪ್ರಚಂಡವಾಯುವಿನ ವ್ಯಾಸವು ನೂರಾರು ಮೈಲು ದೊಡ್ಡದಾಗಿರುತ್ತದೆ. ಪ್ರಚಂಡವಾಯು ಯಾವದಾದರೂ ಒಂದು ಮಧ್ಯದ ಸುತ್ತಲು ತಿರುಗುವದಲ್ಲದೆ, ಅದರಲ್ಲಿ ಮತ್ತೊಂದು ವಿಶೇಷವೇನಂದರೆ, ಆ ಮಧ್ಯವು ಒಂದೆ ಸ್ಥಳದಲ್ಲಿ ನಿಲ್ಲದೆ, ಅದು ಪ್ರವರ್ತಿಸುತ್ತಾ ಇರಲಾಗಿ, ಮಧ್ಯವೂ ಪರಿಧಿಯೂ ಮುಂದೆ ಮುಂದೆ ನಡಿಯುತ್ತಾ ಹೋಗುತ್ತವೆ. ಈ ದ್ವಿವಿಧವಾದ ಗತಿಯು ನಡಿಯುತ್ತಿರುವ ಗಾಡೀ ಚಕ್ರದಂತೆ ಇರುತ್ತದೆ. ಗಾಡಿಯ ಚಕ್ರವು ಅಚ್ಚಿನ ಸುತ್ತಲು ತಿರುಗುತ್ತಿರುವಾಗಲೆ, ಅಚ್ಚು ಗಾಡಿ ಹೋಗುವಲ್ಲಿಗೆ ಸಂಗಡ ಹೋಗುತ್ತದೆ ಹ್ಯಾಗೋ, ಹಾಗೆಯೇ ಪ್ರಚಂಡವಾಯುವೆಂಬ ಮಹಾ ಸುಳಿಘಾಳಿಯು ತನ್ನ ಮಧ್ಯದ ಸುತ್ತಲು ತಿರುಗುತ್ತಿರುವಾಗಲೆ, ವಾಯುಚಕ್ರವು ಮುಂದೆ ಮುಂದೆ ನಡಿಯುತ್ತಿರುತ್ತದೆ. ಪ್ರಚಂಡವಾಯುವಿನ ಚಕ್ರಾಕಾರ ಗತಿಯಲ್ಲಿ ಮತ್ತೊಂದು ವಿಶೇಷವೇನಂದರೆ: ಭೂಮ್ಯಕ್ಷದ ಎರಡು ಕಡೆಯಲ್ಲಿಯೂ ಬಿರುಘಾಳಿಯು ಯಾವಾಗಲೂ ತಪ್ಪಿಲ್ಲದೆ ಸೂರ್ಯದ ಕಡೆಗೆ ತಿರುಗುತ್ತದೆ; ಹೀಗಾಗಲಾಗಿ, ಭೂಮಿಯ ದಕ್ಷಿಣಾರ್ಧದಲ್ಲಿ ಘಡಿಯಾಳಿನ ಮುಳ್ಳುಗಳ ಹಾಗೆ, ಅಂದರೆ ಎಡಕಡೆಯಿಂದ ಬಲಕಡೆಗೆ, ಮತ್ತು ಉತ್ತರಾರ್ಧದಲ್ಲಿ ಘಡಿಯಾಳಿನ ಮುಳ್ಳುಗಳಿಗೆ ಪ್ರತಿಕೂಲವಾಗಿ, ಅಂದರೆ ಬಲಕಡೆಯಿಂದ ಎಡಕಡೆಗೆ ತಿರುಗುತ್ತದೆ.

ಪ್ರಚಂಡವಾಯುವಿನ ಪ್ರವರ್ತಿಸುವ ಗತಿಯು ಸಾಗರಗಳನ್ನು ದಾಟುವ ಅದರ ಮಾರ್ಗವಾಗಿರುತ್ತದೆ. ಭೂಮಿಯ ಉತ್ತರಾರ್ಧದಲ್ಲಿ ಪ್ರಚಂಡವಾಯುಕ್ಷೇತ್ರವು ಪೂರ್ವದಿಂದ ಉತ್ತರ ಪಶ್ಚಿಮಕ್ಕೆ ಪ್ರವರ್ತಿಸುತ್ತದೆ. ಅದರ ಕಾಲವು ಜೂನಿನಿಂದ ನವಂಬರ ವರೆಗೆ. ಪ್ರಚಂಡವಾಯುಗಳು ಉಷ್ಣವಲಯದಲ್ಲಿ, ಭೂಮ್ಯಕ್ಷದ ಆಚೆ ಈಚೆ ಘಾಳಿ ಹರಿಯದ ಸ್ಥಳಗಳೆಂಬ ಅರ್ಥವುಳ್ಳ ವಾಯುನಿಶ್ಚಲನಗಳ ಮೇರೆಯಲ್ಲಿ ಹುಟ್ಟುತ್ತವೆ. ಹಿಂದು ಸಮುದ್ರವು ಜಾವ ತಿಮುರ್ ದ್ವೀಪಗಳಿಂದ ಅಫ್ರಿಕ ಖಂಡದ ಪರ್ಯಂತ ವಿಪರೀತ ಪ್ರಚಂಡವಾಯುಗಳಿಗೆ ಒಳಗಾಗಿರುತ್ತದೆ. ಮೊರಿಶ್ಯ ಬುರ್ಬೋನ್ ದ್ವೀಪಗಳ ಸಮೀಪದಲ್ಲಿ ಈ ಸಮುದ್ರವು ಅಧಿಕಾಧಿಕ ಗಂಡಾಂತರವುಳ್ಳದ್ದು. ಬಂಗಾಳ ಸಮುದ್ರಕೊಲ್ಲಿಯಲ್ಲಿ ಈ ಮಹಾ ಸುಳಿಘಾಳಿಗಳು ಅಂದ

ಮಾನ್ ದ್ವೀಪಗಳ ಹತ್ತಿರದಲ್ಲಿಯೂ ಅರಕಾನ್ ತೀರದ ಹತ್ತಿರದಲ್ಲಿಯೂ ಹುಟ್ಟುತ್ತವೆ. ಅವು ಅಲ್ಲಿಂದ ಪಶ್ಚಿಮಕ್ಕೆ ಚೋಳಮಂಡಲ ತೀರದ ಕಡೆಗೆ ಚಲಿಸಿ, ಇಲ್ಲಿ ಮಹಾ ವೇಗವನ್ನು ಹೊಂದುತ್ತವೆ. ಇಂಥಾ ಮಹಾ ಸುಳಿಘಾಳಿಯು ಅದರ ಮಧ್ಯದಲ್ಲಿಯೂ ಮಧ್ಯದ ಹತ್ತಿರದಲ್ಲಿಯೂ ಹೆಚ್ಚಾಗಿ ಕಂಟಕಕರವಾಗಿರುತ್ತದೆ. ಅಲ್ಲಿ ವಾಯುಕ್ಷೇತ್ರವು ಮಹಾ ವೇಗದಿಂದ ತಿರುಗುತ್ತಿರಲಾಗಿ, ಘಾಳಿಯು ಕ್ಷಣದಲ್ಲಿ ಈಚೆಯಿಂದ ಆಚೆಗೆ ಆಚೆಯಿಂದ ಈಚೆಗೆ ಹರಿಯುವದರಿಂದ, ಸಮುದ್ರದಲ್ಲಿ ಭಯಂಕರವಾದ ತುಫಾನು ಏಳುತ್ತದೆ, ಮತ್ತು ಎಂಥಾ ಘನವಾದ ಹಡಗವಾದರೂ ನಾಶವಾಗುವದೆ ಸರಿ. ಅಂಥಾ ಪ್ರಚಂಡವಾಯುವಿನಿಂದ ಎಷ್ಟು ಗಂಡಾಂತರ ಬರುತ್ತದೆಂಬದನ್ನು ಗ್ರಹಿಸುವದಕ್ಕೆ, ಅದು ಎಂಥಾ ಭಾವದಿಂದ ಒಂದು ಸ್ಥಳದ ಮೇಲೆ ನಡಿಯುತ್ತದೆಂಬದನ್ನು ವಿಚಾರಿಸ ತಕ್ಕದ್ದು. ವಾಯುವು ನೀರಿನ (೨೪) ಇಪ್ಪತ್ತನಾಲ್ಕಷ್ಟು ವೇಗದಿಂದ ಹರಿದರೆ, ಸಮನೆಲದಲ್ಲಿ ಎರಡರ ಭಾವವೂ ಏಕಪ್ರಕಾರವಿರುವದು. ಒಂದು ಗೋಪುರವು ೧೫೦ ಅಡಿ ಎತ್ತರ, ೩೦ ಅಡಿ ಚಚ್ಚೌಕವಾಗಿದ್ದರೆ, ಸೆಕುಂದಕ್ಕೆ ೧೭೦ ಅಡಿ ಹರಿಯುವ ಪ್ರಚಂಡವಾಯುವು ಅಂಥಾ ಗೋಪುರದ ಮೇಲೆ ೯೦ ಲಕ್ಷ ರಾತಲು ಅಂದರೆ, ಹದಿನಾರು ಸಾವಿರಕ್ಕಿಂತ ಹೆಚ್ಚು ಖಂಡಿಯಷ್ಟು ಭಾರದಿಂದ ಬಡಿಯುತ್ತದೆ. ಒಂದು ಮರವು ೫೮ ಅಡಿ ಎತ್ತರ, ೧೦ ಅಡಿ ಘಟ್ಟಿ ಮರ, ೫೦ ಅಡಿ ಅಗಲ ಗೆಲ್ಲುನೆತ್ತಿ ಇರುವಲ್ಲಿ, ಅಂಥಾ ಪ್ರಚಂಡವಾಯುವು ೪೦ ಲಕ್ಷ ರಾತಲು ಭಾರವಾಗಿ ಅದರ ಮೇಲೆ ಬಡಿಯುವದು. ಪ್ರಚಂಡವಾಯುವಿಗೆ ಇಂಥಾ ಬಲವಿರುವದರಿಂದ, ಅದು ಬಹು ಗಾತ್ರವಾದ ಮರಗಳನ್ನು ಕಿತ್ತು ಹಾಕಲಿಕ್ಕೂ ಬುರುಜಿಗಳಿಂದ ೨೪ ರಾತಲು ಮದ್ದಿನ ಫಿರಂಗಿಗಳನ್ನು ಎತ್ತಿ ಹಾಕಲಿಕ್ಕೂ ಶಕ್ತವಾಗಿರುತ್ತದೆಂಬದನ್ನು ತಿಳಿಯ ಬಹುದು.

ಕೆಲವು ಕಾಲದಿಂದಲೆ ಪ್ರಚಂಡವಾಯು ಹರಿಯುವ ನಿಯಮಗಳನ್ನು ವಿಲಾಯತಿಯವರು ತಿಳ ಕೊಂಡಿದ್ದಾರೆ. ಹೀಗಿರಲಾಗಿ ಈ ನಿಯಮಗಳನ್ನು ಕಲಿತಿರುವ ನೌನಾಯಕನು ಲೆಖ್ಖ ಮಾಡಿ, ಪ್ರಚಂಡವಾಯುಕ್ಷೇತ್ರವು ದಾಟಿ ಹೋಗುವ ವರೆಗೆ, ಆಚೆ ಈಚೆ ತಪ್ಪಿಸಿ ಕೊಳ್ಳಲಿಕ್ಕಾಗುತ್ತದೆ. ಪ್ರಚಂಡವಾಯುವು ಸವಿಾಪ ಬಂದರೆ, ಅಂಥಾ ಹಡಗದ ನಾಯಕನು ವಾಯು ಭಾರಮಾನ (ಇಂಗ್ಲಿಷ್ Barometer) ಎಂಬ ಯಂತ್ರದಿಂದಲೂ ವಾಯು ಹರಿಯುವ ದಿಗ್ಗತಿಯಿಂದಲೂ ಅದನ್ನು ತಿಳಿಯ ಬಲ್ಲನು. ಆತನು ಪ್ರಚಂಡವಾಯುವು ಹಡಗವನ್ನು ಹರಕೊಂಡು ಹೋಗದ ಹಾಗೆ, ಆ ವಾಯು ಮಧ್ಯಕ್ಕೆ ನಡಿಸದೆ, ಹೊರಗೆ ತಪ್ಪಿಸ ಬೇಕು. ಪೂರ್ವದಲ್ಲಿ ಮಹಾ ಸುಳಿಘಾಳಿಗಳಲ್ಲಿ ಅನೇಕ ಹಡಗಗಳು ನಾಶವಾದವು; ಆದರೆ ಅವುಗಳ ನಿಯಮವನ್ನು ತಿಳಿದಂದಿನಿಂದ ಆ ಪ್ರಕಾರ ಆಗುವದು ಕಡಿಮೆ ಆಯಿತು. ಹೀಗಿರುವದರಿಂದ ಈಗ ಪ್ರಚಂಡವಾಯುವಿನಿಂದ ಅಳವೆ ರೇವುಗಳಲ್ಲಿಯೂ ಸೀಮೆಗಳಲ್ಲಿಯೂ ಬರುವ ನಷ್ಟ ಹೆಚ್ಚು, ಸಮುದ್ರದಲ್ಲಿ ಹೊರಗೆ ನಷ್ಟ ಬರುವದು ಕಡಿಮೆ. ಹ್ಯಾಗಂದರೆ: ತೀರ ಸವಿಾಪದಲ್ಲಿ ನೌನಾಯಕನು ಸುಲಭವಾಗಿ ತಪ್ಪಿಸಿ ಕೊಳ್ಳಲಿಕ್ಕೆ ಆಗುವದಿಲ್ಲ, ಸಮುದ್ರದಲ್ಲಿ ಅವನ ವಿದ್ಯೆಯು ಪ್ರಯೋಜನಕ್ಕೆ ಬರುತ್ತದೆ. ಆದರೆ ಎಲ್ಲಿ ಇದ್ದರೂ ಎಷ್ಟು ನಿಯಮವನ್ನು ತಿಳಿದರೂ, ದೇವರ ಅನುಗ್ರಹ ಇಲ್ಲದೆ ಬರೆ ಮನುಷ್ಯಪ್ರಯತ್ನವು ವ್ಯರ್ಥ.

ಹಣ ತೂಕ ಅಳತೆಗಳ ಕೋಷ್ಟಕ.

೧. ಹಣಪಟ್ಟಿ.

೧. ಮುಂಚೆ ರೂಢಿ ಇದ್ದ ಎಣಿಕೆ.

೨ ಕಾಣಿ.	೧ ಅರವೀಸ.																
೪	„	೨	„	೧ ವೀಸ.													
೮	„	೪	„	೨	„	೧ ಬೇಳೆ.											
೧೬	„	೮	„	೪	„	೨	„	೧ ಹಾಗ.									
೩೨	„	೧೬	„	೮	„	೪	„	೨	„	೧ ಅಡ್ಡ.							
೬೪	„	೩೨	„	೧೬	„	೮	„	೪	„	೨	„	೧ ಹಣ.					
೩೨೦	„	೧೬೦	„	೮೦	„	೪೦	„	೨೦	„	೧೦	„	೫	„	೧ ಹೊನ್ನು.			
೬೪೦	„	೩೨೦	„	೧೬೦	„	೮೦	„	೪೦	„	೨೦	„	೧೦	„	೨	„	೧ ವರಹ.	

೨. ಮುಂಚೆ ನಡದ ಹಣ.

ಕಾಸು.										
೨	೧ ರುವಿ.									
೪	೨	„	೧ ದುಗ್ಗಾಣಿ.							
೮	೪	„	೨	„	೧ ದುಡ್ಡು.					
೧೦೦	೫೦	„	೨೫	„	೧೨½	„	೧ ಪಾವಲಿ.			
೪೦೦	೨೦೦	„	೧೦೦	„	೫೦	„	೪	„	೧ ರೂಪಾಯಿ.	
೧೬೦೦	೮೦೦	„	೪೦೦	„	೨೦೦	„	೧೬	„	೪	„ ೧ ವರಹ.

೩. ಈಗ ನಡೆಯುವ ಹಣ.

ಪೈ.			
೧೨	೧ ಆಣೆ.		
೧೯೨	೧೬	„	೧ ರೂಪಾಯಿ.

೪. ಇಂಗ್ಲಿಷ್ ಹಣ.

ಫಾರ್ದಿಂಗ್. (f.)					
೪	೧ ಪೆನ್ನಿ. (d.)				
೪೮	೧೨	„	೧ ಶಿಲ್ಲಿಂಗ್. (s.)		
೯೬೦	೨೪೦	„	೨೦	„	೧ ಪೌಂಡ್. (£)

೨. ತೂಕಗಳು.

೧. ಚಿನ್ನ ಬೆಳ್ಳಿಗಳ ತೂಕ.

ವೀಸ.

೪	೧ ಹಾಗ.			
೮	೨ „	೧ ಅಡ್ಡ.		
೧೬	೪ „	೨ „	೧ ಹಣ.	
೧೪೪	೩೬ „	೧೮ „	೧೦ „	೧ ವರಹ.

೩ ವರಹ ೩ ಹಣತೂಕ ಅಂದರೆ -- ೧ ರೂಪಾಯಿತೂಕ; ಆದರೆ ಬಹಳ ತೂಕವುಳ್ಳದ್ದನ್ನು ಒಂದೇ ಸಾರಿ ಕೊಂಡು ಕೊಳ್ಳುವದರಲ್ಲಿಯೂ ಮಾರುವದರಲ್ಲಿಯೂ ೩ ವರಹ ೩ ಹಣತೂಕ ೩ ಹಾಗ ಅಂದರೆ — ೧ ರೂಪಾಯಿತೂಕ ಆಗುವದು.

೨. ಮುಂಚಿನ ತೂಕ.

ವರಹತೂಕ.

೮೦	೧ ಶೇರು.				
೪೮೦	೬ „	೧ ಪಂಚಶೇರು.			
೯೬೦	೧೨ „	೨ „	೧ ಧಡೆ.		
೩೮೪೦	೪೮ „	೮ „	೪ „	೧ ಮಣ.	
೭೬೮೦೦	೯೬೦ „	೧೬೦ „	೮೦ „	೨೦ „	೧ ಖಂಡಿ.

೩. ಬೆಲ್ಲದ ತೂಕ.

ರೂಪಾಯಿತೂಕ.

೨೪	೧ ಶೇರು.		
೯೬೪	೪೦ „	೧ ಮಣ.	
೧೯೨೦೦	೮೦೦ „	೨೦ „	೧ ಖಂಡಿ.

೪. ಸಾಧಾರಣ ತೂಕ.

ಅ. ಶೇರುಲೆಖ್ಖ.

ರೂಪಾಯಿತೂಕ.

೨೪	೧ ಶೇರು.		
೧೧೨೦	೪೬⅔ „	೧ ಮಣ.	
೨೨೪೦೦	೯೩೩⅓ „	೨೦ „	೧ ಖಂಡಿ.

ಇ. ರಾತಲುಲೆಖ್ಖ.

ರೂಪಾಯಿತೂಕ.

೪೦	೧ ರಾತಲು.		
೧೧೨೦	೨೮ „	೧ ಮಣ.	
೨೨೪೦೦	೫೬೦ „	೨೦ „	೧ ಖಂಡಿ.

೫. ಅಂಗ್ಲ ತೂಕ.

ಅಂಗ್ಲ ದೇಶದಲ್ಲಿ ನಡಿಯುವಂಥಾ ಭಾರವಾದ ಜೀನಸುಗಳ ತೂಕ.

ದ್ರಮ್.					
೧೬	೧ ಔನ್ಸ್.				
೨೫೬	೧೬ „	೧ lb. ಪೌಂಡ್ (ಅಂದರೆ ರಾತಲು).			
೭೧೬೮	೪೪೮ „	೨೮ „	೧ qr. ಕ್ವಾರ್ಟರ್ (ಅಂದರೆ ಮಣ).		
೨೮೬೭೨	೧೭೯೨ „	೧೧೨ „	೪ „	೧ cwt. ಹಂಡ್ರಡ್‌ವೇಟ್.	
೫೭೩೪೪೦	೩೫೮೪೦ „	೨೨೪೦ „	೮೦ „	೨೦ „	೧ ಟನ್.

೧೪ ಪೌಂಡುಗಳಿಗೆ ಒಂದು “ಕಲ್ಲು” ಎಂತ ಹೇಳುವದುಂಟು. ಹಿಂದುಸ್ಥಾನದಲ್ಲಿ ೧ ರಾತಲು ೪೦ ರೂಪಾಯಿತೂಕವಾಗಿ ಎಣಿಸುತ್ತಾರೆ, ಮತ್ತು ೨೦ ಮಣ ೧ ಖಂಡಿ ಆಗುತ್ತದೆ.

೧ ಪೌಂಡ್ ಖಾರವಾದ ಜೀನಸುಗಳ ತೂಕ=೭೦೦೦ ಗ್ರೇನ್.

ಔಷಧಕ್ಕೆ.

ಗ್ರೇನ್.				
೨೦	೧ ಸ್ಕ್ರುಪಲ್.			
೬೦	೩ „	೧ ದ್ರಮ್.		
೪೮೦	೨೪ „	೮ „	೧ ಔನ್ಸ್.	
೫೭೬೦	೨೮೮ „	೯೬ „	೧೨ „	೧ ಪೌಂಡ್.

---

೩. ಅಳತೆಗಳು.

೧. ಅಕ್ಕೀ ಅಳತೆ.

ರೂಪಾಯಿತೂಕ.				
೮೦	೧ ಶೇರು.			
೧೧೨೦	೧೪ ”	೧ ಕಳಸೆ.		
೩೩೬೦	೪೨ „	೩ „	೧ ಮುಡಿ.	
೧೪೧೧೨೦	೧೭೬೪ „	೧೨೬ „	೪೨ „	೧ ಕೋರ್ಜಿ.

೨. ಕುಮಟೆಯ ಧಾನ್ಯ ಅಳತೆ.

ರೂಪಾಯಿತೂಕ.			
೨೪	೧ ಶೇರು.		
೧೧೫೨	೪೮ „	೧ ಮಣ.	
೨೩೦೪೦	೯೬೦ „	೨೦ „	೧ ಖಂಡಿ.

೩. ತೆಳುಜೀನಸಿನ ಅಳತೆ.

ರೂಪಾಯಿತೂಕ.

೧೨	೧ ಕುಡುತೆ.				
೨೪	೨ ,,	೧ ಶೇರು.			
೧೧೨	೯ ೧/೩ ,,	೪ ೨/೩ ,,	೧ ಕುತ್ತಿ.		
೪೪೮	೩೭ ೧/೩ ,,	೧೮ ೨/೩ ,,	೪ ,,	೧ ಕಾಲಾಡ.	
೧೧೨೦	೯೩ ೧/೩ ,,	೪೬ ೨/೩ ,,	೧೦ ,,	೨ ೧/೨ ,,	೧ ಮಣ.
೧೧೨೦೦	೯೩೩ ೧/೩ ,,	೪೬೬ ೨/೩ ,,	೧೦೦ ,,	೨೫ ,,	೧೦ ,, ೧ ಖಂಡಿ.

೪. ಉಪ್ಪಿನ ಅಳತೆ.

ಮುಂಚೆ ಮಂಗಳೂರಿನಲ್ಲಿ ನಡೆದಂಥಾದ್ದು.

ರೂಪಾಯಿತೂಕ.

೧೫	೧ ಅಳಕ.			
೧೨೦	೮ ,,	೧ ಪಡಿ.		
೯೬೦	೬೪ ,,	೮ ,,	೧ ಮರಕಾಲು.	
೩೮೪೦೦೦	೨೫೬೦೦ ,,	೩೨೦೦ ,,	೪೦೦ ,,	೧ ಗಾರಸು.

ಈಗ ನಡೆಯುವಂಥಾ ಮುಂಬಾಯಿ ಅಳತೆ.

ರೂಪಾಯಿತೂಕ.

೮೦	೧ ಶೇರು.		
೩೨೦೦	೪೦ ,,	೧ ಮಣ.	
೩೮೪೦೦೦	೪೮೦೦ ,,	೧೨೦ ,,	೧ ಗಾರಸು.

ಸರಕಾರ ಕೋಠಿಗಳಲ್ಲಿ ಉಪ್ಪು ಮಾರುವ ರೀತಿ ಇದೇ. ಆದರೆ ಅಂಗಡಿಗಳಲ್ಲಿ ಉಪ್ಪನ್ನು ಶೇರಿನ ಪ್ರಕಾರ ಮಾರುತ್ತಾರೆ.

೫. ಮರಗಳ ಅಳತೆ.

ವೀಸ.

೧೬	೧ ಅಂಗುಲ.	
೩೮೪	೨೪ ,,	೧ ಗಜ ಯಾನೆ ಕೋಲು.

ಮರದ ಖಂಡಿ ಅಂದರೆ — ೨೪ ಕೋಲು ಉದ್ದವೂ, ೧೨ ಅಂಗುಲ ಅಗಲವೂ, ೧ ಅಂಗುಲ ದಪ್ಪವೂ ಆಗಿರುವಂಥಾದ್ದು. ಆದರೆ ಬೇರೆ ಶೀಮೆಗಳಲ್ಲಿ ಖಂಡಿ ಎರಡಷ್ಟು ದೊಡ್ಡದಾಗಿ, ಉದ್ದದಲ್ಲಿಯೂ ಅಗಲದಲ್ಲಿಯೂ ದಪ್ಪದಲ್ಲಿಯೂ ಒಂದು ಕೋಲಿನ ಪ್ರಮಾಣವುಳ್ಳದ್ದಾಗಿದೆ.

ಮುಂಬಾಯಿಯಲ್ಲಿ ನಡಿಯುವಂಥಾದ್ದು.

ಕಡೆದ ಮರಗಳನ್ನು ಕೋಡಿಯ ಪ್ರಕಾರ ಮಾರುವ ಪದ್ಧತಿ ಉಂಟು.

ಒಂದು ಕೋಡಿ ಅಂದರೆ — ೨೮೦ ಗಜ ಉದ್ದವೂ, ೧೨ ಅಂಗುಲ ಅಗಲವೂ, ೨ ಅಂಗುಲ ದಪ್ಪವೂ ಇರುವಂಥಾದ್ದು.

ಗರಗಸದವರಿಗೆ ೨೮೦ ಗಜ ಉದ್ದವೂ ೧೨ ಅಂಗುಲ ಅಗಲವೂ ಆಗಿರುವ ಕೋಡಿಯ ಪ್ರಕಾರ ಕೂಲಿ ಸಲ್ಲುತ್ತದೆ.

೬. ಉದ್ದದ ಅಳತೆ.

ಇಂಚ್‍ಗಳು. (″)					
೧೨	೧ ಫೂಟ್. (′)				
೩೬	೩ „	೧ ಯಾರ್ಡ್.			
೭೨	೬ „	೨ „	೧ ಫೆದಮ್.		
೧೯೮	೧೬½ „	೫½ „	೨¾ „	೧ ಪೋಲ್.	
೭೯೨೦	೬೬೦ „	೨೨೦ „	೧೧೦ „	೪೦ „	೧ ಫರ್ಲೋಂಗ್.
೬೩೩೬೦	೫೨೮೦ „	೧೭೬೦ „	೮೮೦ „	೩೨೦ „	೮ „ ೧ ಮೈಲ್.

೭. ಚಚ್ಚೌಕ ಅಳತೆ.

ಇಂಚ್‍ಗಳು.					
೧೪೪	೧ ಫೂಟ್.				
೧೨೯೬	೯ „	೧ ಗಜ.			
೬೮೦೧	೬೮ ೧/೧೬ „	೭ ೯/೧೬ „	೧ ಆಣೆ.		
೧೫೬೮೧೬	೧೦೮೯ „	೧೨೧ „	೧೬ „	೧ ಗುಂಟೆ.	
೬೨೭೨೬೪೦	೪೩೫೬೦ „	೪೮೪೦ „	೬೪೦ „	೪೦ „	೧ ಎಕ್ಕರೆ.

೬೪೦ ಎಕ್ಕರೆಗಳು ಅಂದರೆ — ೧ ಚಚ್ಚೌಕ ಮೈಲ್.

೮. ಚಕ್ರದ ಅಳತೆ.

ಸೆಕುಂದ.				
೬೦	೧ ಮಿನಿಟ.			
೩೬೦೦	೬೦ „	೧ ಡಿಗ್ರೀ.		
೩೨೪೦೦೦	೫೪೦೦ „	೯೦ „	೧ ಕ್ವಾಡ್ರೆಂಟ್.	
೧೨೯೬೦೦೦	೨೧೬೦೦ „	೩೬೦ „	೪ „	೧ ಮಂಡಲ.

೯. ಕಾಲಪ್ರಮಾಣ.

೧. ಹಿಂದು ರೀತಿ.	೨. ಇಂಗ್ಲಿಷ್ ರೀತಿ.
೧ ವರುಷಕ್ಕೆ = ೧೨ ತಿಂಗಳು.	೧ ವರುಷಕ್ಕೆ = ೧೨ ತಿಂಗಳು* = ೫೨ ವಾರ = ೩೬೫ ದಿವಸ.
೧ ತಿಂಗಳಿಗೆ = ೩೦ ದಿವಸ.	೧ ದಿವಸಕ್ಕೆ = ೨೪ ತಾಸು.
೧ ದಿವಸಕ್ಕೆ = ೮ ಝಾಮು.	೧ ತಾಸಿಗೆ = ೬೦ ಮಿನಿಟ.
೧ ಝಾಮಕ್ಕೆ = ೭½ ಘಳಿಗೆ.	೧ ಮಿನಿಟಿಗೆ = ೬೦ ಸೆಕುಂದ.
೧ ಘಳಿಗೆಗೆ = ೬೦ ವಿಘಳಿಗೆ.	

*ಕೆಲವು ತಿಂಗಳಿಗೆ ೩೦, ಕೆಲವಕ್ಕೆ ೩೧ ದಿವಸ ಉಂಟು; ೧ ತಿಂಗಳಿಗೆ ೪ ವಾರ ಲೆಖ್ಖಿಸುತ್ತಾರೆ. ೧ ವಾರಕ್ಕೆ ೭ ದಿವಸ ಉಂಟು.

೧೮೭೦ನೇ ವರುಷದಲ್ಲಿ ಬರುವ ಹಬ್ಬಗಳು.

ನಕ್ಷತ್ರಾಕಾರವು (ಅಂದರೆ ಈ * ಚಿನ್ಹೆಯು) ಸುವಾರ್ತಾಪಕ್ಷದವರಿಗೂ ರೋಮಾಯರಿಗೂ ಕೂಡ ಇರುವ ಹಬ್ಬಗಳನ್ನು ತೋರಿಸುತ್ತದೆ; ಕ್ರೂಜಿಯಾಕಾರವು (ಅಂದರೆ ಈ † ಚಿನ್ಹೆಯು) ರೋಮಾಯರಿಗೆ ಪ್ರತ್ಯೇಕವಾಗಿ ಇರುವ ಹಬ್ಬಗಳನ್ನು ತೋರಿಸುತ್ತದೆ.

ಕ್ರೈಸ್ತರ ಹಬ್ಬಗಳು.

CHRISTIAN FESTIVALS.

ಜನವರಿ	೧	*	ನವಸಂವತ್ಸರದ ಹಬ್ಬ (New year's day).
"	೬	*	ಪ್ರತ್ಯಕ್ಷತೆಯ ಹಬ್ಬ (Epiphany).
ಫೆಬ್ರುವರಿ	೨	†	ಮರೀಯಳ ಶುದ್ಧೀಕರಣ.
ಮಾರ್ಚ್	೨	†	ಉಪೋಶ್ಯದ ಮೊದಲನೇ ದಿನ.
"	೨೫	†	ಕ್ರಿಸ್ತನ ತಾಯಿ ಮರೀಯಳಿಗಾದ ಶುಭವಾರ್ತೆ.
ಎಪ್ರಿಲ್	೮	†	ಮರೀಯಳ ಸಪ್ತವ್ಯಥೆಗಳ ಹಬ್ಬ.
"	೧೦	†	ಪಾಮ್ ಸಂಡೆ ಹಬ್ಬ.
"	೧೪	†	ಮುಂಡಿ ಥರ್ಸ್‌ಡೆ ಹಬ್ಬ.
"	೧೫	*	ಕ್ರಿಸ್ತನ ಮರಣದಿನ (Good Friday).
"	೧೬	†	ಪರಿಶುದ್ಧ ಶನಿವಾರ.
"	೧೭	*	ಪಸ್ಕದ ಹಬ್ಬ (Easter-day).
"	೧೮	†	ಪಸ್ಕದ ಮೇಲಿನ ಸೋಮವಾರ.
"	೧೯	†	ಪಸ್ಕದ ಮೇಲಿನ ಮಂಗಳವಾರ.
ಮೇ	೨೬	*	ದಿವಾರೋಹಣದ ಹಬ್ಬ (Ascension day).
ಜೂನ್	೫	*	ಪಂಚಾಶತ್ತಿನ ಹಬ್ಬ (Pentecost).
"	೧೨	*	ತ್ರಿಯೇಕತ್ವದ ಹಬ್ಬ (Trinity).
"	೧೬	†	ಕೊರ್ಪುಸ್ ಕ್ರಿಸ್ತೀ ಹಬ್ಬ.
ಜೂನ್	೨೪	†	ಸ್ನಾನಿಕನಾದ ಯೋಹಾನನ ಜನ್ಮದಿನ.
"	೨೯	†	ಪೇತ್ರನ ಮತ್ತು ಪೌಲನ ದಿನ.
ಜುಲಾಯಿ	೨	†	ಮರೀಯಳ ಸಂದರ್ಶನ.
"	೧೬	†	ಕಾರ್ಮೆಲ ಬೆಟ್ಟದ ಮರೀಯಳ ಹಬ್ಬ.
ಅಗೊಸ್ತು	೨	†	ಪೋರ್ಟಿಯುಂಕುಲ ಹಬ್ಬ.
"	೧೦	†	ರಕ್ತಸಾಕ್ಷಿಯಾದ ಲಾರೆನ್ಸನ ದಿನ.
"	೧೫	†	ಮರೀಯಳ ಸ್ವರ್ಗಾರೋಹಣ.
ಸಪ್ತಂಬರ	೮	†	ಮರೀಯಳ ಜನ್ಮದಿನ.
ಒಕ್ತೋಬರ	೪	†	ಸನ್ ಫ್ರಾನ್ಸಿಸ್ ದೆ ಅಸ್ಸೀಸ್.
ನವಂಬರ	೧	†	ಸಮಸ್ತ ಪರಿಶುದ್ಧರ ದಿನ.
"	೨	†	ಸಮಸ್ತ ಪ್ರಾಣಗಳ ದಿನ.
"	೨೭	*	ಕ್ರಿಸ್ತನ ಆಗಮ (Advent).
ದಶಂಬರ	೩	†	ಸನ್ ಫ್ರಾನ್ಸಿಸ್ ಕ್ಸವೀರ್.
"	೮	†	ಮರೀಯಳ ಶುದ್ಧೋತ್ಪತ್ತಿ.
"	೨೧	†	ಅಪೊಸ್ತಲನಾದ ತೋಮನ ದಿನ.
"	೨೫	*	ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ).
"	೨೬	†	ರಕ್ತಸಾಕ್ಷಿಯಾದ ಸ್ತೆಫನನ ದಿನ.

ಮಹಮ್ಮದೀ ಹಬ್ಬಗಳು.

MAHOMMEDAN HOLIDAYS.

ಜನವರಿ	೩	ರಮ್‌ಜಾನ್ ತಿಂಗಳ ಕಡೇ ದಿನ.
ಫೆಬ್ರುವರಿ	೩	ಜಿಲ್ಹಾಯದ್.

ಮಾರ್ಚ್	೪	ಜಿಲ್‌ಹಜ್.
ಎಪ್ರಿಲ್	೩	ಮೊಹರಮ್ ಹಬ್ಬದ ಆರಂಭ.
„	೧೨	ಮೊಹರಮ್ ಹಬ್ಬದ ಕಡೇ ದಿನ.
ಮೇ	೩	ಸಫರ್ ಹಬ್ಬ.
„	೨೫	ಆಖರ್ ಚಾರ್‌ಶುಂಬ.
ಜೂನ್	೧	ರಬಿಲಾವಲ್.
ಜುಲಾಯಿ	೧	ರಬಿಲಾಖರ್.
„	೧೪	ಶಬೀಬರಾತ್.
„	೩೦	ಜಮಾದಿಲಾವಲ್.
ಅಗೊಸ್ತು	೨೯	ಜಮಾದಿಲಾಖರ್.
ಸಪ್ತಂಬರ	೨೭	ರಜಬ್.
ಒಕ್ತೊಬರ	೨೬	ಶಾಬಾನ್.
ನವಂಬರ	೨೫	ರಮ್‌ಜಾನ್ ಹಬ್ಬದ ಆರಂಭ.
ದಶಂಬರ	೨೩	ರಮ್‌ಜಾನ್ ಹಬ್ಬದ ಕಡೇ ದಿನ.

ಹಿಂದು ಹಬ್ಬಗಳು.

HINDOO HOLIDAYS.

ಜನವರಿ	೧೨	ಮಕರಸಂಕ್ರಮಣ, ಉತ್ತರಾಯನ.
ಫೆಬ್ರುವರಿ	೮	ರಥಸಪ್ತಮಿ.
„	೨೮	ಶಿವರಾತ್ರಿ.
ಮಾರ್ಚ್	೧೭	ಹೋಳಿಹಬ್ಬ, ಕಾಮದಹನ.
„	೧೮	ಹೋಳಿಹಬ್ಬದ ಕಡೇ ದಿನ.
ಎಪ್ರಿಲ್	೨	ಚಾಂದ್ರಮಾನ ಯುಗಾದಿ.
„	೧೦	ರಾಮಜಯಂತಿ.
„	೧೨	ಸೌರಮಾನ ಯುಗಾದಿ.
ಮೇ	೩	ಅಕ್ಷತೃತೀಯ, ಪರಶುರಾಮಜಯಂತಿ.
ಜುಲಾಯಿ	೯	ಪ್ರಥಮೇಕಾದಶಿ.
„	೧೦	ಪ್ರಥಮ ದ್ವಾದಶಿ.
„	೧೪	ಕರ್ಕಾಟಕ ಸಂಕ್ರಮಣ, ದಕ್ಷಿಣಾಯನ.
ಅಗೊಸ್ತು	೨	ನಾಗರಪಂಚಮಿ.
„	„	ಸಾಮವೇದಿಗಳಿಗೆ ಉಪಾಕರ್ಮ.
„	೧೧	ಋಗ್ವೇದಿಗಳಿಗೂ ಯಜುರ್ವೇದಿಗಳಿಗೂ ಉಪಾಕರ್ಮ, ಸಮುದ್ರಪೂಜೆ.
„	೧೮	ಕೃಷ್ಣಾಷ್ಟಮಿ.
ಅಗೊಸ್ತು	೨೯	ಗೌರಿತೃತೀಯ.
„	೩೦	ವಿನಾಯಕಚತುರ್ಥಿ.
„	೩೧	ಋಷಿಪಂಚಮಿ.
ಸಪ್ತಂಬರ	೩	ಎಳೇ ಅಷ್ಟಮಿ.
„	೮	ಅನಂತಚತುರ್ದಶಿ.
„	೨೪	ಮಹಾಲಯ ಅಮಾವಾಸೆ ಶ್ರಾದ್ಧ ದಿವಸ.
„	೨೫	ಸ್ನಾನ ಪುಣ್ಯಕಾಲ, ನವರಾತ್ರಿ ಆರಂಭ.
ಒಕ್ತೋಬರ	೧	ಮೂಲನಕ್ಷತ್ರ, ಶಾರದಾ ಪೂಜೆ.
„	೨	ಮಹಾನವಮಿ.
„	೩	ವಿಜಯದಶಮಿ, ಶಮಿಪೂಜೆ.
„	೪	ವಿದ್ಯಾದಶಮಿ.
„	೧೫	ಕಾವೇರಿಸಂಕ್ರಮಣ, ದಂಪತಿಪೂಜೆ.
„	೨೩	ನರಕಚತುರ್ದಶಿ, ದೀಪಾವಳಿ ಪ್ರಾರಂಭ.
„	೨೫	ಬಲಿಪಾಡ್ಯ, ಗೋಪೂಜೆ.
ನವಂಬರ	೫	ಉತ್ಥಾನದ್ವಾದಶಿ, ತುಲಸೀ ಪೂಜೆ.
„	೨೮	ಸುಬ್ರಮಣ್ಯ ಷಷ್ಟಿ.
ದಶಂಬರ	೪	ಮುಕ್ಕೋಟಿ ದ್ವಾದಶಿ.

೧೮೭೦ನೇ ವರುಷದಲ್ಲಿ ಆರಂಭವಾಗುವ ಬೇರೆ ಬೇರೆ ಶಕಗಳು.

HINDOO AND MAHOMMEDAN ERAS.

ಎಪ್ರಿಲ್	೨	ಪ್ರಮೋದೂತವೆಂಬ ಚಾಂದ್ರಮಾನ ಸಂವತ್ಸರ, ೧೭೯೨ನೇ ಶಾಲಿವಾಹನಶಕದ ಆರಂಭವು.
ಎಪ್ರಿಲ್	೩	ಮಹಮ್ಮದೀ ಹಿಜರೀ ೧೨೮೭ನೇ ವರುಷದಾರಂಭವು.
ಜುಲೈ	೧	ಫಸಲಿ ಎಂಬ ೧೨೮೦ನೇ ವರುಷದಾರಂಭವು.
ಅಗೊಸ್ತು	೧೬	೧೦೪೬ನೇ ಕೊಲ್ಲಮ್ ವರುಷದಾರಂಭವು.
ಒಕ್ತೋಬರ	೨೫	೧೯೨೭ನೇ (ಗುಜ್ಜರ) ವಿಕ್ರಮಾದಿತ್ಯಶಕದಾರಂಭವು.

೨೮, ೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ.

ತಿಂಗಳಿನ ಸಂಬಳ.	೨೮ ದಿವಸಗಳ ತಿಂಗಳು.			೨೯ ದಿವಸಗಳ ತಿಂಗಳು.			೩೦ ದಿವಸಗಳ ತಿಂಗಳು.			೩೧ ದಿವಸಗಳ ತಿಂಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೭	೦	೦	೭	೦	೦	೬	೦	೦	೬
೨	೦	೧	೨	೦	೧	೧	೦	೧	೧	೦	೧	೦
೩	೦	೧	೯	೦	೧	೮	೦	೧	೭	೦	೧	೭
೪	೦	೨	೩	೦	೨	೨	೦	೨	೨	೦	೨	೧
೫	೦	೨	೧೦	೦	೨	೯	೦	೨	೮	೦	೨	೭
೬	೦	೩	೫	೦	೩	೪	೦	೩	೨	೦	೩	೧
೭	೦	೪	೦	೦	೩	೧೦	೦	೩	೯	೦	೩	೭
೮	೦	೪	೭	೦	೪	೫	೦	೪	೩	೦	೪	೨
೯	೦	೫	೨	೦	೫	೦	೦	೪	೧೦	೦	೪	೮
೧೦	೦	೫	೯	೦	೫	೬	೦	೫	೪	೦	೫	೨
೧೧	೦	೬	೩	೦	೬	೧	೦	೫	೧೦	೦	೫	೮
೧೨	೦	೬	೧೦	೦	೬	೭	೦	೬	೫	೦	೬	೨
೧೩	೦	೭	೫	೦	೭	೨	೦	೬	೧೧	೦	೬	೯
೧೪	೦	೮	೦	೦	೭	೯	೦	೭	೬	೦	೭	೩
೧೫	೦	೮	೭	೦	೮	೩	೦	೮	೦	೦	೭	೯
೧೬	೦	೯	೨	೦	೮	೧೦	೦	೮	೬	೦	೮	೩
೧೭	೦	೯	೯	೦	೯	೫	೦	೯	೧	೦	೮	೯
೧೮	೦	೧೦	೩	೦	೯	೧೧	೦	೯	೭	೦	೯	೩
೧೯	೦	೧೦	೧೦	೦	೧೦	೬	೦	೧೦	೨	೦	೯	೧೦
೨೦	೦	೧೧	೫	೦	೧೧	೦	೦	೧೦	೮	೦	೧೦	೪
೨೧	೦	೧೨	೦	೦	೧೧	೭	೦	೧೧	೨	೦	೧೦	೧೦
೨೨	೦	೧೨	೭	೦	೧೨	೨	೦	೧೧	೯	೦	೧೧	೪
೨೩	೦	೧೩	೨	೦	೧೨	೮	೦	೧೨	೩	೦	೧೧	೧೦
೨೪	೦	೧೩	೯	೦	೧೩	೩	೦	೧೨	೧೦	೦	೧೨	೫
೨೫	೦	೧೪	೩	೦	೧೩	೧೦	೦	೧೩	೪	೦	೧೨	೧೧
೨೬	೦	೧೪	೧೦	೦	೧೪	೪	೦	೧೩	೧೦	೦	೧೩	೫
೨೭	೦	೧೫	೫	೦	೧೪	೧೧	೦	೧೪	೫	೦	೧೩	೧೧
೨೮	೧	೦	೦	೦	೧೫	೫	೦	೧೪	೧೧	೦	೧೪	೫
೨೯	೧	೦	೭	೧	೦	೦	೦	೧೫	೬	೦	೧೫	೦
೩೦	೧	೧	೨	೧	೦	೭	೧	೦	೦	೦	೧೫	೬
೩೧	೧	೧	೯	೧	೧	೧	೧	೦	೬	೧	೦	೦
೩೨	೧	೨	೩	೧	೧	೮	೧	೧	೧	೧	೦	೬
೩೩	೧	೨	೧೦	೧	೨	೨	೧	೧	೭	೧	೧	೦
೩೪	೧	೩	೫	೧	೨	೯	೧	೨	೨	೧	೧	೭
೩೫	೧	೪	೦	೧	೩	೪	೧	೨	೮	೧	೨	೧
೩೬	೧	೪	೭	೧	೩	೧೦	೧	೩	೨	೧	೨	೭
೩೭	೧	೫	೨	೧	೪	೫	೧	೩	೯	೧	೩	೧
೩೮	೧	೫	೯	೧	೫	೦	೧	೪	೩	೧	೩	೭
೩೯	೧	೬	೩	೧	೫	೬	೧	೪	೧೦	೧	೪	೧
೪೦	೧	೬	೧೦	೧	೬	೧	೧	೫	೪	೧	೪	೭
೪೧	೧	೭	೫	೧	೬	೭	೧	೫	೧೦	೧	೫	೨
೪೨	೧	೮	೦	೧	೭	೨	೧	೬	೫	೧	೫	೮
೪೩	೧	೮	೭	೧	೭	೯	೧	೬	೧೧	೧	೬	೮
೪೪	೧	೯	೨	೧	೮	೩	೧	೭	೬	೧	೬	೯
೪೫	೧	೯	೯	೧	೮	೧೦	೧	೮	೦	೧	೭	೮
೪೬	೧	೧೦	೩	೧	೯	೫	೧	೮	೬	೧	೭	೯
೪೭	೧	೧೦	೧೦	೧	೯	೧೧	೧	೯	೧	೧	೮	೩
೪೮	೧	೧೧	೫	೧	೧೦	೬	೧	೯	೭	೧	೮	೯
೪೯	೧	೧೨	೦	೧	೧೧	೦	೧	೧೦	೨	೧	೯	೩
೫೦	೧	೧೨	೭	೧	೧೧	೭	೧	೧೦	೮	೧	೯	೧೦
೧೦೦	೩	೯	೨	೩	೭	೨	೩	೫	೪	೩	೩	೭
೨೦೦	೭	೨	೩	೬	೧೪	೪	೬	೧೦	೮	೬	೭	೩
೩೦೦	೧೦	೧೧	೫	೧೦	೫	೬	೧೦	೦	೦	೯	೧೦	೧೦
೪೦೦	೧೪	೪	೭	೧೩	೧೨	೮	೧೩	೫	೪	೧೨	೧೪	೫
೫೦೦	೧೭	೧೩	೯	೧೭	೩	೧೦	೧೬	೧೦	೩	೧೬	೨	೧

3.

The Canarese Almanac 1870.

ಕಂನಡ

ಪಂಚಾಂಗವು.

☛ ಕ್ರಿಸ್ತಶಕ ೧೮೭೦. ☚

ಹಿಂದು:

ಶಾಲಿವಾಹನ ಶಕ ೧೭೯೧ — ೧೭೯೨.

ಶುಕ್ಲ ಸಂವತ್ಸರದ ಅಂತ್ಯ, ಪ್ರಮೋದೂತ ಸಂವತ್ಸರದ ಆದಿ.

ವಿಕ್ರಮಾದಿತ್ಯನ ಶಕ ೧೯೨೬ — ೧೯೨೭.

ಕೊಲ್ಲ ೧೦೪೫ — ೧೦೪೬.

ಮಹಮ್ಮದಿ:

ಹಿಜರಿ ೧೨೮೬ — ೧೨೮೭.

ಫಸಲಿ ೧೨೭೯ — ೧೨೮೦.

MANGALORE:

PRINTED BY STOLZ & REUTHER, BASEL MISSION PRESS.